ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜುಲೈ 2020 ಬೆಲೆ ರೂ. 5/-



ತಿರುಮಲೆಯಲ್ಲಿ
ಸ್ವಾಮಿಯವರ
ಆಣಿವರ ಆಸ್ಥಾನ
16-07-2020

## ಶ್ರೀ ಚಕ್ರತ್ತಾಳ್ವಾರ್ ಜಯಂತಿ
## 21-07-2020




ಪ್ರತಿಭಟಶ್ರೇಣಿಭೀಷಣ
ವರಗುಣಸ್ತೋಮಭೂಷಣ
ಜನಿಭಯಸ್ಥಾನತಾರಣ
ಜಗದವಸ್ಥಾನಕಾರಣ ।

ನಿಖಿಲ ದುಷ್ಕರ್ಮ ಕರ್ಶನ!
ನಿಗಮ ಸದ್ಧರ್ಮ ದರ್ಶನ!
ಜಯ ಜಯ ಶ್ರೀ ಸುದರ್ಶನ
ಜಯ ಜಯ ಶ್ರೀ ಸುದರ್ಶನ ॥

(ಶ್ರೀ ವೇದಾಂತದೇಶಿಕ ವಿರಚಿತ ಶ್ರೀ ಸುದರ್ಶನಾಷ್ಟಕಮ್ - 1)



# ಭಗವದ್ಗೀತೆ

ತತಃ ಶಂಖಾಶ್ಚ ಬೇರ್ಯಶ್ಚ
ಪಣವಾನ ಕಣೀ ಮುಖಾಃ।
ಸಹಸ್ಯೆವಾಭ್ಯಹನ್ಮಂತ ಸ
ಶಬ್ದಸ್ತುಮುಲೇಽ ಭವತ್॥

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ -12)

ರಣರಂಗದಲ್ಲಿದ್ದವರು ಭೀಷ್ಮರನ್ನು ಅನುಸರಿಸಿ ತಮ್ಮ ತಮ್ಮ ಶಂಖಗಳನ್ನು ಊದಿದರು. ಅದರೊಂದಿಗೆ ಸೈನ್ಯದಲ್ಲಿ ನಗಾರಿ, ಭೇರಿ, ತಮಟೆ ಕಹಳೆಗಳೆಲ್ಲವೂ ಒಂದೇ ಸಮಯ ದಲ್ಲಿ ಮೊಳಗಿದವು. ಆ ಶಬ್ಧ ಎಲ್ಲೆಡೆ ತುಂಬಿ ಎದೆ ನಡುಗು ವಂತಿತ್ತು.


ಕರುಣದಿ ಕಣ್ಣು ತೆರೆಯ ಬಾರಮ್ಮ ಸಿರಿಯೆ
ಧರಣಿಯೊಳಗೆ ಸಂದರತರ ಕೊಲ್ಹಾ
ಪುರ ಸಿಂಹಾಸನದಿ ಮೆರೆವ ಧೊರೆಯೆ
ವಿಧಿ ಭವಾದಿಗಳ ಸದನಗಳಿಗೆ ಅ
ಭ್ಯುದಯ ಕಟಾಕ್ಷದ ಸುಧೆಯ ವಗರೆಯೆ
ಸುಂದರಾನನರವಿಂದದ ಮಲ್ಲಿಗೆ
ಮಂದಹಾಸ ಮಕರಂದವ ಸುರಿಯೆ
ಕಡು ಬೆಡಗಿನ ನಿನ್ನಡಿದಾವರೆಗಳ
ಬಿಡದೆ ಭಜಿಪ ವರಕೊಡು ಸುಂದರಿಯೆ
ಬಡವರ ಭೀಷ್ಟೆಯ ಕೊಡುವಳೆಂದು ಬಡ
ಬಡಸಿ ಬಂದೆ ನಿನ್ನೊಡಲಿನ ಮೊರೆಯೆ
ಕೊಟ್ಟರೆ ಕಮಲೇಶ ವಿಠಲರಾಯನ
ಪಟ್ಟದರಸಿಯೆಂಬ ಕಟ್ಟಳೆ ಖರೆಯೆ

- ಸುರಪುರದ ಆನಂದದಾಸರು



(ಐದನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಭೀಮೇ ನಿತ್ಯಂ ಭವಜಲನಿಧೌ ಮಜ್ಜತಾಂ ಮಾನವಾನಾಂ ಆಲಂಬಾರ್ಥಂ ವೃಷಗಿರಿಪತಿಸ್ತ್ವನ್ನಿದೇಶಾತ್ಪ್ರಯುಂಕ್ತೇ**

**ಪ್ರಜ್ಞಾ ಸಾರಂ ಪ್ರಕೃತಿಮಹತಾ ಮೂಲಭಾಗೇನ ಜುಷ್ಟಂ ಶಾಖಾಭೇದೈಸ್ಸು ಭಗಮನಘಂ ಶಾಶ್ವತ ಶಾಸ್ತ್ರ ಪಾಣಿಮ್ ॥ ೪೬॥**

ಹಿಂದಿನ ಪದ್ಯದಲ್ಲಿ ಸೌಶೀಲ್ಯವೇ ಮೊದಲಾದ ಕಲ್ಯಾಣಗುಣಾನುಭವವು ತಿಳಿಸಲ್ಪಟ್ಟಿತು. ಈ ಪದ್ಯದಲ್ಲಿ ಸೌಶೀಲ್ಯದಂತಹ ಶಾಸ್ತ್ರಪ್ರದಾನವೆಂಬ ದಯಾಕಾರ್ಯವಾದ ಮತ್ತೊಂದು ಗುಣವು ತಿಳಿಸಲ್ಪಡುವುದು. "ಮಗ್ನಾನುದ್ಧರತೇ ಲೋಕಾನ್ ಕಾರುಣ್ಯಾಚ್ಛಾಸ್ತ್ರಪಾಣಿನಾ" ಎಂದೂ "ಶಾಸ್ತ್ರಂ ಪ್ರದೀಪಮಿವ ಕಾರುಣಿಕೋ ದದಾತಿ" ಎಂದೂ ಪ್ರಮಾಣಗಳು ಶಾಸ್ತ್ರಪ್ರದಾನವನ್ನು ಪರಮದಯಾಕಾರ್ಯವೆಂದು ತಿಳಿಸುತ್ತವೆ. ಸಂಸಾರವೆಂಬ ಸಮುದ್ರದಲ್ಲಿ ಮುಳುಗಿ ಬಳಲುತ್ತಿರುವವರಿಗೆ ಶಾಸ್ತ್ರವೆಂಬ ಅವಲಂಬನವು ಇಲ್ಲದಿದ್ದರೆ ಮೇಲೇರಿ ಬರಲು ದಾರಿಯೇ ಇಲ್ಲ. ಶಾಸ್ತ್ರವೆಂಬ ಕೈದೀವಿಗೆಯಿಂದ ಒಳ್ಳೆಯದು ಕೆಟ್ಟದೆಂಬುದನ್ನು ತಿಳಿದರಲ್ಲವೆ ಸರಿಯಾದ ದಾರಿಯಲ್ಲಿ ಹೋಗಬಹುದು! ಆದ್ದರಿಂದ, ಇಂತಹ ಅತ್ಯಂತ ಶ್ರೇಷ್ಠವಾದ ಉಪಕರಣವನ್ನು ನಮಗೆ ಒದಗಿಸಿಕೊಟ್ಟು, ಆ ಸಮುದ್ರದಿಂದ ಮೇಲಕ್ಕೆ ಬಂದು, ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಮಾಡುವುದು ದಯಾದೇವಿಯ ಕೆಲಸವೆನ್ನುವುದರಲ್ಲಿ ಬಾಧಕವಿಲ್ಲ.

ಶಾಸ್ತ್ರಗಳಲ್ಲಿ "ವೇದಾಚ್ಛಾಸ್ತ್ರಂ ಪರಂ ನಾಸ್ತಿ" ಎಂದು ವ್ಯಾಸಮಹರ್ಷಿಗಳು ಹೇಳಿರುವಂತೆ ಮುಖ್ಯವಾದ ಶಾಸ್ತ್ರವು ವೇದ. ಆದ್ದರಿಂದ ಆ ವೇದವನ್ನು "ಕಾರುಣ್ಯಾಚ್ಛಾಸ್ತ್ರಪಾಣಿನಾ" ಎಂಬ ಪ್ರಮಾಣದಂತೆ ಮುಳುಗಿ ಹೋಗುತ್ತಿರುವವನನ್ನು ಮೇಲಕ್ಕೆ ಎತ್ತಲು ಸಹಾಯಕವಾಗುವ ಕೈಯಂತೆ ಇಲ್ಲಿ ವರ್ಣಿಸುತ್ತಾರೆ. ಅನೇಕ ವಿಧವಾದ ಜಲಜಂತುಗಳನ್ನೊಳಗೊಂಡ ಭಯಂಕರವಾದ ಸಮುದ್ರದಲ್ಲಿ ಮುಳುಗಿ ಹೋಗುತ್ತಿರುವವನನ್ನು ಮೇಲಕ್ಕೆತ್ತ ಬೇಕೆಂದು ಬಯಸಿದ ಆಪ್ತನು ಬಲಿಷ್ಠವಾಗಿಯೂ, ದೊಡ್ಡದಾಗಿಯೂ, ಪುಷ್ಟವಾಗಿಯೂ ಇರುವ ತೋಳುಳ್ಳದಾಗಿಯೂ, ಊನವಿಲ್ಲದ ಬೆರಳುಗಳುಳ್ಳದಾಗಿಯೂ ಯಾವುದೊಂದು ಬಗೆಯ ನೋವೂ ಇಲ್ಲದೆ ದೃಢವಾಗಿಯೂ ಇರುವ ಕೈಯನ್ನು ಆಸರೆಯಾಗಿ ಕೊಟ್ಟು ಹೇಗೆ ರಕ್ಷಿಸುವನೋ, ಹಾಗೆಯೇ ದಯೆಯಿಂದ ನಿಯಮಿಸಲ್ಪಟ್ಟ ಶ್ರೀನಿವಾಸನೆಂಬ ಪರಮಪುರುಷನು ಪ್ರಪಂಚವನ್ನು ಸೃಷ್ಟಿಸಿದ ಕೂಡಲೇ ಅದನ್ನು ಕಾಮಕ್ರೋಧಾದಿಗಳಿಂದ ತುಂಬಿರುವ ಭಯಂಕರವಾದ ಸಂಸಾರ ಸಮುದ್ರದಿಂದ ರಕ್ಷಿಸಬೇಕೆಂದು ಬಯಸಿ ವೇದಶಾಸ್ತ್ರವೆಂಬ ಅವಲಂಬನ (ಆಶ್ರಯ)ವನ್ನು ಕೊಡುತ್ತಾನೆ. ಆ ಶಾಸ್ತ್ರವು ತನ್ನಿಂದ ಉಂಟಾಗುವ ಕೃತ್ಯಾ ಕೃತ್ಯ ವಿವೇಕವೆಂಬ ಪ್ರಜ್ಞೆಯನ್ನೇ ಸಾರವಾಗಿ ಉಳ್ಳದ್ದು; ಸಮಸ್ತ ವೇದಾರ್ಥಗಳೂ ಪ್ರಣವದಲ್ಲಿ ಅಡಗಿರುವುದರಿಂದ ಮಹಾಮಹಿಮೆಯುಳ್ಳ ಪ್ರಣವದಿಂದ ಕೂಡಿರುವಂಥದು; ಸಾವಿರಾರು ಶಾಖೆಗಳನ್ನುಳ್ಳದ್ದು; ಅಪೌರುಷೇಯವಾದುದರಿಂದ ಭ್ರಮ ಪ್ರಮೋದಾದಿದೋಷ ರಹಿತವಾದುದು; ಹೀಗೆ ದೋಷವಿಲ್ಲದಿರುವುದಕ್ಕೆ ಕಾರಣವು ಅದು ನಿತ್ಯವಾದುದೇ. ಆದ್ದರಿಂದ ಇಂತಹ ಹಿರಿಮೆಯನ್ನುಳ್ಳ ಶಾಸ್ತ್ರವನ್ನು ಪರಮದಯೆಯಿಂದಲೇ ಸರ್ವೇಶ್ವರನು ನಮಗೆ ಕರುಣಿಸುವನೆಂಬ ವಿಶೇಷಾರ್ಥವು ತಿಳಿಯಬಹುದಾದುದು.

ಇಲ್ಲಿ ಸಮಸ್ತವಾದ ಉಪಬ್ರಂಹಣ (ಇತಿಹಾಸ ಪುರಾಣಾದಿ)ಗಳೊಡನೆ ಕೂಡಿದ ವೇದವನ್ನು ಶಾಸ್ತ್ರಪದದಿಂದ ಹೇಳಬಹುದಾದ್ದರಿಂದ ಪರದೇವತಾ ಪಾರಮಾರ್ಥ್ಯ ನಿಶ್ಚಯಕ್ಕೆ (ಪರತತ್ವವನ್ನು ನಿಶ್ಚಯಿಸುವುದಕ್ಕೆ) ಅತ್ಯಂತ ಸಾಧನವಾದ ಸಾತ್ವಿಕಪುರಾಣಾದಿ ಸರ್ವಶಾಸ್ತ್ರಗಳೂ ಭಗವಂತನ ದಯೆಯಿಂದಲೇ ಆವಿರ್ಭೂತವಾದವೆಂದು ಹೇಳಲು ಅಡ್ಡಿಯಿಲ್ಲ.



ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ ಆಷಾಢ - ಶ್ರಾವಣ ಮಾಸ ಸಂಚಿಕೆ

ಸಂಪುಟ - 51 | ಜುಲೈ 2020 | ಸಂಚಿಕೆ - 2


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಭೀಮನ ಅಮಾವಾಸ್ಯೆ | - ಕೆ.ವಿ. ಪದ್ಮಾವತಿ | 7 |
| ಗುರುಪೂರ್ಣಿಮೆ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 11 |
| ಭಕ್ತ ಪ್ರಹ್ಲಾದನ ಗುಣ ಗಣಗಳು | - ಡಿ.ಎಸ್. ಬದ್ರಿನಾಥ್ | 17 |
| ಅನ್ನಮಯ್ಯ ಜೀವನ ಚರಿತ್ರೆ | -ಶ್ರೀಮತಿ. ಬಿ. ಪದ್ಮಜ | 19 |
| ನಾಗಾವಲೋಕನ | - ಶ್ರೀಮತಿ. ಸುಮ ಚಂದ್ರಶೇಖರ್ | 22 |
| ರಾಷ್ಟ್ರ ನಿರ್ಮಾಣ ಹರಿದಾಸರು | -ಡಾ॥ ವಾಸುದೇವ ಅಗ್ನಿಹೋತ್ರಿ | 31 |
| ಬೃಹದಾರಣ್ಯಕೋಪನಿಷತ್ | -ಶ್ರೀಮತಿ. ಎ. ಗೀತಾ ವೀರರಾಘವನ್ | 34 |
| ಹೈದ್ರಾಬಾದ ಕರ್ನಾಟಕದ ದಾಸ ಸಾಹಿತ್ಯ | | 38 |
| ಗುರು ವಂದನಂ ಸಮರ್ಪಯಾಮಿ! | - ವೆಂಕಟರಾಘವನ್ .ಎಸ್ | 40 |
| ಸಂಸ್ಕೃತ ಕಲಿಯೋಣ! | - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್ | 45 |
| ಜಗತ್‌ಸೃಷ್ಟಿಗರುಡಮಹಿಮೆ | - ಶ್ರೀಮತಿ. ಸಿ.ಎಸ್. ಊರ್ಮಿಳಾ | 46 |
| ಶಾರೀರಿಕ ತಪಸ್ಸೇ ವಿಜಯದ ಪ್ರಥಮ ಮೆಟ್ಟಿಲು | ಡಿ. ಎಸ್. ಭೂಮಿಕ | 50 |
| ಆರೋಗ್ಯ ಸಂರಕ್ಷಣೆಗೆ ಹವೀಜ | - ಶ್ರೀಮತಿ | 52 |


ಮುಖಚಿತ್ರ - ಸ್ವಾಮಿಯವರ ಆಣಿವರ ಆಸ್ಥಾನ, ತಿರುಮಲೆ
ಹಿಂಬದಿಚಿತ್ರ - ಸ್ವಾಮಿಯವರ ಪವಿತ್ರೋತ್ಸವ, ತಿರುಮಲೆ


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಶ್ರಾವಣ ಲಕ್ಷ್ಮಿಗೆ ಸ್ವಾಗತ

ಶ್ರೀ ಚಾಂದ್ರಮಾನದ ಪ್ರಕಾರದ ಮಾಸಗಳಲ್ಲಿ ಕೇವಲ 2 ಮಾಸಗಳಲ್ಲಿ ಮಾತ್ರ ಲಕ್ಷ್ಮೀ ಅನ್ನುವ ಪದ ಕಾಣಸಿಗುತ್ತದೆ. ಒಂದು ಶ್ರಾವಣಲಕ್ಷ್ಮೀ ಆದರೆ ಎರಡನೆಯದು ಪೌಷ್ಯ ಲಕ್ಷ್ಮೀ ಪೈರುಗಳ ನಾಟಿ ಶ್ರಾವಣದಲ್ಲಿ ಪ್ರಾರಂಭವಾದರೆ, ಪುಷ್ಯಮಾಸದಲ್ಲಿ ಫಸಲು ಕೈಗೆ ಬರುತ್ತದೆ. ಒಟ್ಟಿನಲ್ಲಿ ಈ ಎರಡೂ ಮಾಸಗಳಲ್ಲಿ ಒಂದರಲ್ಲಿ ಧಾನ್ಯ ಲಕ್ಷ್ಮಿಯ ಅಂಕುರವಾದರೆ ಇನ್ನೊಂದು ಮಾಸವು ಫಲವನ್ನು ನೀಡುತ್ತದೆ.

ಶ್ರಾವಣ ಮಾಸ... ಈ ಹೆಸರನ್ನು ಕೇಳಿದರೆ ಸಾಕು ಮಹಿಳೆಯರ ಮನಸ್ಸು ಪುಲಕಿತಗೊಳ್ಳುತ್ತದೆ. ಪ್ರತಿ ಮನೆಯಲ್ಲೂ ಆಧ್ಯಾತ್ಮಿಕತೆಯ ಶೋಭೆ ಸ್ಫುಟವಾಗಿ ಕಾಣುತ್ತದೆ. ಅಲ್ಲಿಯವರೆಗೂ ತನ್ನ ಪ್ರಖರ ಕಿರಣಗಳಿಂದ ತನ್ನ ಪ್ರತಾಪವನ್ನು ಪ್ರಕಟಿಸಿದ ಸೂರ್ಯನು ತಣ್ಣಗಾಗುತ್ತಾನೆ. ಮಳೆ ಪ್ರಾರಂಭವಾಗುವ ಮೂಲಕ ತಾಪವು ತಗ್ಗುತ್ತದೆ. ಪ್ರಕೃತಿಯಲ್ಲಿ ನೂತನ ಕಾಂತಿ ಬರುತ್ತದೆ. ಎಲ್ಲಿ ನೋಡಿದರೂ ಆಹ್ಲಾದಕರ ವಾತಾವರಣ ಕಾಣಿಸುತ್ತದೆ. ಇನ್ನೊಂದೆಡೆ ನೂತನ ವಸ್ತ್ರಗಳು, ಆಭರಣಗಳಂತಹ ಸುಮಂಗಲ ದ್ರವ್ಯಗಳನ್ನು ಕೊಳ್ಳುವುದರ ಮೂಲಕ ಪ್ರತಿ ಮನೆಯಲ್ಲಿ ಸಂಭ್ರಮ ಪ್ರಾರಂಭವಾಗುತ್ತದೆ. ಪ್ರತಿ ಮನಸ್ಸು ಆನಂದದಿಂದ ಪರವಶವಾಗಿರುತ್ತದೆ. ಒಟ್ಟಿನಲ್ಲಿ ಆಧ್ಯಾತ್ಮಿಕ, ಆನಂದಗಳ ಸಮ್ಮಿಲನದಿಂದ ಶ್ರಾವಣಮಾಸವು ಸಮಾಜದಲ್ಲಿ ಹೊಸ ಶೋಭೆತರುತ್ತದೆ.

ಶ್ರಾವಣಮಾಸ ಪ್ರಾರಂಭವೆಂದರೆ ಪ್ರತಿ ಮನೆಯಲ್ಲಿ ಶುಭಕಾರ್ಯಕ್ರಮಗಳು ಶ್ರೀಕಾರವಾಗುತ್ತವೆ. ಕನಿಷ್ಠ ಹತ್ತು, ಹದಿನೈದು ದಿನಗಳ ಮುಂಚೆಯೇ ಸಂಭ್ರಮ ಶುರುವಾಗುತ್ತದೆ. ನೂತನ ವಧುಗಳು ಉಪವಾಸ ವ್ರತಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ವರಲಕ್ಷ್ಮಿ ದೇವಿಯನ್ನು ಪೂಜಿಸಿ, ತಮ್ಮ ಮಾಂಗಲ್ಯ ಭಾಗ್ಯವನ್ನು ನಿರಂತರವಾಗಿ ಕಾಪಾಡಿಕೊಳ್ಳಲೆಂದು ಮುತ್ತೈದೆಯರು ಉಪವಾಸ ವ್ರತವನ್ನು ಮಾಡುತ್ತಾರೆ. ಒಟ್ಟಿನಲ್ಲಿ ಪ್ರತಿ ಮನೆಯಲ್ಲಿ ಆಧ್ಯಾತ್ಮಿಕತೆ ನೆಲೆಸಿರುತ್ತದೆ. ಈ ಮಾಸಕ್ಕೆ "ನಭೋಮಾಸ" ಎನ್ನುವ ಹೆಸರು ಕೂಡಾ ಇದೆ. ಚಂದ್ರನು ಹುಣ್ಣಿಮೆಯ ದಿನ ಶ್ರವಣ ನಕ್ಷತ್ರದಲ್ಲಿ ಸಂಚರಿಸುವ ಕಾರಣ ಈ ಮಾಸಕ್ಕೆ ಶ್ರಾವಣ ಮಾಸ ಎಂಬ ಹೆಸರು ಬಂದಿದೆ. ಈ ಮಾಸದಲ್ಲಿ ರವಿಯು ಕರ್ಕಾಟಕ ರಾಶಿಯನ್ನು ಬಿಟ್ಟು ಸಿಂಹರಾಶಿಗೆ ಪ್ರವೇಶಿಸುತ್ತಾನೆ. ಸಿಂಹ ಸಂಕ್ರಮಣದ ನಂತರ ಹದಿನಾರು ಘಳಿಗೆಗಳು ಪರಮ ಪುಣ್ಯ ಕಾಲವೆಂದು ಪ್ರಾಚೀನ ಗ್ರಂಥಗಳು ತಿಳಿಸುತ್ತವೆ. ಶ್ರವಣ ನಕ್ಷತ್ರವು ಶ್ರೀ ಮಹಾವಿಷ್ಣುವಿನ ಜನ್ಮ ನಕ್ಷತ್ರವಾಗಿದೆ. ಶ್ರೀ ಮಹಾವಿಷ್ಣುವು ತನ್ನ ಅರ್ಧಾಂಗಿಯಾದ ಶ್ರೀ ಮಹಾಲಕ್ಷ್ಮೀಯನ್ನು ಪ್ರತ್ಯೇಕವಾಗಿ ಪೂಜಿಸಿದ್ದು ಈ ಮಾಸದಲ್ಲಿಯೇ. ಈ ದೃಷ್ಟಿಕೋನದಿಂದ ಪರಿಶೀಲಿಸಿದಾಗ ವಿಷ್ಣು ಮತ್ತು ಶ್ರೀ ಮಹಾಲಕ್ಷ್ಮಿಯರ ಅನುಗ್ರಹ ಹೊಂದಲು ಅತ್ಯಂತ ಪ್ರಶಸ್ತವಾದ ಮಾಸವೆಂದರೆ ಶ್ರಾವಣಮಾಸವೆಂದು ಹೇಳಬಹುದು.

ವೇದಗಳನ್ನು ಕಾಪಾಡಲು ಶ್ರೀ ಮಹಾವಿಷ್ಣುವು ಹಯಗ್ರೀವನಾಗಿ ಅವತಾರ ಮಾಡಿದ್ದು ಈ ಮಾಸದಲ್ಲಿ ಶ್ರೀ ಕೃಷ್ಣಪರಮಾತ್ಮನು ಈ ಮಾಸದಲ್ಲಿ ಅವತಾರ ಹೊಂದಿದ್ದಾನೆ. ಹಯಗ್ರೀವೋತ್ಪತ್ತಿ ಆಗಿದ್ದು ಈ ಮಾಸದಲ್ಲಿಯೇ ಗರುತ್ಮಂತನು ಅಮೃತ ಪಾತ್ರೆಯನ್ನು ಪಡೆದಿದ್ದು ಈ ಮಾಸದಲ್ಲಿಯೇ ಆಳ್ವಾರು ಬದರಿನಾರಾಯಣ ಪೆರುಮಾಳ್, ಚೂಡಿಕುಡುತ್ತ ನಾಂಚಾರ್ ಮತ್ತು ಇತರ ವೈಷ್ಣವ ಮುಖ್ಯಸ್ಥರ ತಿರುನಕ್ಷತ್ರಗಳು ಈ ಮಾಸದಲ್ಲಿಯೇ ಬರುತ್ತವೆ. ಆಧುನಿಕ ಯುಗದಲ್ಲಿ ಪ್ರಸಿದ್ಧಿ ಹೊಂದಿದ ತತ್ವವೆತ್ತ ಅರವಿಂದಯೋಗಿಯವರು ಈ ಮಾಸದಲ್ಲಿಯೇ ಜನಿಸಿದ್ದಾರೆ. ಈ ವಿಧದಲ್ಲಿ ಎಷ್ಟೋ ಪ್ರತ್ಯೇಕತೆಗಳನ್ನು ಹೊಂದಿರುವ ಶ್ರಾವಣ ಮಾಸದ ವೈಶಿಷ್ಟ್ಯವು ಇಷ್ಟೇ ಎಂದು ಹೇಳಲು ಆಗುವುದಿಲ್ಲ.

ಪ್ರಸ್ತುತ ಎಲ್ಲಾ ದೇಶಗಳಲ್ಲಿಯೂ ಸ್ವಾಸ್ಥ್ಯ ಕ್ಷೇತ್ರದಲ್ಲಿ ವಿಪತ್ತಿನ ಪರಿಸ್ಥಿತಿ ಒಂದೊದಗಿದೆ. ಕರೋನಾ ರೂಪದಲ್ಲಿ ಮಹಾಮ್ಮಾರಿಯು ಪ್ರಪಂಚವನ್ನೇ ಕಬಳಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಶ್ರಾವಣಲಕ್ಷ್ಮಿಯು ನಮ್ಮೆಲ್ಲರಿಗೂ ಆರೋಗ್ಯ ಲಕ್ಷ್ಮಿಯನ್ನು ತನ್ನ ಅನುಗ್ರಹ ವರಪ್ರಸಾದವಾಗಿ ನೀಡಬೇಕೆಂದು ಅಮ್ಮನವರನ್ನು ತ್ರಿಕರಣ ಶುದ್ಧಿಯಿಂದ ಪ್ರಾರ್ಥಿಸೋಣ. ಈ ಮಾಸದಲ್ಲಿ ಮಾಡುವ ಪೂಜೆಗಳು, ಹಿಡಿಯುವ ವ್ರತಗಳಲ್ಲಿ ವಿಶ್ವಮಾನದ ಕಲ್ಯಾಣವನ್ನೇ ಸಂಕಲ್ಪವಾಗಿ ಹೊಂದೋಣ.

ಈ ಮಾಸದಲ್ಲಿ ಮಾಡುವ ಪೂಜೆಗಳು, ವ್ರತಗಳು ಪರಸ್ಪರ ಸಹಕಾರ ಭಾವನೆಗೆ ನಿದರ್ಶನಗಳು, ಈ ಮಾಸದಲ್ಲಿ ಜರುಗಿಸುವ ಹೂವಿಳ್ಳೆಯು ಸ್ನೇಹ ಫಲವನ್ನು ಪ್ರದರ್ಶಿಸುವ ಉತ್ತಮ ಆಚರಣೆಯಾಗಿದೆ. ಪ್ರೇಮಮಯ ಮತ್ತು ಸಾಮರಸ್ಯದಿಂದ ಕೂಡಿದ ವಾತಾವರಣವೇ ಲಕ್ಷ್ಮಿ ಕೃಪೆಗೆ ಕಾರಣವಾಗುತ್ತದೆ. ಆದ್ದರಿಂದ ಪರಸ್ಪರ ಶ್ರೇಯಸ್ಸು, ಆರೋಗ್ಯವನ್ನು ಸಂಕಲ್ಪವಾಗಿ ಮಾಡಿಕೊಂಡು ಶ್ರಾವಣಲಕ್ಷ್ಮಿಯನ್ನು ಆರಾಧಿಸೋಣ. ಆರೋಗ್ಯ ಭಾಗ್ಯವನ್ನು ಶ್ರಾವಣ ಲಕ್ಷ್ಮಿಯ ಪ್ರಸಾದವಾಗಿ ಸ್ವೀಕರಿಸೋಣ.



# ಭೀಮನ ಅಮಾವಾಸ್ಯೆ ಜ್ಯೋತಿರ್ಭೀಮೇಶ್ವರ ವ್ರತ

-ಶ್ರೀಮತಿ. ಕೆ.ವಿ. ಪದ್ಮಾವತಿ
9743722327

ಈ ಅಮಾವಾಸ್ಯೆ ಬೇರೆ ಅಮಾವಾಸ್ಯೆಗಳಿಗಿಂತಲೂ ಭಿನ್ನ; ಬೇರೆಲ್ಲಾ ಅಮಾವಾಸ್ಯೆಗಳಲ್ಲಿ ಬರೀ ಕತ್ತಲೆ ತುಂಬಿಕೊಂಡಿದ್ದರೆ ಈ ಅಮಾವಾಸ್ಯೆಯಲ್ಲಿ ದಾಂಪತ್ಯ ಬದುಕಿನ ಬೆಳಕು ತುಂಬಿಕೊಂಡಿದೆ. ಈ ಅಮಾವಾಸ್ಯೆ ತುಂಬೆಲ್ಲ 'ಪತಿ-ಪತ್ನಿ'ಯರ ಪ್ರಣಯ ದೀಪ್ತಿಯ 'ಹಾಲ್ಬೆಳಕು'ಚೆಲ್ಲಿಕೊಂಡಿರುತ್ತದೆ. ಗಂಡ ಹೆಂಡತಿಯ ನಡುವೆ ಪರಸ್ಪರ ಪ್ರೀತಿ - ವಿಶ್ವಾಸಗಳ ಅಭಿವ್ಯಕ್ತಿಗೆ ಈ ಅಮಾವಾಸ್ಯೆಯು ಒಂದು ವೇದಿಕೆಯಾಗಿ ನಿಂತುಕೊಳ್ಳುತ್ತದೆ.

ಅಷಾಢ 'ಪೂರ್ಣಿಮೆ''ಏಕಾದಶಿ'ಗಳ ಹಾಗೆ ಅಷಾಢ 'ಅಮಾವಾಸ್ಯೆ'ಯು ಕೂಡ ಭಾರತೀಯರ ಮನಸ್ಸಿನಲ್ಲಿ ಭಾವುಕವಾಗಿ ನೆಲೆಯೂರಿದೆ. ಅಂದು ವಿವಾಹಿತ ಮಹಿಳೆಯರು ತಮ್ಮ ಪತಿ ಪರಮೇಶ್ವರ ಆರೋಗ್ಯಾಯುಷ್ಯ ಮತ್ತು ಓಜಸ್ಸು, ತೇಜಸ್ಸುಗಳ ವೃದ್ಧಿಗಾಗಿ 'ಜ್ಯೋತಿರ್ಭೀಮೇಶ್ವರನ' ವ್ರತವನ್ನು ಮಾಡುತ್ತಾರೆ. ವಾಗಾರ್ಥಗಳಂತೆ 'ಅನನ್ಯ' ಮತ್ತು 'ಅನ್ಯೋನ್ಯ' ವಾಗಿರುವ 'ಶಿವ ಪಾರ್ವತಿ'ಯರೇ ಭೀಮನ ಅಮಾವಾಸ್ಯೆಯ 'ಅಧಿಷ್ಠಾತೃ' ದೇವತೆಗಳು

ಅರ್ಧಾಂಗಿ ಕಲ್ಪನೆಗೆ ಅರ್ಥಶ್ರೀ ಹೇಳಿದ ಹರಿಕಾರ ಕೀರ್ತಿ ನಮ್ಮ ಶಿವನನ್ನು ಅಮಾವಾಸ್ಯೆ ಪರ್ವಕಾಲದಲ್ಲಿ ಕೇವಲ ಸುಮಂಗಲಿಯರು ಮಾತ್ರವಲ್ಲ, ವಿವಾಹಾಕಾಂಕ್ಷಿ ಕನ್ಯೆಯರು ಕೂಡ ಮಾಡಿದಲ್ಲಿ ಅವರು ಬಯಸುವಂತಹ ವರನು ಕೈಹಿಡಿಯುವನು ಎಂಬುದೊಂದು ನಂಬಿಕೆ ಆಸ್ತಿಕವಲಯದಲ್ಲಿದೆ.

ಸಮಾಜದಲ್ಲಿ ಏನೆಲ್ಲಾ ಬದಲಾವಣೆಗಳಾಗಿದ್ದರೂ ಹಿಂದೂ ಸಂಪ್ರದಾಯದ ಆಚಾರ-ವಿಚಾರಗಳಿಗೆ ಮಾತ್ರ ಕುಂದುಂಟಾಗಲ್ಲ ಎಂಬುದಕ್ಕೆ ಆಧುನಿಕ ಹೆಣ್ಣು ಮಕ್ಕಳು ಹಬ್ಬ ಹರಿದಿನಗಳನ್ನು ಆಚರಿಸುವುದೇ ಸಾಕ್ಷಿ.

ಆಕಾಶದ ಮೋಡದಂತೆ ಹಬ್ಬಗಳಿಲ್ಲದೆ ಮಂಕುಕವಿದ ಮಾಸವೇ ಆಷಾಢ ಮಾಸ ಎಂಬುದು ಜನರ ಭಾವನೆ, ಇದಕ್ಕೂ ಮಿಗಿಲಾಗಿ ನವವಧುವನ್ನು ಅತ್ತೆಯ ಮನೆಯಿಂದ (ಗಂಡನಿಂದ, ಬಳಿಯಿಂದ) ಬೇರ್ಪಡಿಸಿದ್ದು ಈ ಮಾಸ ಎಂಬ ಮೂದಲಿಕೆ ಬೇರೆ ಇದಕ್ಕಿದೆ. ಅದು ಕಳೆದು ಗಂಡನ ಮನೆಗೆ ಹೋಗಿ ಗಡಿಬಿಡಿಯಿಂದ ಹಬ್ಬ ಆಚರಿಸುವ ಸಂತೋಷ-ಸೌಭಾಗ್ಯಗಳನ್ನು ಪ್ರದರ್ಶಿಸುವ ಶ್ರಾವಣ ಮಾಸದ ಹೊಸ್ತಿಲಲ್ಲಿ ಬರುತ್ತದೆ ಈ ಹಬ್ಬ.

ಭೀಮನ ಅಮಾವಾಸ್ಯೆಯ ವ್ರತ, ಭೀಮೇಶ್ವರ ವ್ರತ, ಜ್ಯೋತಿರ್ಭೀಮೇಶ್ವರ ವ್ರತ - ಈ ರೀತಿ ನಾನಾ ಹೆಸರುಗಳಿಂದ ಕರೆಯುವ ಈ ವ್ರತವು ಪ್ರತಿ ವರ್ಷ ಆಷಾಢಮಾಸದ ಅಮಾವಾಸ್ಯೆಯ ದಿನ ಆಚರಿಸಲ್ಪಡುತ್ತದೆ. ಕನ್ಯೆಯರು ಹಾಗೂ ಸುಮಂಗಲಿಯರು ಅತ್ಯಂತ ಭಕ್ತಿ ಶ್ರದ್ಧೆಯಿಂದ ಈ ವ್ರತವನ್ನು ಆಚರಿಸುವವರು. ಕನ್ಯೆಯರು ಉತ್ತಮವಾದ, ಸಕಲ ಗುಣ ಸಂಪನ್ನರಾದ ಹಾಗೂ ದೀರ್ಘ ಆಯಸ್ಸು ಇರುವ ವ್ಯಕ್ತಿ ತಮ್ಮ ಜೀವನ ಸಂಗಾತಿಯಾಗಲಿ ಎಂಬ ಸಂಕಲ್ಪದಿಂದ ಈ ವ್ರತವನ್ನು ಮಾಡಿದರೆ, ಸುಮಂಗಲಿಯರು ತಮ್ಮ ಮಾಂಗಲ್ಯಭಾಗ್ಯ ಶಾಶ್ವತವಾಗಿರಲಿ, ಪತಿಯ ಆಯಸ್ಸು ವೃದ್ಧಿಸಲಿ ಎಂದು ಈ ವ್ರತವನ್ನು ಆಚರಿಸುತ್ತಾರೆ. ಅಮಾವಾಸ್ಯೆಯ ದಿನ ಉಪವಾಸ ಇದ್ದು ಗೋಧೂಳಿ ಸಮಯ ಅಂದರೆ ಸಂಜೆ ಈ ವ್ರತವನ್ನು ಮಾಡುತ್ತಾರೆ. ವ್ರತ ಮಾಡುವವರು ಪೂರ್ವ ಸಂಕಲ್ಪಿತ ಪ್ರಕಾರವೇ ಮಾಡಬೇಕು.



## ವ್ರತದ ಹಿನ್ನೆಲೆ

ಈ ವ್ರತ ಪ್ರಾರಂಭವಾಗಿದ್ದು ಕೃತಯುಗದಲ್ಲಿ. ಸೌಮಿತ್ರೆ ಎಂಬ ಮಹಾಪತಿವ್ರತೆ ಮೃಕಂಡ ಎಂಬ ಮಹರ್ಷಿಯ ಪತ್ನಿ. ತನ್ನ ಪತಿಗೆ ಅಲ್ಪ ಆಯುಸ್ಸು ಎಂಬ ಘೋರ ಸತ್ಯವನ್ನು ತಿಳಿದ ಅವಳು ಚಿಂತಿತಳಾದಳು. ಆಗ ನಾರದಮಹರ್ಷಿಗಳು ಅವಳ ಆಶ್ರಮಕ್ಕೆ ಬಂದರು. ಸೌಮಿತ್ರೆ ತನ್ನ ಮಾಂಗಲ್ಯಭಾಗ್ಯ, ಸ್ಥಿರವಾಗಲು ಯಾವುದಾದರೂ ವ್ರತವನ್ನು ಉಪದೇಶಿಸಿ ಎಂದು ನಾರದರನ್ನು ಬೇಡಿದಳು. ಆಗ ನಾರದರು ಆಷಾಢ ಮಾಸದ ಅಮಾವಾಸ್ಯೆಯ ಪ್ರದೋಷ ಕಾಲದಲ್ಲಿ ಮಾಡುವ ಭೀಮೇಶ್ವರ ವ್ರತದ ಉಪದೇಶ ಮಾಡಿದರು. ಆ ಸಮಯದಲ್ಲಿ ಆಷಾಢಮಾಸ ನಡೆಯುತ್ತಿತ್ತು. ಅಮಾವಾಸ್ಯೆಯ ದಿನವನ್ನು ನಿರೀಕ್ಷೆ ಮಾಡುತ್ತಿದ್ದ ಅವಳು ನಾರದರು ತಿಳಿಸಿದಂತೆ ವ್ರತವನ್ನು ಶ್ರದ್ಧಾಭಕ್ತಿಯಿಂದ ಮಾಡಿದಳು. ಪರಮೇಶ್ವರನನ್ನು ಆರಾಧನೆ ಮಾಡಿದ್ದ ಕಳಸದಲ್ಲಿ ದಿವ್ಯ ಜ್ಯೋತಿ ಮೂಡಿತು. ಆಕೆಯ ಪತಿಗೆ ಈ ವ್ರತದ ಪ್ರಭಾವದಿಂದ ದೀರ್ಘಾಯಸ್ಸುವುಂಟಾಯಿತು.

ಭೀಮೇಶ್ವರ ವ್ರತವನ್ನು ಕೃತಯುಗದಲ್ಲಿ ಸೌಮಿತ್ರೆ, ತ್ರೇತಾಯುಗದಲ್ಲಿ ಅನಸೂಯಾದೇವಿ, ದ್ವಾಪರಯುಗದಲ್ಲಿ ರುಕ್ಮಿಣಿ, ಕಲಿಯುಗದಲ್ಲಿ ರತ್ನವೇಣಿ, ತ್ರಿಮೂರ್ತಿಗಳನ್ನೇ ಮಕ್ಕಳನ್ನಾಗಿ ಪಡೆದಿದ್ದ ಅನಸೂಯಾದೇವಿ ವ್ರತ ಮಾಡಿದಾಗ ಪರಮೇಶ್ವರನು ಪಾರ್ವತಿ ಸಮೇತವಾಗಿ ಬಂದು ನೈವೇದ್ಯವನ್ನೂ ಸ್ವೀಕರಿಸುತ್ತಿದ್ದನಂತೆ. ರುಕ್ಮಿಣಿ ದೇವಿ, ಗಾಂಧಾರಿ, ಭಾನುಮತಿ, ಅಂಬಲಾದೇವಿ, ನೇತ್ರತುಂದೆ-ಹೀಗೆ ಅನೇಕ ಸುಮಂಗಲಿಯರು ಇದನ್ನು ಆಚರಿಸಿರುವರು.

## ವ್ರತಾಚರಣೆ ಹೇಗೆ?

ಆಷಾಢಮಾಸದ ಅಮಾವಾಸ್ಯೆಯ ದಿನ ಸಂಜೆ ಅಂದರೆ ಗೋಧೂಳಿ ಲಗ್ನದಲ್ಲಿ ಈ ವ್ರತವನ್ನು ಪ್ರಾರಂಭ ಮಾಡಬೇಕು. ಪೂರ್ವ ಅಥವಾ ಉತ್ತರದಿಕ್ಕಿನಲ್ಲಿ ಮಂಟಪವನ್ನು ನಿರ್ಮಿಸಿ ಜೋಡಿ ಕಳಸಗಳನ್ನು ಇಟ್ಟು ಅದರ ಜೊತೆಯಲ್ಲಿ ಜೋಡಿ ದೀಪದ ಕಂಬಗಳನ್ನು ಇಡಬೇಕು. ಪರಮೇಶ್ವರ ಮತ್ತು ಪಾರ್ವತಿಯ ದಿವ್ಯಮಂಗಳ ರೂಪದ ಭಾವಚಿತ್ರ, ಬೆಳ್ಳಿ ಅಥವಾ ಬಂಗಾರದಲ್ಲಿ ಮಾಡಿರುವ ಪ್ರತಿಮೆಗಳನ್ನು ಇಡಬೇಕು. ಗೆಜ್ಜೆವಸ್ತ್ರ, ಅರಿಶಿಣ, ಕುಂಕುಮ, ಅಕ್ಷತೆ, ಚಂದನ, ಹೂ, ಗಂಧ, ಹಣ್ಣು ಕಾಯಿಗಳನ್ನು ಸಿದ್ಧ ಮಾಡಿಕೊಂಡು ಹಸಿದಾರಕ್ಕೆ 16 ಗಂಟುಗಳನ್ನು ಹಾಕಿ ಅರಿಶಿಣದ ನೀರಿನಲ್ಲಿ ಅದ್ದಿ ದೇವರ ಮುಂದೆ ಇಡಬೇಕು. ಅರ್ಚಕರು ತಿಳಿಸಿದಂತೆ ಹದಿನಾರು ಕ್ರಮಗಳಿಂದ ಪೂಜೆ ಮಾಡಬೇಕು. ಜೊತೆಯಲ್ಲಿ ಶಿವಸಹಸ್ರನಾಮ, ಬಿಲ್ವಾಷ್ಟಕ, ಶಿವಾನಂದಲಹರಿ ಮುಂತಾದ ಸ್ತೋತ್ರಗಳನ್ನು ಭಕ್ತಿಯಿಂದ ಪಠಿಸಬೇಕು. ನಂತರ ಮಹಾ ಮಂಗಳಾರತಿಯನ್ನು ಮಾಡಿ ಮುತ್ತೈದೆಯರಿಗೆ ಬಾಗಿನ ನೀಡಿ ಪತಿಗೆ ನಮಸ್ಕಾರ ಮಾಡಿ 16 ಗಂಟಿನ ದಾರವನ್ನು ಬಲಗೈಗೆ ಕಟ್ಟಿಕೊಳ್ಳಬೇಕು.

ಈ ಭೀಮನ ಅಮಾವಾಸ್ಯೆಯ ವ್ರತ ಸಕಲ ಸೌಭಾಗ್ಯಗಳನ್ನು ಮತ್ತು ದೀರ್ಘ ಮಾಂಗಲ್ಯ ಭಾಗ್ಯವನ್ನು ಕರುಣಿಸುವ ವ್ರತವಾಗಿದೆ. ಪತಿವ್ರತೆ ಸಾವಿತ್ರಿ ತನ್ನ ಪತಿಯ ದೇಹತ್ಯಾಗವಾಗಿದ್ದರೂ ಈ ವ್ರತವನ್ನು ಮಾಡಿ ಶಿವನ ಕೃಪೆಯಿಂದ ಮತ್ತೆ ಜೀವಂತವಾಗಿ ಪಡೆದಳು. ಪರಮೇಶ್ವರನು ವ್ರತದ ಬಗ್ಗೆ ಕೈಲಾಸದಲ್ಲಿ ಸನಂದ, ಸನತ್ಕುಮಾರ ಮುಂತಾದವರಿಗೆ ಉಪದೇಶಿಸಿದನು. ಅವರು ಈ ವ್ರತದ ಬಗ್ಗೆ ತಿಳಿಸಿದ ಬಳಿಕ ಭೂಲೋಕದಲ್ಲಿರುವ ತಪಸ್ವಿಗಳ ಪತ್ನಿಯರು ವ್ರತ ಮಾಡಿದರು. ನಂತರ ಈ ವ್ರತವು ಭೂಲೋಕದ ಎಲ್ಲ ಕಡೆ ವ್ಯಾಪಕವಾಗಿ ಪ್ರಸಿದ್ಧವಾಯಿತು.

ಜನ್ಮದಿಂದ ಪ್ರಳಯದವರೆಗೂ ಹೊಂದಿಕೊಂಡು ಬಾಳುವ ರುದ್ರಪಾರ್ವತಿಯರಿಗೆ ಪ್ರೇರಕಶಕ್ತಿ ಮತ್ತೊಬ್ಬನಿದ್ದಾನೆ, ತೊಡೆಯ ಮೇಲೆ ಲಕ್ಷ್ಮೀಯನ್ನೇರಿಸಿಕೊಂಡು ಕುಳಿತಿರುವ ನರಸಿಂಹ, ಹೆಂಡತಿಯನ್ನು ಬಿಟ್ಟಿರದ ಆ ಲಕ್ಷ್ಮೀನರಸಿಂಹನೇ ರುದ್ರನ ದಾಂಪತ್ಯದ ಪ್ರೇರಕಶಕ್ತಿ.

ಮಣ್ಣಿನ ಈ ದೇಹ ಮಣ್ಣಾಗುವವರೆಗೂ ಮಿನುಗುತ್ತಾ ಸುದೃಢವಾಗಿ ನಗೆಯ ನಕ್ಷತ್ರಗಳನ್ನು ಹೊಮ್ಮಿಸಿ ಗಂಡನೊಂದಿಗೆ ಬದುಕಬೇಕು. ಅಂತಹ ದಾಂಪತ್ಯದ ಸಂಕೇತವಾಗಿ ತೋರ್ಬೆರಳಿನ ಪ್ರಮಾಣದಷ್ಟು ಕೆಮ್ಮಣ್ಣಿನ ಪ್ರತಿಮೆ ಮಾಡಿ, ಸಂತಸ-ಸಂಭ್ರಮಗಳ ದ್ಯೋತಕವಾಗಿ ಕಡ್ಡಿಯಲ್ಲಿ ಸುಣ್ಣವನ್ನು ಮೆತ್ತಿಕೊಂಡು ಅದರಿಂದ ಎಲ್ಲ ಕಡೆಯೂ ಮಧ್ಯೆ ಮಧ್ಯೆ ಚುಕ್ಕಿಯನ್ನು ಮಾಡಿ ಧಾನ್ಯ ಸಮೃದ್ಧಿಗಾಗಿ ಅಕ್ಕಿ ಹರಡಿದ ಹರಿವಾಣದಲ್ಲಿ ಈ ಪ್ರತಿಮೆಗಳಿಗೆ ಅರಿಶಿನದ ಬೇರನ್ನು ದಾರದಿಂದ ಸುತ್ತು ಬರುವಂತೆ ಕಟ್ಟುವುದು, ಸೌಮಾಂಗಲ್ಯದ ತಾಳಿಯ ಪ್ರತಿನಿಧಿಯನ್ನು ಪೂಜಿಸಬೇಕು. ಆಯುರಾರೋಗ್ಯಶಾಲಿಯಾದ ಪತಿಯನ್ನು ದಯಪಾಲಿಸೆಂದು ಜ್ಯೋತಿಸ್ವರೂಪಿ ಶಿವನಲ್ಲಿ ಬೇಡಿಕೊಳ್ಳುವ ನೇಮವಿದು.

ಈ ವ್ರತವನ್ನು "ಪತಿ ಸಂಜೀವಿನಿ" ವ್ರತವೆಂದೂ ಕರೆಯುತ್ತಾರೆ. ದೀಪದ ಕಂಬದಲ್ಲಿ ಶಿವನನ್ನು ಆವಾಹಿಸಿ ಪೂಜಿಸುವುದರಿಂದ ಇದಕ್ಕೆ "ಜ್ಯೋತಿರ್ಭೀಮೇಶ್ವರ" ವ್ರತವೆಂದು ಹೆಸರು, ಇಲ್ಲಿ 'ಭೀಮ' ಎನ್ನುವುದು ಬಲ ಎಂಬುದಕ್ಕೆ ಪರ್ಯಾಯ ಪದ.

ವಿವಾಹಿತ ಹೆಣ್ಣು ಮಕ್ಕಳು ಒಂಬತ್ತು ವರ್ಷ ಇದನ್ನು ನಡೆಸಿ, ಒಂಬತ್ತು ಎಳೆಯ ಗಂಟು ಹಾಕಿದ ದಾರವನ್ನು ಬಲಗೈ ಮುಂಭಾಗದಲ್ಲಿ ಕಟ್ಟಿಕೊಂಡು ಕೊನೆಯ ವರ್ಷ ಉದ್ಯಾಪನೆ ಮಾಡುವಾಗ ಸಹೋದರರಿಗೆ ಕಾಲುದೀಪಗಳನ್ನು ಉಡುಗೊರೆಯಾಗಿ ಕೊಡುವುದು ವಾಡಿಕೆ. ಒಂಬತ್ತು ಗಂಟು ಹಾಕಿದ ಅರಿಶಿಣದ ದಾರವನ್ನು ವ್ರತ ಮಾಡಿದುದರ ಕುರುಹಾಗಿ ಕೈಗೆ ಕಟ್ಟಿಕೊಳ್ಳುವುದು, ಸುಮಂಗಲಿಯರಿಗೆ ಬಾಗಿನ ಕೊಡುವುದು ಈ ವ್ರತದ ಇತರ ಮುಖ್ಯ ಕ್ರಿಯೆಗಳಾಗಿವೆ.

ಈ ಹಬ್ಬವನ್ನು ಕೆಲವು ಕಡೆ ಅಳಿಯನ ಅಮಾವಾಸ್ಯೆ ಎಂದು ಆಚರಿಸುತ್ತಾರೆ.ಕೆಲವು ಪ್ರಾಂತ್ಯಗಳಲ್ಲಿ ಆಷಾಢದ ಶುರುವಿಗೆ ಮನೆಮಗಳನ್ನು ಅಣ್ಣ ಕರೆತಂದಿರುತ್ತಾನೆ. ಅಂತ್ಯಕ್ಕೆ ಪತಿ ಬಂದು ಅವಳನ್ನು ಕರೆದೊಯ್ಯುತ್ತಾನೆ. ಆ ಸಂದರ್ಭದಲ್ಲಿ ಆತನಿಗೆ ವಿಶೇಷ ಸನ್ಮಾನಗಳನ್ನು ಮಾಡಲಾಗುತ್ತದೆ. ಆದ್ದರಿಂದಲೇ ಇದನ್ನು ಅಳಿಯನ ಅಮಾವಾಸ್ಯೆ ಎನ್ನುವುದು.

ದಕ್ಷಿಣ ಕನ್ನಡದಲ್ಲಿ ಇದನ್ನು 'ಕೊಡೆ ಅಮಾವಾಸ್ಯೆ' ಎನ್ನುತ್ತಾರೆ. ಆಷಾಢದ ಮಳೆಯ ಹೊಡೆತ ಕಡಿಮೆಯಾಗುತ್ತಾ ನಾಯಿಕೊಡೆ (ಅಣಬೆ)ಗಳು ಎಲ್ಲೆಂದರಲ್ಲಿ ಬೆಳೆದುಕೊಳ್ಳುವುದು ಇದಕ್ಕೆ ಒಂದು ಕಾರಣವಾದರೆ, ಕೊಡೆ ಹಿಡಿದು ಮಾಡುವ ಹಬ್ಬ ಎನ್ನುವ ಅರ್ಥದಲ್ಲಿಯೂ ಈ ಹೆಸರು ಬಂದಿದೆ. ಈ ದಿನದಂದು ಕೆಲವು ವಿಶಿಷ್ಟ ಗಿಡಮೂಲಿಕೆಗಳಿಂದ ತಯಾರಿಸುವ ಕಹಿ ಔಷಧವನ್ನು ಕುಡಿಯುವ ರೂಢಿ ಈ ಪ್ರಾಂತ್ಯದಲ್ಲಿದೆ. ಇದರಿಂದ ಮಳೆಗಾಲದ ರೋಗಗಳನ್ನು ತಡೆಗಟ್ಟಬಹುದು ಎಂಬ ನಂಬಿಕೆ ಇದೆ.

ಉತ್ತರ ಕನ್ನಡ ಕರಾವಳಿಯಲ್ಲಿ ಈ ಅಮಾವಾಸ್ಯೆಯನ್ನು 'ಗಟಾರದ ಅಮಾವಾಸ್ಯೆ'ಎನ್ನಲಾಗುತ್ತದೆ. ಶ್ರಾವಣದುದ್ದಕ್ಕೂ ಮಾಂಸಾಹಾರಕ್ಕೆ ಸ್ವಯಂ ನಿಷೇದ ಹಾಕಿಕೊಳ್ಳುತ್ತಾರಾದ್ದರಿಂದ ಆಷಾಢದ ಗಟಾರದ ಅಮಾವಾಸ್ಯೆ ಎನ್ನುವ ಹೆಸರಿನ ಹಿನ್ನೆಲೆ ಇದೆ.

ಉತ್ತರ ಭಾರತದಲ್ಲಿ ಈ ಅಮಾವ್ಯಾಸೆಯನ್ನು 'ಪೀಥೋರಿ ಹಬ್ಬ' ಎಂದು ಆಚರಿಸಲಾಗುತ್ತದೆ. ಇದು ಏಳು ಸಪ್ತ ದೇವತೆಗಳಿಗೆ ಮತ್ತು ಅರವತ್ನಾಲ್ಕು ಯೋಗಿನಿಯರಿಗೆ ಮೀಸಲು. ಪೀಟ್ ಎಂದರೆ ಕಲೆಸಿದ ಹಿಟ್ಟಿನಿಂದ ಮಾಡಿದ ದೇವತೆಗಳ ಮೂರ್ತಿಗಳನ್ನು ಸೌಭಾಗ್ಯ ಸಂಪದಗಳಿಗಾಗಿ ಪೂಜಿಸುತ್ತಾರೆ. ರಜಪೂತರಲ್ಲಿ ಒಳ್ಳೆಯ ಪತಿಗಾಗಿ ಕನ್ಯೆಯರು ಅಕ್ಕಿಯ ಮೇಲೆ ಜೋಡಿ ದೀಪಗಳನ್ನು ಇಟ್ಟು ಅರಿಶಿನ ಕುಂಕುಮ ಹೂಗಳಿಂದ ಶಿವನನ್ನು ಆರಾಧಿಸುತ್ತಾರೆ.

**ಭಂಡಾರದ ಸಡಗರ**

ಮೈದಾಹಿಟ್ಟಿನಲ್ಲಿ ಭಂಡಾರವನ್ನು ಮಾಡಿ ಅಣ್ಣ - ತಮ್ಮಂದಿರಿಂದ ಹೊಸ್ತಿಲಿನ ಮೇಲೆ ಅದನ್ನು ಒಡೆಸಿ ದಕ್ಷಿಣೆ ನೀಡುವ ಮೂಲಕ ವ್ರತ ಸಂಪನ್ನವಾಗುತ್ತದೆ. ಇಲ್ಲಿ 'ಭಂಡಾರ' ಎಂದರೆ ಸಂಪತ್ತು ಎಂದರ್ಥ. ಭಂಡಾರ ಅಂದರೆ, ಕರಿದ ಕಡುಬು ಆದರೆ ಅದರೊಳಗೆ ಲಕ್ಷ್ಮೀ ಸ್ವರೂಪಿ ನಾಣ್ಯವನ್ನು ಇಟ್ಟು ಕರಿದಿರುತ್ತಾರೆ. ಬಳಿಕ ಇದನ್ನು ಅಣ್ಣ-ತಮ್ಮಂದಿರಿಂದ ಒಡೆಸುತ್ತಾರೆ. ಅವರಿಗೆ ಆರತಿ ಮಾಡಿ ಕರಿಗಡುಬಿನ ಒಳಗಿದ್ದ ದುಡ್ಡಿನ ಜೊತೆ ಉಡುಗೊರೆ ಕೊಡುತ್ತಾರೆ. ಸೋದರಿ ಆ ಸಮಯದಲ್ಲಿ ಅವನ ಬೆನ್ನಿಗೆ ಪ್ರೀತಿಯಿಂದ ಗುದ್ದುತ್ತಾಳೆ.

**ಹಬ್ಬದ ಹಿಂದಿನ ಅಂತರಾರ್ಥ**

ಹಬ್ಬದಾಚರಣೆ ಆಡಂಬರದ ಪ್ರದರ್ಶನವೋ ಅಥವಾ ಅದರೊಳಗೊಂದು ತಿರುಳಿದೆಯೋ ಎನ್ನುವ ಪ್ರಶ್ನೆ ಸಹಜ. ಮಹಿಳೆ ಅಬಲೆಯಲ್ಲ ಸಬಲೆ ಎನ್ನುವ ಈ ಕಾಲದಲ್ಲಿ ಗಂಡನ ಪೂಜೆಗೊಂದು ದಿನವೇಕೆ? ಎನ್ನುವ ಪ್ರಶ್ನೆಗಳು ಸಹಜ.ಹಬ್ಬದ ಹಿಂದಿನ ಅಂತರಾರ್ಥ ತಿಳಿದಾಗಲೇ ಅಂತಹ ಪ್ರಶ್ನೆಗಳಿಗೊಂದು ಉತ್ತರ ಸಿಕ್ಕೀತು. ಗಂಡನ ಪೂಜೆಗೆಂದೇ ಮೀಸಲಾದ ದಿನವೇ ಭೀಮನ ಅಮಾವಾಸ್ಯೆ.ಇಲ್ಲಿ ಅಮಾವಾಸ್ಯೆ ಕಾಲದ ಸಂಕೇತ. ಅಮಾವಾಸ್ಯೆಯ ನಂತರ ಬರುವುದೇ ಶುಕ್ಲಪಕ್ಷ. ಚಂದ್ರನ ಲೆಕ್ಕಾಚಾರದಲ್ಲಿ ಕತ್ತಲಿನಿಂದ ಬೆಳಕಿನೆಡೆಗೆ ಪಯಣ ಆರಂಭಿಸುವ ಶುಭ ಘಳಿಗೆಯೇ ಅಮಾವಾಸ್ಯೆ.

ಭೀಮ ಎನ್ನುವುದು ಶೌರ್ಯ, ಸಾಹಸ, ವೀರ್ಯವಂತ ಪುರುಷನ ಸಂಕೇತ. ಹೀಗೆ ಭೀಮನ ಅಮಾವಾಸ್ಯೆಯನ್ನು ಒಟ್ಟುಗೂಡಿಸಿದಾಗ ಬರುವುದೇ ಕಾಲಪುರುಷ.ಲಯಕರ್ತನಾದ ಶಿವನೇ ಕಾಲಪುರುಷ ಶಿವನಲ್ಲಿ ಒಂದು ವಿಶಿಷ್ಟ ಗುಣವಿದೆ. ಶಿವ ಸಮಾನತೆ, ಶಾಂತತೆ, ಸಾಧನೆ, ಕಾರುಣ್ಯತೆ, ಪರಿಪಾಲನೆ, ವಾತ್ಸಲ್ಯ,ಸೌಹಾರ್ದಮನೋಭಾವನೆಯ ಸಂಕೇತವಾಗುತ್ತಾನೆ. ಒಂದು ಕುಟುಂಬ ವ್ಯವಸ್ಥೆಗೆ ಯಜಮಾನನೇ ಆಧಾರ. ಈ ನಿಟ್ಟಿನಲ್ಲಿ ತೆಗೆದುಕೊಂಡರೂ ಶಿವ ನಮಗೆ ಆದರ್ಶವಾಗುತ್ತಾನೆ. ಅರ್ಧನಾರೀಶ್ವರ ತತ್ವದಲ್ಲಿ ಶಿವ,ಶಕ್ತಿಗೆ ಸಮಾನಾಂತರ ಸ್ಥಾನವಿದೆ.ಕಾರಣ ಹಬ್ಬದ ನೆಪದಲ್ಲಿ ಶಿವನ ಆರಾಧನೆಗೆ ಚಾಲನೆ ದೊರೆಯುತ್ತದೆ.

ಅಂದಿನ ಕಾಲಮಾನಕ್ಕೆ ತಕ್ಕಂತೆ ಪತಿ ಪೂಜೆ ಸೂಕ್ತ ಎನಿಸುತ್ತದೆ. ಆ ದಿನಗಳಲ್ಲಿ ಪುರುಷ ಮಾತ್ರ ಹೊರಗೆ ಹೋಗಿ ದುಡಿಯುತ್ತಿದ್ದ,ಕುಟುಂಬ ನಿರ್ವಹಣೆಗೆ ಆತನೇ ಆಧಾರಸ್ತಂಭವಾಗಿದ್ದ.ಹಾಗಾಗಿ ಮನೆಯ ಯಜಮಾನನ ಆರೋಗ್ಯ. ಆಯುಷ್ಯ ಗಟ್ಟಿಯಾಗಿರಲಿ ಎಂದು ಭಗವಂತನಲ್ಲಿ ಬೇಡುವ ಉದ್ದೇಶ ಇದ್ದಿರಬಹುದು. ಆದರೆ ಇಂದು ಕಾಲ ಬದಲಾಗಿದೆ. ಪತಿ-ಪತ್ನಿ ಇಬ್ಬರೂ ಸಮಾನರು. ಸಂಸಾರವನ್ನು ನಿಭಾಯಿಸುವಲ್ಲಿ ಸಮಾನ ಸ್ಥಾನ ಹಂಚಿಕೊಂಡಿದ್ದಾರೆ. ಪತಿಯ ಆಯಸ್ಸು, ಇಬ್ಬರ ನಡುವಿನ ಬಾಂಧವ್ಯ ಗಟ್ಟಿಗೊಳ್ಳಬೇಕಾದರೆ ಪೂಜೆಯೆಂಬ ಆಚರಣೆಗಿಂತ ಹೆಚ್ಚಾಗಿ ಪರಸ್ಪರ ಸಾಮಾನತೆ - ಸಾಮರಸ್ಯ, ಪ್ರೀತಿ - ವಿಶ್ವಾಸ ನಂಬಿಕೆ ಇರಲೇಬೇಕು. ಪತಿಯೇ

ಪರದೈವ,ದೀರ್ಘ ಸುಮಂಗಲಿಯಾಗುವಂತಹ ಭಾಗ್ಯ ಕೊಡು ಎಂದೆಲ್ಲಾ ಬೇಡುತ್ತಾ ಹೆಣ್ಣು ಮಕ್ಕಳು ಪತಿಯನ್ನು ಪೂಜಿಸುತ್ತಿದ್ದರು. ಆದರೆ ಸಂಸಾರವೆಂಬ ನೌಕೆಯಲ್ಲಿ ಇಬ್ಬರದೂ ಸಮಪಾಲೂ, ಸಮಬಾಳು ಹಾಗೆಯೇ ಸೃಷ್ಟಿಯ ರಚನೆಗೆ ಸ್ತ್ರೀ-ಪುರುಷರ ಸಂಯೋಗ ಇರಲೇಬೇಕು.

ಅವಿವಾಹಿತ ಹೆಣ್ಣುಮಕ್ಕಳು ನನ್ನ ಜೀವನ ಸಂಗಾತಿ ಹೀಗಿರಬೇಕು ಎಂದೆಲ್ಲಾ ಕನಸು ಕಾಣುತ್ತಾರೆ. ಏಳೇಳು ಜನ್ಮಕ್ಕೂ ಪತಿಯಾಗಿರು ಎಂದು ವಿವಾಹ ಬಂಧನಕ್ಕೆ ಒಳಪಡುವ ಆಕೆ ತನ್ನ ಗಂಡನಲ್ಲಿ ಸಾಕ್ಷಾತ್ ಶಿವನಲ್ಲಿದ್ದಂತಹ ಗುಣವನ್ನು ಕಾಣ ಬಯಸುತ್ತಾಳೆ ಎಂದರೆ ತಪ್ಪಾಗಲಾರದು, ಹಾಗಾಗಿಯೇ ಶಿವ ಮತ್ತು ಪಾರ್ವತಿ ಪ್ರಬುದ್ಧ ದಂಪತಿಗಳಿಗೆ ಮಾದರಿಯಾಗಿ ಕಾಣುತ್ತಾರೆ. ಅವರಲ್ಲಿ ಪರಸ್ಪರ ಗೌರವ ಇತ್ತು; ಆ ಪ್ರೀತಿಯ ಭಾವವಿತ್ತು, ಈಶ್ವರ-ಪಾರ್ವತಿಯರಲ್ಲಿ ಅಗಾಧ ಪ್ರೀತಿ, ಬದ್ಧತೆ, ಸ್ತ್ರೀ ಸಮಾನತೆಯ ಮನೋಭಾವನೆ ಇದ್ದುದರಿಂದಲೇ ಇಂದಿಗೂ ಪತಿ- ಪತ್ನಿಯರಿಗೆ ಆದರ್ಶಪ್ರಾಯರು.ಶಿವನ ಅರ್ಧನಾರೀಶ್ವರ ರೂಪಕ್ಕೆ ಒಂದು ಕಥೆಯಿದೆ. ಋಷಿಯೊಬ್ಬ ಸ್ತ್ರೀಗೆ ಪೂಜೆ ಸಲ್ಲಿಸುವುದಿಲ್ಲ ಎಂದಾಗ ಪಾರ್ವತಿಗೆ ತನ್ನ ಎಡಪಾರ್ಶ್ವವನ್ನೇ ಬಿಟ್ಟುಕೊಟ್ಟು ಅರ್ಧನಾರೀಶ್ವರನಾಗುತ್ತಾನೆ ಪರಮೇಶ್ವರ. ನಂಬಿ ಬಂದ ಸತಿಗೆ ತನ್ನ ಅರ್ಧ ಹೃದಯವನ್ನೇ ಕೊಡುವ ಕರುಣಾಳು ಆಗುತ್ತಾನೆ. ಅಂತಹ ಶಿವನಿಗೆ ಶ್ರಾವಣ ಪ್ರಿಯವಾದ ಮಾಸ. ಶ್ರಾವಣಮಾಸದ ಆರಂಭಕ್ಕೆ ಮುನ್ನುಡಿಯಾಗುವ ಹಬ್ಬವೇ ಭೀಮನ ಅಮಾವಾಸ್ಯೆ. ಶಿವನಂತಹ ಪತಿಗೆ ಪೂಜೆ ಸಲ್ಲಿಸಿ ಆತನೊಂದಿಗೆ ಜತೆಜತೆಯಾಗಿ ಬಾಳನೌಕೆಗೆ ಬಣ್ಣ ತುಂಬುವ ಕನಸು ಆಕೆಯದ್ದು.

**ಶಿವಶಕ್ತಿ ಸ್ವರೂಪ**

ಬ್ರಹ್ಮಚರ್ಯ, ಸ್ವಯಂನಿಯಂತ್ರಣ ಹಾಗೂ ಯೋಗಿಗಳ ದೇವ ಶಿವ.ಅದರ ಜತೆಗೇ ಸತಿಯ ಮೇಲೆ ಅತ್ಯಂತ ಪ್ರೀತಿ ಹೊಂದಿದ ಪತಿ.ಬ್ರಹ್ಮಸೃಷ್ಟಿಯ ರಚನಾಕಾರನಾದರೆ,ವಿಷ್ಣು ಸೃಷ್ಟಿಯ ರಕ್ಷಕ ಹಾಗೂ ಶಿವ ವಿನಾಶಕಾರಕ. ಶಿವ ಬ್ರಹ್ಮಾಂಡವನ್ನು ನಾಶ ಮಾಡುವುದಲ್ಲದೆ ಮನದೊಳಗಿನ ಅಹಂಕಾರವನ್ನು ನಾಶ ಮಾಡುತ್ತಾನೆ.

ಶಿವನನ್ನು ಅರ್ಧನಾರೀಶ್ವರ ಎಂದೂ ಕರೆಯಲಾಗುತ್ತದೆ. ಶಿವ ಮತ್ತು ಪಾರ್ವತಿಯನ್ನು ಶಿವ ಮತ್ತು ಶಕ್ತಿ ಅಂದರೆ ಪುರುಷ ಮತ್ತು ಪ್ರಕೃತಿ ಎಂದು ಗುರುತಿಸಲಾಗುತ್ತದೆ. ಪುರುಷ ಎಂದರೆ ಗಂಡು, ಪ್ರಕೃತಿ ಎಂದರೆ ಸ್ತ್ರೀ ಎಂದರ್ಥ. ಅಂದರೆ ಸೃಷ್ಟಿಯ ಮೂಲಪುರುಷ. ಆದರೆ ಸಾಧ್ಯವಿಲ್ಲ. ಹಾಗಾಗಿ ಪುರುಷ ಮತ್ತು ಸ್ತ್ರೀ ಎನ್ನುವ ಭೇದಸಲ್ಲದು.ಅವರೀರ್ವರಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು ಎನ್ನುವುದೇ ಹಬ್ಬದಾಚರಣೆಯ ಹಿಂದಿನ ತಾತ್ಪರ್ಯ.

ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877-2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk@tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು

# ಗುರುಪೂರ್ಣಿಮೆ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

'ಅವಧೂತ' ಎಂದರೆ ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ ದಿಗಂಬರ, ವರ್ಣಾಶ್ರಮಗಳನ್ನು ಮೀರಿ ಮುಮುಕ್ಷು ಮಾರ್ಗದಲ್ಲಿ ನಡೆದು,ಆತ್ಮನಲ್ಲಿಯೇ ವಿಹರಿಸುವವನು ಎಂದರ್ಥ, ಮುಖ್ಯವಾಗಿ ಅವಧೂತ ಎನ್ನುವುದು ಒಂದು ಧರ್ಮವಾಗಿರದೆ, ಸಾಂಸ್ಥಿಕ ಧರ್ಮದ ಚೌಕಟ್ಟನ್ನು ಮೀರಿನಿಂತ ಒಂದು ಸ್ಥಿತಿ, ಸಮಾಜದಿಂದ ದೂರ ಉಳಿದ ಅಂತರ್ಮುಖಿ ಬದುಕು ಮಾನಸ ಪೂಜೆ,ಯೋಗದೃಷ್ಟಿ,ಅಷ್ಟಮಹಾಸಿದ್ಧಿ,ಮೌನಸಾಧನೆ ಮುಂತಾದ ಲಕ್ಷಣಗಳುಳ್ಳ ಅವಧೂತನು ಸಂಗದಲ್ಲಿದರೂ ನಿಸ್ಸಂಗಿಯಾಗಿದ್ದವನು. ದೈವಾನುಗ್ರಹ ಗುರೂಪದೇಶ ಪಡೆದು ತನ್ನನ್ನು ತಾನೇ ಮರೆತು ಲೋಕಕ್ಕೆ ಮರುಳನಂತೆ ಕಂಡು ದೇಶ ಸಂಚಾರ ಮಾಡಿ ಹೋದಲ್ಲೆಲ್ಲಾ ತನ್ನ ಮಹಿಮೆಯನ್ನು ತೋರಿ ಕೊನೆಗೊಂದು ಊರಲ್ಲಿ ನೆಲೆನಿಂತು ಸಮಾಧಿ ಹೊಂದಿದವರು. ಅರಿವು ಎನ್ನುವುದು ಯಾವ ಮೂಲದಿಂದಾದರೂ ಒದಗ ಬಹುದು ಎನ್ನುವುದೇ ಅವಧೂತಪ್ರಜ್ಞೆಯ ಸಂಕೇತ.ಅವಧೂತರು ಯೌಗಿಕ ಪಂಥದ ಅನುಭಾವಿಗಳು. ಇವರನ್ನು ಜೀವನ್ಮುಕ್ತ,ಪರಬ್ರಹ್ಮ,ಪರಮಹಂಸ, ಪರಮಾರೂಢ, ಅವಧೂತರೆಂದೂ ಕರೆಯುತ್ತಾರೆ.

ಅವಧೂತರೆಂದರೆ,ಕಾವಿಹೊದ್ದುಕೊಂಡು ಸದಾ ಕರ್ಮಾನುಷ್ಠಾನರಾಗಿರುವವರಲ್ಲ ಅಥವಾ ದೇವ ಮಾನವರಂತೆ ಪೋಸು ಕೊಡುವುದಿಲ್ಲ. ಬದಲಿಗೆ ವಿಷಯಾ ಸಕ್ತಿಗಳಿಂದ ವಿಹ್ವಲರಾಗಿ ಪ್ರಾಪಂಚಿಕ ಅನುಭೂತಿಗಳಿಂದ ಹೊರಗುಳಿದವರು. ಯಾರಿಗೆ ಕ್ಷರ (ನಾಶ) ಎಂಬುವುದಿಲ್ಲವೋ, ಯಾರು ಭಕ್ತಿಯಿಂದ ಪಡೆಯಲು ಶಕ್ತರೋ,ಯಾರು ಸಂಸಾರದಲ್ಲಿದ್ದರೂ ಸಂಸಾರ ಬಂಧನದಿಂದ ಮುಕ್ತರಾಗಿದ್ದಾರೋ ತತ್ತ್ವ ಮಸಿ ಮೊದಲಾದ ಶೃತಿ ವಾಕ್ಯಗಳನ್ನು ಗ್ರಹಿಸಿ ಬಾಳುತ್ತಾರೋ ಆತ ಅವಧೂತನಾಗುತ್ತಾನೆ ಎಂದು ದತ್ತಾತ್ರೇಯರು ಅವಧೂತೋಪನಿಷತ್ತಿನಲ್ಲಿ ಹೇಳುತ್ತಾರೆ. ಅವಧೂತ ಗೀತೆಯಲ್ಲಿ ತಮ್ಮ ರೂಪವನ್ನು ದತ್ತಾತ್ರೇಯರು ಅವಧೂತೋಪನಿಷತ್ತಿನಲ್ಲಿ ಹೇಳುತ್ತಾರೆ. ಅವಧೂತ ಗೀತೆಯಲ್ಲಿ ತಮ್ಮ ರೂಪವನ್ನು ದತ್ತಾತ್ರೇಯರು ಹೀಗೆ ಹೇಳಿಕೊಳ್ಳುತ್ತಾರೆ.ಆಕಾರವಿಲ್ಲದವನೂ,ಅವ್ಯಯನೂ, ನನ್ನಿಂದ ಬೇರೆಯಲ್ಲದವನೂ ಆದ ಶಿವನನ್ನು ನಾನು ಅದೆಂತು ನಮಿಸಿ ಅರ್ಚಿಸಲಿ ಎಂದು ಪ್ರಶ್ನಿಸುತ್ತಾರೆ. ಹರೆಯ ಜಾರಿ ಹೋದ ಮೇಲೆ ಮಾರನು ಬಿಡುವ ಹೂಬಾಣವೇನು ಮಾಡೀತು? ನೀರೊಣಗಿದ ಮೇಲೆ ಅಂಥ ಕೆರೆಯಿಂದ ಏನಾದೀತು? ಎಂದು ಪ್ರಶ್ನಿಸುವ ಶಂಕರಾಚಾರ್ಯರು ಅವಧೂತ ತತ್ವದ ಒಳ ಹೂರಣವನ್ನು ತೆರೆದಿಡುತ್ತಾರೆ. ದಾರ್ಶನಿಕನಾದ ಅವಧೂತನ ಲಕ್ಷಣವನ್ನು ಆ ಶಬ್ಧದಲ್ಲಿ ಸೇರಿರುವ ಅ-ವ-ಧೂ-ತ ಎಂಬ ಈ ನಾಲ್ಕು ಅಕ್ಷರ (ವರ್ಣ)ಗಳಲ್ಲಿ ಅರಿತು ಕೊಳ್ಳಬೇಕೆಂದು ಅವಧೂತ ಗೀತೆಯಲ್ಲಿ ತಿಳಿಸಲಾಗಿದೆ.

-ಆಶಾಪಾಶಗಳಿಗೆ ಒಳಪಡದವನು, ಬದುಕಿನ ಆದಿ - ಮಧ್ಯ-ಅಂತ್ಯಗಳಲ್ಲಿ ನಿರ್ಮಲನಾದವನು, ಸದಾ ಆನಂದದಲ್ಲೇ ಮಗ್ನನಾಗಿರುವವನು ಎಂಬ ಆತನ ಲಕ್ಷಣವನ್ನು ಅವಧೂತ ಪದದ 'ಅ' ಕಾರವು ಸ್ಪಷ್ಟಪಡಿಸುತ್ತದೆ.

- ಪೂರ್ವಕೃತ ಕರ್ಮಶೇಷಗಳನ್ನೆಲ್ಲ ತೊರೆದವನು, ಮಿತ ಭಾಷಿಯೂ ಮಾತನಾಡುವುದಿದ್ದರೆ ದೋಷವುಂಟಾಗದ ಮಾತನ್ನೇ ಆಡುವವನೂ, ಭೂತ-ಭವಿಷ್ಯತ್ ಕಾಲಗಳಲ್ಲಿ ಆಸಕ್ತಿಯಿಲ್ಲದವನೂ ವರ್ತಮಾನ ಕಾಲದ ವಸ್ತು ಸಂದರ್ಭಗಳಲ್ಲಿ ಮಾತ್ರ ಆಸಕ್ತನು ಎಂಬ ಅವಧೂತ ಲಕ್ಷಣವನ್ನು 'ವ' ಕಾರವು ಸೂಚಿಸುತ್ತದೆ.

-ಆತನ ದೇಹ ಧೂಳಿನಿಂದ ತುಂಬಿದ್ದರೂ, ಆತನ ಮನಸ್ಸು ಅಂಕೆಯಲ್ಲಿದ್ದು ನಿರ್ದೋಷವಾಗಿ ಸಮವಾಗಿ ಇರುತ್ತದೆ. ಧಾರಣ ಧ್ಯಾನಗಳಿಂದ ನಿರ್ಮುಕ್ತನಾಗಿರುತ್ತಾನೆಂಬುದನ್ನು ಅವಧೂತ ಪದದ 'ಧೂ' ಕಾರವು ತಿಳಿಸುತ್ತದೆ.

- ತತ್ತ್ವಚಿಂತನೆಯನ್ನು ಮಾಡುವವನು, ಚಿಂತೆಯನ್ನೂ ಪ್ರವೃತ್ತಿಯನ್ನೂ,ತೊರೆದವನು ಹಾಗೂ ಅಹಂಕಾರದಿಂದ ತಮೋಗುಣದಿಂದ ಪಾರಾದವನು ಎಂಬುದು ಅವಧೂತ ಪದದ 'ತ' ಕಾರವು ವಿಶದೀಕರಿಸುತ್ತದೆ.

ಅವಧೂತನು ಉಪಾಸಕನೂ ಅಲ್ಲ. ಉಪಾಸ್ಯ ವಸ್ತುವೂ ಅಲ್ಲ. ಇವನಿಗೆ ಉಪದೇಶವೂ ಇಲ್ಲ. ಕ್ರಿಯೆಯೂ ಇಲ್ಲ. ಪೂರ್ಣ ಜ್ಞಾನ ಸ್ವರೂಪನಾಗಿರುವ ಅವಧೂತನು ಅನಾಮಯನಾಗಿರುವ ನಿರ್ವಾಣವನ್ನು ಹೊಂದುತ್ತಾನೆ. ಮೂರ್ತ-ಅಮೂರ್ತ ರೂಪವಿಲ್ಲದೆ, ಆದಿ-ಮಧ್ಯ-ಅಂತ್ಯಗಳಿಲ್ಲದೆ ಇರುವಾಗ ಬಲ-ಅಬಲಗಳಿಲ್ಲದೆ ನಿರ್ವಾಣವನ್ನು ಹೊಂದುತ್ತಾನೆ.

### ಅವಧೂತ ಗೀತೆ

ಧರ್ಮದ ಮರ್ಮಜ್ಞನಾದ ಯದುರಾಜನು ಒಂದು ಸಲ ಅವಧೂತ ಚರ್ಯೆಯಿಂದ ಭೂಮಂಡಲದ ಮೇಲೆ ನಿರ್ಭೀತನಾಗಿ ಸಂಚಾರ ಮಾಡುತ್ತಿದ್ದ ದತ್ತಾತ್ರೇಯ ಮಹಾರಾಜರಿಂದ ಪಡೆದ ಉಪದೇಶವನ್ನು ಶ್ರೀಮದ್ಭಾಗವತದ ಏಕಾದಶಸ್ಕಂಧದಲ್ಲಿ ಈ ರೀತಿಯಾಗಿ ವಿವರಿಸಲಾಗಿದೆ.

ದತ್ತಾತ್ರೇಯರ ಅಲರ್ಕ,ಪ್ರಹ್ಲಾದ,ಯದು,ಕಾರ್ತವೀರ್ಯನಿಗೆ ಜ್ಞಾನೋಪದೇಶ ಮಾಡಿದರು. ಎಲ್ಲ ಋಷಿಗಳೂ,ಸಿದ್ಧ ಪುರುಷರೂ,ಮಹಾಮೇಧಾವಿಗಳೂ ಅವರನ್ನು ಪೂಜಿಸುತ್ತಿದ್ದರು. ಶ್ರೀಗುರುವಿನ ಶಿಷ್ಯವರ್ಗ ಮಹಾಸಾಗರದಂತೆ ಗುರುವು ಹೋದೆಡೆಗಳಲ್ಲೆಲ್ಲ ಜನಸಂದಣಿ ಹೆಚ್ಚುತ್ತಿದ್ದುದರಿಂದ ಒಮ್ಮೆ ದತ್ತಾತ್ರೇಯರು ನದಿಯೊಂದರಲ್ಲಿ ಮುಳುಗಿ ಮೂರುದಿನ ಧ್ಯಾನಮಗ್ನರಾದರು. ಏಕಾಂತ ಪ್ರಿಯರೂ, ದಿಗಂಬರರೂ,ದಿವ್ಯತೇಜೋವಿರಾಜಮಾನರೂ ಆದ ದತ್ತಾತ್ರೇಯರು ಅವಧೂತರಾದರು. ಅನಂತರ ಆನಂದದಿಂದ ಅರಣ್ಯಗಳಲ್ಲಿ ಅಂಜಿಕೆಯಿಲ್ಲದೆ ಅಲೆದಾಡಲಾರಂಭಿಸಿದರು.

ಧರ್ಮಜ್ಞನಾದ ಯದುರಾಜನು ತ್ರಿಕಾಲದರ್ಶಿ ತರುಣ ಅವಧೂತ ಬ್ರಾಹ್ಮಣನು ನಿರ್ಭಯನಾಗಿ ಸಂಚರಿಸುವುದನ್ನು ನೋಡಿ "ಹೇ ಬ್ರಹ್ಮನ್", ನೀವು ಯಾವ ಕರ್ಮವನ್ನೂ ಮಾಡುತ್ತಿಲ್ಲ. ಆದರೂ ಇಂದ್ರಿಯ ವಿಷಯಗಳಲ್ಲಿ ಲೋಕ ವಿಲಕ್ಷಣವಾದ ವಿರಕ್ತಿಯು ನಿಮಗೆ ಹೇಗೆ ಉಂಟಾಯಿತು? ಪರಮ ವಿದ್ವಾಂಸರಾಗಿದ್ದರೂ ಬಾಲಕನಂತೆ ಪ್ರಪಂಚದಲ್ಲಿ ಅಲೆದಾಡುತ್ತಿರುವಿರಲ್ಲಾ! ಪ್ರಾಯಶಃ ಜನರು ಒಂದಲ್ಲ ಒಂದು ಕಾಮನೆಯಿಂದಲೇ ಧರ್ಮ ಅರ್ಥ,ಕಾಮದಲ್ಲಿ ಹಾಗೂ ತತ್ತ್ವಜ್ಞಾನದ ಇಚ್ಛೆಯಲ್ಲಿ ಪ್ರವೃತ್ತರಾಗಿ ನಾನಾ ಕಾರ್ಯಗಳಲ್ಲಿ ತೊಡಗುವರು. ನೀವು ಮಾತ್ರ ಜ್ಞಾನ ಸೌಂದರ್ಯದಿಂದ ಸಕಲ ಆಕರ್ಷಕ ಗುಣಗಳಿಂದ ಮುಕ್ತರಾಗಿರುವಿರಿ. ಅಮೃತಭಾಗಗಳಾಗಿದ್ದೀರ ಆದರೂ ನೀವು ಜಡ ಉನ್ಮತ್ತನಂತೆ, ಅವಧೂತನಂತೆ ಪ್ರಪಂಚದಲ್ಲಿ ಅಲೆದಾಡುತ್ತಿರುವಿರಿ. ಗಂಗೆಯ ನೀರಿನಲ್ಲಿ ನಿಂತ ಆನೆಗೆ ದಾವಾನಲದ ಶಾಖ ತಗಲದೆ ಶೀತಲವನ್ನೇ ಅನುಭವಿಸುವಂತೆ ನೀವು ಈ ಪ್ರಪಂಚದ ಯಾವ ತಾಪವೂ ಇಲ್ಲದೆ ಸ್ವಸ್ಥರಾಗಿರುವಿರಲ್ಲ! ಯಾರ ಕುರಿತು ಕಿಂಚಿತ್ತಾದರೂ ಆಸಕ್ತಿಇಲ್ಲ. ನೀವು ನಿಮ್ಮ ಶುದ್ಧ ಸ್ವರೂಪದಲ್ಲಿಯೇ ಸದಾ ಸ್ಥಿತರಾಗುವಿರಿ. ನಿಮ್ಮ ಈ ಅನಿರ್ವಚನೀಯ ಆನಂದದ ಕಾರಣವೇನು? ಇದನ್ನು ತಾವು ನನಗೆ ತಿಳಿಸುವ ಕೃಪೆ ಮಾಡಬೇಕೆಂದು ನಿವೇದಿಸಿಕೊಳ್ಳುತ್ತಾನೆ. ಆಗ ದತ್ತಾತ್ರೇಯ ರೂಪ ಬ್ರಾಹ್ಮಣನು ಈ ಬಗೆಯ ಆತ್ಮಜ್ಞಾನವನ್ನು ಪಡೆಯಲು,ಲೋಕಾಭಿಮಾನವನ್ನು ತೊರೆಯಲು,ನನಗೆ ಬುದ್ಧಿ ಕಲಿಸಿದ ಗುರುಗಳು ಇಪ್ಪತ್ತಾನಾಲ್ಕು ಮಂದಿಗಳೆಂದು ತಿಳಿಸಿ. ಯಾವ ಯಾವ ಗುರುಗಳಿಂದ ಯಾವ ಯಾವ ಜ್ಞಾನವನ್ನು ಪಡೆದಿರುವೆ ಎಂಬುದನ್ನು ತಿಳಿಸುತ್ತಾರೆ.

ನಮ್ಮಲ್ಲಿ ಒಂದು ತಿಳಿವಳಿಕೆ ಇದೆ - ಗುರು ದೊಡ್ಡವನಾಗಿರಬೇಕು. ಶಿಷ್ಯ ಸಣ್ಣವನಾಗಿರಬೇಕು. ಈ ದೊಡ್ಡದು ಯಾವುದರಲ್ಲಿ? ಅವರು ಕಲಿತ ವಿಷಯದಲ್ಲಿ ಹೊರತು ಪ್ರಾಯದಲ್ಲಿಲ್ಲ, ಸಿರಿವಂತಿಕೆಯಲ್ಲಿಲ್ಲ. ಅಂತಸ್ತಿನಲ್ಲಲ್ಲ. ಒಂದು ಮೀನಿನಿಂದ ಒಂದು ದುಂಬಿಯಿಂದ, ಒಂದು ಜಿಂಕೆಯಿಂದ ಪಾಠ ಕಲಿಯಬಹುದು ಅನುಭವದಲ್ಲಿ ಅವುಗಳು ನಮಗಿಂತ ಹಿರಿದಾಗಿರುವುದರಿಂದ ಅವುಗಳನ್ನು ಗುರುಗಳೆಂದು ಸ್ವೀಕರಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಗುರು ಪೂರ್ಣಿಮೆ ಹಿನ್ನೆಲೆಯಲ್ಲಿ ಅವಧೂತ ಗೀತೆಯನ್ನು ತೆರೆದು ಓದಬೇಕಷ್ಟೆ. ತೆರೆಯುವುದೆಂದರೆ ಒಳಗಣ್ಣು ತೆರೆಯುವುದು. ಹೊರಗಿನ ಪ್ರಕೃತಿಗೆ ತೆರೆದುಕೊಳ್ಳುವುದು. ಅವಧೂತರು ಹೇಳಿದ ಇಪ್ಪತ್ತನಾಲ್ಕು ಗುರುಗಳ ಮುಂದೆ ಕಣ್ತೆರೆಯುವುದು.

ಅವಧೂತಗೀತೆ ಅಥವಾ ಗುರುಗೀತೆ ಪ್ರತಿಪಾದಿಸುವ ತತ್ತ್ವಗಳು ಇವತ್ತಿಗೂ ಪ್ರಸ್ತುತ. ಕಲಿಯುವುದಿದ್ದರೆ ಯಾರಿಂದಲಾದರೂ ಕಲಿಯಬಹುದು. ನಿಸರ್ಗವೇ ಮೊದಲ ಗುರು. ನಿಸರ್ಗದಲ್ಲಿರುವ, ನಿರ್ಲಕ್ಷಿತವೆಂದು ಪರಿಭಾವಿಸುವ ಪುಟ್ಟ ಜೀವಿಯಲ್ಲಿ ಅನುಕರಣೀಯ ಪಾಠವಿದೆ. ಅದನ್ನು ಕಲಿಯುವ ತಾಳ್ಮೆ ಮಾತ್ರ ನಮಗೆ ಬೇಕು. ಆ ತಾಳ್ಮೆಯನ್ನು ಹೊಂದಿದಾಗ ಲಷ್ಟೇ ನಮ್ಮ ಬದುಕಿನಲ್ಲಿ ಪ್ರತಿದಿನವೂ ಗುರುಪೂರ್ಣಿಮೆ.

ಭಾಗವತದಲ್ಲಿ ಗುರು ದತ್ತಾತ್ರೇಯರು ಅವಧೂತನಾಗಿ ಯದು ಮಹಾರಾಜನಿಗೆ ಈ 'ಪ್ರಕೃತಿ ಗುರು'ತತ್ತ್ವವನ್ನು

ಬೋಧಿಸುತ್ತಾರೆ. ಇದೇ ಅವಧೂತ ಗೀತೆ. ಇದನ್ನು ಮುಂದೆ ಶ್ರೀ ಕೃಷ್ಣನು ತನ್ನ ಅವತಾರ ಸಮಾಪ್ತಿಯ ಸಂದರ್ಭದಲ್ಲಿ ಆಪ್ತನಾದ ಉದ್ಧವನಿಗೆ ಮರು ನಿರೂಪಿಸುತ್ತಾನೆ. ಇದನ್ನು ಉದ್ಧವ ಗೀತೆಯೆಂದು ಕರೆಯಲಾಗುತ್ತದೆ. ಅಜ್ಞಾನದ ಅಮಾವಾಸ್ಯೆಯಲ್ಲಿ ತೊಳಲಾಡುವ ಜನಸಮುದಾಯಕ್ಕೆ ಅವಧೂತ ಗೀತೆ ಬೆಳದಿಂಗಳಿನಂತೆ ಒದಗಿಬರುತ್ತದೆ.

ಕಲಿಯಬೇಕೆಂಬ ಇಚ್ಛೆಯುಳ್ಳವನು ಅನೇಕರಿಂದ ಅನೇಕ ವಿಷಯಗಳನ್ನು ಕಲಿಯಲು ಸಾಧ್ಯವಿದೆ. ಒಬ್ಬನೇ ಗುರುವಿರಬೇಕೆಂಬ ನಿಯಮವೇನೂ ಇಲ್ಲ. ಗುರುವಾದ ಅವಧೂತನಿಗೆ 24 ಗುರುಗಳಿದ್ದಾರೆ.ಅವರೆಲ್ಲರಿಂದಲೂ ಆತ ವಿವಿಧ ಸಂಗತಿಗಳನ್ನು ತಿಳಿದುಕೊಂಡು ಅವಧೂತನಾಗಿದ್ದಾನೆ.ಆ ಇಪ್ಪತ್ತನಾಲ್ಕು ಗುರುಗಳ ಪಟ್ಟಿ ಇದು .

ಪೃಥವೀ ವಾಯುರಾಕಾಶಮಾಪೋಗ್ನಶ್ಚಂದ್ರಮಾ ರವಿಃ।

ಕಪೋತೋಽಜಗರಃ ಸಿಂಧುಃ ಪತಂಗೋ ಮಧುಕೃದ್ಗಜಃ॥

ಮಧುಹಾ ಹರಿಣೋ ಮೀನಃಪಿಂಗಲಾ ಕುರರೋರ್ಭಕಃ॥

ಕುಮಾರೀ ಶರಕೃತ್ಸರ್ಪ ಊರ್ಣನಾಭಿಃ ಸುಪೇಶಕೃತ್ಃ

ಏತೇ ಮೇ ಗುರವೋ ರಾಜನ್ ಚತುರ್ವಿಂಶರಾಶ್ರಿತಾಃ॥

(1) ಭೂಮಿಯಿಂದ ತಾಳ್ಮೆ, ಪರೋಪಕಾರವನ್ನು, (2) ಜಲದಿಂದ ಶುಚಿತ್ವವನ್ನು, (3) ವಾಯುವಿನಿಂದ ನಿರ್ಲಿಪ್ತತೆ. (4) ಅಗ್ನಿಯಿಂದ ತಪಸ್ಸು. (5) ಆಕಾಶದಿಂದ ವ್ಯಾಪಕತನವನ್ನು, (6) ಚಂದ್ರನಿಂದ ಆತ್ಮನು ಪೂರ್ಣನೆಂಬುದನ್ನು, (7) ಸೂರ್ಯನಿಂದ ಏಕತ್ವವನ್ನು, (8) ಪಾರಿವಾಳದಿಂದ ಬಂಧನಕ್ಕೆ ಕಾರಣ ಮೋಹ.(9)ಅಜಗರದಿಂದ ದೊರೆತಷ್ಟರಿಂದ ತೃಪ್ತಿ. (10) ಸಾಗರದಿಂದ ಅವಿಚಲತೆ. (11) ಪತಂಗದಿಂದ ವಿಷಯಾಸಕ್ತಿಯಿಂದ ದುಃಖ.12)ಭ್ರಮರದಿಂದ ಮಧುಕರವೃತ್ತಿಯನ್ನು, 13) ಮಧುಪನಿಂದ ಸಂಗ್ರಹಿಸಿದರೂ ಪರರ ಪಾಲು. 14) ಗಂಡಾನೆಯಿಂದ ಬಲಶಾಲಿಯಾದರೂ ಕಾಮಕ್ಕೆ ವಶವಾದರೆ ವೇದನೆಯು ನಿಶ್ಚಿತ. 15)ಜಿಗರೆಯ ಗಾನಕ್ಕೆ ಮನಸೋತು ಸೆರೆ ಸಿಕ್ಕುವಂತೆ ಎಂದೂ ರಾಗಗಳಿಗೆ ಕಿವಿಕೊಡಬಾರದು. 16) ಮೀನು ಆಹಾರದ ಆಸೆಯಿಂದ ಬಲೆಗೆ ಬೀಳುವಂತೆ ಜಿಹ್ವಾ ಚಾಪಲ್ಯವಿರಬಾರದು. 17) ವಿದೇಹ ನಗರದ ಪಿಂಗಳೆಯಂತೆ ಸಮಾಧಾನವನ್ನು 18) ಕಾಗೆಯು ಕಚ್ಚಿಕೊಂಡ ಆಹಾರವನ್ನು ಕಂಡ ಇತರ ಪಕ್ಷಿಗಳ ಅಟ್ಟಿಸಿಕೊಂಡು ಬರುವಂತೆ ವಿಷಯಾನಂದಗಳ ತ್ಯಾಗದಿಂದ ಸುಖ ಪ್ರಾಪ್ತಿ .19)ಮಾತೆಯ ಮಡಲಿನಲ್ಲಿ ಮಗು ಮಲಗಿರುವಂತೆ ಪ್ರಸನ್ನತೆಯನ್ನು,20) ಕನ್ಯೆಯು ತನ್ನ ದುಡಿಮೆಯು ನಂತರಿಗೆ ತಿಳಿಯದಂತೆ ನಡೆದಾಗ ಏಕಾಂತವೇ ಸುಖವೆಂಬುದನ್ನು. 21) ಸರ್ಪವು ಗೆಜ್ಜಲು ಗೂಡನ್ನು ಸೇರುವಂತೆ ಸಂನ್ಯಾಸಿಯು ಮಂದಿರ ಗುಹೆಗಳಲ್ಲಿರಬೇಕೆಂದು. 22) ಬಿಲ್ಲುಗಾರನ ಗುರಿಯು ಏಕಪ್ರಕಾರವಾಗಿರುವಂತೆ ಏಕಾಗ್ರತೆಯನ್ನು,23) ಜೇಡರ ಹುಳುವು ಬಲೆಯನ್ನು ಹೆಣೆಯುವಂತೆ ಪರಮಾತ್ಮನನ್ನೇ ಧ್ಯಾನಿಸಬೇಕು.24) ಕಣಜವು ಆಗುವಂತೆ ಆತ್ಮಧ್ಯಾನದಿಂದ ಮೋಕ್ಷವನ್ನು ಪಡೆಯಬೇಕೆಂಬ ಪಾಠಗಳನ್ನು ಕಲಿತೆನು.

ಈ ಎಲ್ಲವು ಅವಧೂತನಿಗೆ ಗುರುವಾಗಿ ಅನೇಕ ಸಂಗತಿಗಳನ್ನು ಕಲಿಸಿರುತ್ತವೆ. ಇವರೆಲ್ಲರೂ ಅವಧೂತನನ್ನು ಶಿಷ್ಯನನ್ನಾಗಿ ಸ್ವೀಕರಿಸದಿದ್ದರೂ ಅವಧೂತರು ಮಾತ್ರ ಇವರೆಲ್ಲರನ್ನೂ ಗುರುವೆಂದು ಸ್ವೀಕರಿಸಿದ್ದಾರೆ. ಕಲಿಯಬೇಕೆಂಬ ಇಚ್ಛೆಯುಳ್ಳವರು ಯಾವಾಗಲೂ ಎಲ್ಲರಿಂದಲೂ ಏನ್ನನಾದರೂ ಕಲಿಯುತ್ತಲೇ ಇರುತ್ತಾರೆ.

ವೈರಾಗ್ಯವನ್ನು ಪ್ರತಿಪಾದಿಸುವುದು ಅವಧೂತ ತತ್ತ್ವದ ಮುಖ್ಯ ಆಶಯ. ಲೌಕಿಕರಾದ ನಾವು ಸಂಸಾರವನ್ನು ತೊರೆದು ವೈರಾಗ್ಯವನ್ನು ಹೊಂದುವ ಬಗ್ಗೆ ಯೋಚಿಸುವುದು ಅಸಂಭವ. ಆದರೆ, ಮಿತವಾದ ಆಸೆ, ಆಕಾಂಕ್ಷೆಗಳನ್ನು ಇರಿಸಿಕೊಳ್ಳುವುದು ಕಷ್ಟವಲ್ಲ.ನಿರೀಕ್ಷೆಗಳಿಲ್ಲದ ಬದುಕಿನಲ್ಲಿ ನಿರಾಶೆಯೂ ಇಲ್ಲ ! ಅದನ್ನೇ ಅವಧೂತ ಗೀತೆ ಬೋಧಿಸುತ್ತದೆ. ಅದು ಬೋಧಿಸುವ ತತ್ತ್ವ ಪ್ರಖರ ಬೆಳಕೂ ಅಲ್ಲ. ಕತ್ತಲೆಯೂ ಅಲ್ಲ. ಹಿತವಾದ ಪೂರ್ಣಚಂದ್ರನ ಬೆಳಕು !

ಅವಧೂತರು ತಾವು 24 ಗುರುಗಳಿಂದ ಯಾವ ಯಾವ ಸಂಗತಿ ತಿಳಿದುಕೊಂಡೆನು ಎಂಬುದನ್ನು ವಿಸ್ತಾರವಾಗಿ ನಿರೂಪಿಸಿದ್ದಾರೆ.

1. ಭೂಮಿಯು ಮೊದಲನೆಯ ಗುರುವಾಗಿದೆ. ಇದರಿಂದ ಸಹನಶೀಲತೆಯನ್ನು ಮತ್ತು ಪರೋಪಕಾರವನ್ನು ಕಲಿಯಬಹುದಾಗಿದೆ.ಭೂಮಿಯ ಮೇಲೆ ಮನುಷ್ಯ, ಕ್ರಿಮಿ, ಕೀಟ, ಪಶು, ಪಕ್ಷಿ, ಮುಂತಾದ ಅನೇಕ ಜೀವಿಗಳು ಅಡ್ಡಾಡುತ್ತವೆ. ಓಡಾಡುತ್ತವೆ. ಮಲಮೂತ್ರಾದಿಗಳನ್ನು ವಿಸರ್ಜಿಸುತ್ತದೆ.ಆದರೂ ಭೂದೇವಿಯು ಸಿಟ್ಟಿಗೇಳುವುದಿಲ್ಲ.ಈ ಸಹನಾಗುಣವನ್ನು ನಾವು ಕಲಿಯಬೇಕಾಗಿವೆ. ಭೂಮಿಯ ಮತ್ತೊಂದು ರೂಪವಾದ ಪರ್ವತ, ನದಿ,ಸಸ್ಯ, ಗಿಡ ಮರ ಮುಂತಾದವುಗಳು ಪರೋಪಕಾರಕ್ಕಾಗಿಯೇ ಬದುಕಿರುತ್ತವೆ. ಅವು ನಿಃಸ್ವಾರ್ಥ ಜೀವನವನ್ನು ಪ್ರತಿನಿಧಿಸುತ್ತವೆ.

2. ಎರಡನೇಯ ಗುರು ವಾಯು. ಇದರಿಂದ ನಿರ್ಲಿಪ್ತತೆಯನ್ನು ಕಲಿಯಬಹುದಾಗಿದೆ. ವಾಯು ಎಲ್ಲೆಡೆಗೂ ಸಂಚರಿಸಿದರೂ ಅದು ನಿರ್ಗುಣವಾಗಿರುತ್ತದೆ. ಸ್ಮಶಾನದಲ್ಲಿ, ಹೂವಿನ ತೋಟದಲ್ಲಿ, ದೇವಾಲಯದಲ್ಲಿ ಅಥವಾ ಮನೆಯಲ್ಲಿ ಬೀಸುವ

ಗಾಳಿಯು ಏಕರೂಪವಾಗಿರುತ್ತದೆ ಸುಗಂಧವಾಗಲಿ ಅಥವಾ ದುರ್ಗಂಧವಾಗಲಿ ವಾಯುವಿಗೆ ಸಂಬಂಧಿಸಿಲ್ಲ.

3. ಆಕಾಶವೂ ಗುರು ಸ್ಥಾನದಲ್ಲಿದೆ. ಆದರಿಂದ ಅಖಂಡತೆಯ ಮತ್ತು ನಿಸ್ಸಂಗತ್ವದ ಗುಣವನ್ನು ಕಲಿಯಬೇಕು. ಆಕಾಶವು ಸರ್ವತ್ರ ವ್ಯಾಪಿಸಿದ್ದರೂ ಅಖಂಡತೆಯನ್ನೂ ಹೊಂದಿದೆ. ಆದು ಯಾವುದೇ ವಸ್ತುವಿನ ಜೊತೆಗೆ ಸಂಬಂಧವನ್ನು ಬೆಳೆಸಿಕೊಳ್ಳುವುದಿಲ್ಲ. ಮಳೆ, ಗುಡುಗು, ಮಿಂಚು ಮುಂತಾದವುಗಳು ಆಕಾಶದಲ್ಲಿ ನಡೆದರೂ ಅವುಗಳ ಜೊತೆಗೆ ಆಕಾಶವು ಯಾವ ಸಂಬಂಧವನ್ನು ಇಟ್ಟುಕೊಂಡಿರುವುದಿಲ್ಲ.ಅದೇ ರೀತಿಯಾಗಿ ಆತ್ಮನಿಗೆ ದೇಹದ ಯಾವ ಕ್ರಿಯೆಗಳೂ ಸಂಬಂಧಿಸಿರುವುದಿಲ್ಲ ಎಂಬುದೇ ತಿರುಳು.

4. ನೀರು ಎಂದರೆ ತೀರ್ಥವೆಂದರ್ಥ. ಪವಿತ್ರವಾದ ನೀರು ಯಾವ ರೀತಿಯಾಗಿ ಸ್ವಚ್ಛವಾಗಿರುವುದೋ ಮತ್ತು ಮಧುರವಾಗಿರುವುದೋ ಅದೇ ರೀತಿಯಾಗಿ ಸಜ್ಜನರ ಸ್ವಾಭಾವವಿರುವುದು.ಸತ್ಪುರುಷರು ಪರರ ಉದ್ಧಾರಕ್ಕಾಗಿಯೇ ತೀರ್ಥಗಳಂತೆ ತಮ್ಮ ಜೀವನವನ್ನು ಮುಡಿಪಾಗಿ ಇಟ್ಟಿರುತ್ತಾರೆ.

5. ಅಗ್ನಿಯು ಸಂಗ್ರಹ ಮತ್ತು ಪರಿಗ್ರಹದಿಂದ ದೂರವಿರುತ್ತಾನೆ. ಅವನು ಸರ್ವಭಕ್ಷನಾದರೂ ನಿರ್ದೋಷಿಯಾಗಿದ್ದಾನೆ. ಅವನು ಸ್ವೀಕರಿಸಿದ ಎಲ್ಲ ವಸ್ತುಗಳನ್ನು ಭಸ್ಮ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಅಗ್ನಿಯಂತೆ ನಾವು ಸಂಗ್ರಹದಿಂದ ದೂರವಿರಬೇಕು. ಅಗ್ನಿಯು ಎಲ್ಲ ವಸ್ತುಗಳನ್ನು ಸುಟ್ಟು ಹಾಕುವಂತೆ ನಾವು ನಮ್ಮ ಪಾಪಗಳನ್ನು ಸುಟ್ಟು ಹಾಕುವುದನ್ನು ಕಲಿಯಬೇಕು. ಅಗ್ನಿಯು ಸಣ್ಣ ಸಣ್ಣ ಸಮಿಧೆ, ದೊಡ್ಡ ದೊಡ್ಡ ಮರಗಳಲ್ಲಿ ಅವ್ಯಕ್ತವಾಗಿರುವಂತೆ ಆತ್ಮನು ಎಲ್ಲ ಸಣ್ಣ ಮತ್ತು ದೊಡ್ಡ ವಸ್ತುಗಳಲ್ಲಿ ಇರುತ್ತಾನೆ ಎಂಬುದನ್ನು ಕಲಿಯಬಹುದು.

6. ಚಂದ್ರನಿಂದ ನಾವು ಕೆಲವು ಸಂಗತಿಗಳನ್ನು ಕಲಿಯಬೇಕು.ಚಂದ್ರನು ಶುಕ್ಲಪಕ್ಷದಲ್ಲಿ ವರ್ಧಿಸುತ್ತಾನೆ ಮತ್ತು ಕೃಷ್ಣಪಕ್ಷದಲ್ಲಿ ಕ್ಷೀಣಿಸುತ್ತಾ ಹೋಗುವನು.ಈ ವೃದ್ಧಿ-ಕ್ಷಯಗಳು ಕೇವಲ ತೋರಿಕೆಗೆ ಮಾತ್ರ. ಅವು ನಿಜವಾಗಿ ಚಂದ್ರನಿಗೆ ಇರುವುದಿಲ್ಲ.ಇದೇ ರೀತಿಯಾಗಿ ನಮ್ಮ ದೇಹದ ಬೆಳವಣಿಗೆ ಮತ್ತು ಕುಗ್ಗುವಿಕೆಯೂ ಸಹ ಆತ್ಮನಿಗೆ ಸಂಬಂಧಿಸಿರುವುದಿಲ್ಲ. ದೇಹದ ಹುಟ್ಟು ಆತ್ಮ ಹುಟ್ಟು ಅಲ್ಲ. ದೇಹದ ನಾಶ ಆತ್ಮನ ನಾಶವಲ್ಲ.ಆತ್ಮನ ಸ್ವರೂಪ ಬದಲಾಗುವುದಿಲ್ಲ.ಇದನ್ನು ಚಂದ್ರನಿಂದ ಕಲಿಯಬಹುದು.

7.ಸೂರ್ಯನು ಬೇಸಿಗೆಯಲ್ಲಿ ತನ್ನ ಕಿರಣಗಳಿಂದ ನೀರನ್ನು ಸಂಗ್ರಹಿಸುತ್ತಾನೆ. ಸಂಗ್ರಹಿಸಿದ ನೀರನ್ನು ಮೋಡಗಳ ಮೂಲಕ ಪುನಃ ತಿರುಗಿ ಕೊಡುತ್ತಾನೆ.ಅವನಿಗೆ ಸಂಗ್ರಹಿಸುವಾಗ ಸ್ವಾರ್ಥವಿರುವುದಿಲ್ಲ,ಕೊಡುವಾಗ ಅಹಂಕಾರವಿರುವುದಿಲ್ಲ.ತೆಗೆದುಕೊಂಡಿರುವುದಕ್ಕಿಂತಲೂ ಹೆಚ್ಚು ಕೊಡುತ್ತಾನೆ. ಸೂರ್ಯನು ಒಬ್ಬನೇ ಇದ್ದರೂ ಅವನ ಪ್ರತಿಬಿಂಬ ಸಾವಿರಾರು ನೀರು ತುಂಬಿದ ಪಾತ್ರೆಗಳಲ್ಲಿ ಬಿದ್ದು ಸಾವಿರಾರು ಸೂರ್ಯರಿದ್ದಂತೆ ಭಾಸವಾಗುತ್ತದೆ.ಆದರೆ ಅದು ಅಜ್ಞಾನ.ಅದೇ ರೀತಿಯಾಗಿ ಆತ್ಮನೊಬ್ಬನೇ ಇದ್ದರೂ ಅನೇಕ ದೇಹಗಳಲ್ಲಿ ಅವನ ಅಂಶವನ್ನು ಕಂಡು,'ಅನೇಕ ಆತ್ಮರಿದ್ದಾರೆ' ಎಂದು ಭಾವಿಸುವುದೂ ಅಜ್ಞಾನವಾಗಿದೆ. ಹೀಗೆ ಸೂರ್ಯನಿಂದ ಎರಡು ಪಾಠ ಕಲಿಯಬಹುದು.

8. ಅವಧೂತರಿಗೆ ಕಪೋತಪಕ್ಷಿಯೊಂದು ಗುರುವಾಗಿ ಪರಿಣಮಿಸಿ ಸಂಸಾರಮೋಹದ ದುರಂತವನ್ನು ತಿಳಿಸಿ ಕೊಟ್ಟಿತು. ಒಂದು ಕಾಡಿನಲ್ಲಿ ಪಾರಿವಾಳ ಪಕ್ಷಿಯೊಂದು ತನ್ನ ಪತ್ನಿಯೊಡನೆ ಸಂತಸದಿಂದ ಜೀವನವನ್ನು ನಡೆಸುತ್ತಿತ್ತು. ಕಾಲಕ್ರಮೇಣ ಮರಿಗಳು ಹುಟ್ಟಿದವು. ಗಂಡು ಪಾರಿವಾಳವು ಪತ್ನಿ, ಪುತ್ರರಿಗಾಗಿ ಕಾಳುಗಳನ್ನು ಸಂಗ್ರಹಿಸಿಕೊಂಡು ಬರುತ್ತಿತ್ತು. ಮರಿಗಳು ಸ್ವಲ್ಪ ದೊಡ್ಡದಾದ ಅನಂತರ ತಾಯಿ ಪಕ್ಷಿಯೂ ಆಹಾರಕ್ಕಾಗಿ ಗೂಡಿನಿಂದ ಹೊರಬಿದ್ದಿತು. ಮರಿಗಳು ಆಕಸ್ಮಿಕವಾಗಿ ಗೂಡಿನಿಂದ ಹೊರಬಂದು ಬೇಡನ ಬಲೆಯಲ್ಲಿ ಬಂಧಿತವಾದವು. ಗೂಡಿಗೆ ಮರಳಿದ ತಾಯಿಯು ಮರಿಗಳನ್ನು ಕಾಣದೆ ಅತ್ತಿತ್ತ ಹುಡುಕಿದಾಗ ಬಲೆಯಲ್ಲಿ ಬಿದ್ದಿರುವ ಮರಿಗಳನ್ನು ಕಂಡು ದುಃಖಿಸುತ್ತ ಮೋಹದಿಂದ ಬಲೆಯಲ್ಲಿ ತಾನೂ ಬಿದ್ದಿತು. ಅನಂತರ ಗೂಡಿಗೆ ಬಂದ ಗಂಡು ಕಪೋತವು ಹೆಂಡತಿ, ಮಕ್ಕಳನ್ನು ಕಾಣದೆ ಅವರನ್ನು ಹುಡುಕಲು ಪ್ರಯತ್ನಿಸಿತು. ಕೊನೆಗೆ ಬಲೆಯಲ್ಲಿ ಸಿಕ್ಕಿ ಬಿದ್ದಿರುವ ಅವರನ್ನು ಕಂಡು ಯಾವ ಉಪಾಯವೂ ಫಲಿಸದೆ ವ್ಯಾಮೋಹದಿಂದ ತಾನೂ ಸಹ ಅದೇ ಬಲೆಯಲ್ಲಿ ಬಿದ್ದುಬಿಟ್ಟಿತು.

9. ಅಜಗರ ಅರ್ಥಾತ್ ಹೆಬ್ಬಾವು ತನ್ನ ವರ್ತನೆಯ ಮೂಲಕ ಗುರುವಾಗಿರುತ್ತದೆ. ಅಜಗರವು ಆಹಾರಕ್ಕಾಗಿ ಯಾವ ಪ್ರಯತ್ನವನ್ನು ಮಾಡದೇ ನಿಶ್ಚಲವಾಗಿ ಬಿದ್ದು ಕೊಂಡಿರುತ್ತದೆ. ದೈವ ಪ್ರೇರಣೆಯಿಂದ ತನ್ನ ಸಮೀಪಕ್ಕೆ ಬಂದ ಪ್ರಾಣಿಗಳು ಮಾತ್ರ ಆಹಾರವನ್ನಾಗಿ ಮಾಡಿಕೊಳ್ಳುತ್ತದೆ. ನಾಲಿಗೆಯ ರುಚಿಯನ್ನು ಅದು ಇಟ್ಟುಕೊಂಡಿರುವುದಿಲ್ಲ. ಅದರ ಹಾಗೆಯೇ ಮನುಷ್ಯರು ಆಹಾರಕ್ಕಾಗಿ ಯಾವ ಪ್ರಯತ್ನವನ್ನು ಮಾಡದೆ ಅಯಾಚಿತವಾಗಿ ಮತ್ತು ಅಪ್ರಯತ್ನವಾಗಿ ಬಂದ ಆಹಾರವನ್ನು ಮಾತ್ರ ಸ್ವೀಕರಿಸಬೇಕು.ರಸನೇಂದ್ರಿಯಕ್ಕೆ ದಾಸನಾಗದೆ ಶರೀರವು ಸದೃಢವಾಗಿದ್ದರೂ ಒಂದೆಡೆಗೆ ಬಿದ್ದು ಕೊಂಡಿರಬೇಕು. ಈ ವ್ರತವನ್ನು 'ಅಜಗರವ್ರತ' ವೆಂದು ಕರೆಯುವುದು.

10. ಸಮುದ್ರದಿಂದ ಗಾಂಭೀರ್ಯವನ್ನು ಕಲಿಯಬೇಕು. ಸಮುದ್ರದಲ್ಲಿ ಅನವರತವಾಗಿ ಅಲೆಗಳ ಹೊಯ್ದಾಟವಿದ್ದರೂ ಸಮುದ್ರವು ತನ್ನ ಅನಂತತೆಯನ್ನು ಗಾಂಭೀರ್ಯವನ್ನು ಮತ್ತು ಪ್ರಸನ್ನತೆಯನ್ನು ಕಳೆದುಕೊಳ್ಳುವುದಿಲ್ಲ. ಮಳೆಗಾಲದಲ್ಲಿ ನೀರು ಅಧಿಕವಾದಾಗ ಮತ್ತು ಬೇಸಿಗೆಯಲ್ಲಿ ಕಡಿಮೆಯಾದಾಗ ತನ್ನ ಪಾತ್ರದಲ್ಲಿ ಯಾವ ಬದಲಾವಣೆಯನ್ನೂ ಅದು ತೋರುವುದಿಲ್ಲ.

11. ಪತಂಗ ಅಥವಾ ದೀಪದಹುಳುವು ಬೆಂಕಿಯಿಂದ ಆಕರ್ಷಿತನಾಗಿ ಅದನ್ನು ಮುಟ್ಟಲು ಹೋಗಿ ಅದರಲ್ಲಿಯೇ ಬಿದ್ದು ಸಾಯುತ್ತದೆ. ಅದೇ ರೀತಿಯಾಗಿ ಮನುಷ್ಯನು ಅನೇಕ ರೀತಿಯ ಇಂದ್ರಿಯ ವಿಷಯಗಳಿಗೆ ಆಕರ್ಷಿತನಾಗಿ ಕೊನೆಯಲ್ಲಿ ಅದರ ಮೂಲಕವೇ ಸಾಯುತ್ತಾನೆ. ಇದು ಪತಂಗದಿಂದ ಕಲಿಯುವ ಪಾಠ.

12. ದುಂಬಿಯಿಂದ ಮಧುಕರ ಸ್ಥಿತಿಯನ್ನು ಕಲಿಯುವಂತಿದೆ. ಭ್ರಮರವು ಆಹಾರ ಸಂಗ್ರಹಣೆಯನ್ನು ಮಾಡುವಾಗ ಹೂವಿನಿಂದ ಹೂವಿಗೆ ಹಾರುತ್ತ, ಹೂವುಗಳಿಗೆ ಯಾವ ತೊಂದರೆಯು ಆಗದಂತೆ ಮಕರಂದವನ್ನು ಸಂಗ್ರಹಿಸುವುದು. ಅದರಂತೆ ಸನ್ಯಾಸಿ, ವಾನಪ್ರಸ್ಥಿಯು ಅಥವಾ ಬ್ರಹ್ಮಚಾರಿಯು ಆಹಾರಕ್ಕಾಗಿ ಸಂಚರಿಸುವಾಗ ಗೃಹಸ್ಥನಿಗೆ ತೊಂದರೆಯಾಗದಂತೆ ವರ್ತಿಸಬೇಕು. ಜೋನುಗೂಡನ್ನು ಕಟ್ಟಿ ಜೇನು ಸಂಗ್ರಹಿಸುವ ದುಂಬಿಯಿಂದ ಅತಿಯಾಗಿ ಯಾವುದನ್ನು ಸಂಗ್ರಹಿಸಿಡಬಾರದೆಂಬ ಪಾಠವನ್ನು ಕಲಿಯಬಹುದು.

13. ಆನೆಯು ಹೆಣ್ಣಾನೆಯ ಸಂಗದ ಆಸೆಯಿಂದ ಖೆಡ್ಡಾದ ಬಲೆಗೆ ಸಿಕ್ಕಿಬೀಳುತ್ತದೆ ಅಥವಾ ಮತ್ತೊಂದು ಗಂಡಾನೆಯಿಂದ ಮರಣವನ್ನು ಹೊಂದುತ್ತದೆ. ಅಂಗಸಂಗದ ರುಚಿಯು ಮನುಷ್ಯನ ಅಳಿವಿಗೆ ಕಾರಣವಾಗುತ್ತದೆ. ಗಂಡು ಹೆಣ್ಣಿನ ನಡುವಿರುವ ಆಕರ್ಷಣೆಯ ಸೆಳೆತ ಇಬ್ಬರನ್ನೂ ನಾಶ ಮಾಡುತ್ತದೆ. ಅಂಗಸಂಗದ ಮೋಹದಿಂದ ದೂರವಿರಲು ಸನ್ಯಾಸಿಗೆ ಆನೆ ತಿಳಿಸಿಕೊಡುತ್ತದೆ.

14. ಮಧುಹಾ ಎಂದರೆ ಜೇನು ಸಂಗ್ರಹಿಸುವವನು. ಅವನು ಮತ್ತೊಬ್ಬರು ಸಂಗ್ರಹಿಸಿದ ವಸ್ತುವನ್ನು ಸೆಳೆದುಕೊಂಡು ಕರ್ತೃತ್ವ ಮತ್ತು ಭೋಕ್ತೃತ್ವ ಬೇರೆ ಬೇರೆಯಾಗಿರುತ್ತದೆ ಎಂಬುದನ್ನು ಕಲಿಸುತ್ತಾನೆ. ಜೇನುಹುಳು ಕಷ್ಟಪಟ್ಟು ಮಕರಂದವನ್ನು ಸಂಗ್ರಹಿಸುತ್ತದೆ. ಸಂಗ್ರಹಿಸಿದ ಜೇನನ್ನು ಅದು ರುಚಿ ನೋಡುವ ಪೂರ್ವದಲ್ಲಿಯೇ ಬೇರೆಯವರು ಆ ಜೇನುಗೂಡು ಮತ್ತು ಜೇನು ಹುಳವನ್ನು ನಾಶ ಮಾಡಿ ಜೇನಿನ ರುಚಿ ನೋಡುವರು. ಇದರಿಂದ ಸಂಚಿತಾರ್ಥೋ ವಿನಶ್ಯತಿ ಎಂಬ ಪಾಠವನ್ನು ಕಲಿಯಬಹುದು.

15. ಜಿಂಕೆಗಳು ಶ್ರವಣೇಂದ್ರಿಯ ಸುಖಕ್ಕೆ ಮರುಳಾಗಿ ಬೇಡನ ಬಲೆಗೆ ಬೀಳುತ್ತವೆ. ವಿಭಾಂಡಕ ಮಹರ್ಷಿಯ ಮಗನಾದ ಋಷ್ಯಶೃಂಗನು ಗೀತ - ನೃತ್ಯ - ವಾದ್ಯಾದಿಗಳಿಗೆ ಮನಸೋತು ಪರಮಪುರುಷಾರ್ಥದಿಂದ ವಂಚಿತನಾಗಿದ್ದನು.

16. ನಾಲಿಗೆಯ ಚಾಪಲ್ಯದಿಂದ ಗಾಳಕ್ಕೆ ಬೀಳುವ ಮೀನು ಕೂಡ ಗುರುಸ್ಥಾನದಲ್ಲಿ ನಿಲ್ಲುತ್ತದೆ. ಗಾಳದ ತುದಿಗೆ ಕಟ್ಟಿದ ಹುಳವನ್ನು ಅಥವಾ ಮಾಂಸದ ತುಂಡನ್ನು ತಿನ್ನುವ ತವಕದಲ್ಲಿ ಮೀನು ಗಾಳಕ್ಕೆ ಸಿಕ್ಕಿ ಸಾಯುತ್ತದೆ. ಮನುಷ್ಯನು ನಾಲಿಗೆಯ ಮೇಲೆ ನಿಯಂತ್ರಣ ಸಾಧಿಸದೇ ಇರುವುದರಿಂದ ಅನೇಕ ರೋಗಗಳಿಗೆ ತುತ್ತಾಗುವನು.

17. ಪಿಂಗಳೆ ಎಂಬ ಸ್ವೇಚ್ಛಾಸ್ತ್ರೀಯು ವಿದೇಹ ರಾಜ್ಯದಲ್ಲಿಯೇ ಅತ್ಯಂತ ಸುಂದರಿಯಾಗಿದ್ದಳು. ಅವಳು ಪ್ರತಿ ರಾತ್ರಿಯೂ ಅಲಂಕರಿಸಿಕೊಂಡು ವಿಟಪುರುಷರಿಗಾಗಿ ಕಾಯುತ್ತಿದ್ದಳು. ಅವಳಿಗೆ ಪುರುಷರಿಗಿಂತ ಹಣದ ಮೇಲೆ ಹೆಚ್ಚು ವ್ಯಾಮೋಹವಿತ್ತು. ಆ ಕಾರಣ ವಿಟರಿಂದ ಹೆಚ್ಚು ಹಣವನ್ನು ಅಪೇಕ್ಷಿಸುತ್ತಿದ್ದಳು. ಅವಳ ಸೌಂದರ್ಯಕ್ಕೆ ಮರುಳಾಗಿ ಬಂದವರಾರೂ ಅವಳು ಕೇಳಿದಷ್ಟು ಹಣವನ್ನು ಕೊಡದೆ ಮರಳಿ ಹೋಗುತ್ತಿದ್ದರು. ತನ್ನ ಸೌಂದರ್ಯದ ಕುರಿತು ಬಹಳ ಅಭಿಮಾನವಿದ್ದ ಅವಳು ತನ್ನ ಮೌಲ್ಯವನ್ನು ಕಡಿಮೆ ಮಾಡಿಕೊಳ್ಳಲು ಸಿದ್ಧಳಿರಲಿಲ್ಲ. ಮಧ್ಯರಾತ್ರಿ ಕಳೆದರೂ ಯಾವ ವಿಟನು ಬಾರದಿರುವುದನ್ನು ನೋಡಿ ಅವಳು ಅತ್ಯಂತ ದೀನಳಾದಳು. ದೀನತೆಯಿಂದ ಪರಮವೈರಾಗ್ಯವು ಉಂಟಾಗಿ ಭಗವಂತನನ್ನೇ ಆರಾಧಿಸಲು ಆರಂಭಿಸಿ ಭಗವದ್ಭಕ್ತಳಾದಳು. ವ್ಯಾಮೋಹ ಜೀವನಕ್ಕೆ ಮಾರಕ ಎಂಬುದು ಪಿಂಗಳೆ ಹೇಳಿ ಕೊಡುವ ಪಾಠ.

18. ಒಮ್ಮೆ ಕುರರ ಎಂಬ ಪಕ್ಷಿಗೆ ಮಾಂಸದ ತುಂಡೊಂದು ದೊರಕಿತು. ಅದನ್ನು ಪಡೆದು ಅತ್ಯಂತ ಆನಂದದಿಂದ ಬಾಯಲ್ಲಿ ಕಚ್ಚಿಕೊಂಡು ಹಾರಾಡತೊಡಗಿತು. ಮಾಂಸದ ತುಂಡನ್ನು ಕಂಡ ಇತರ ಪಕ್ಷಿಗಳು ಅದನ್ನು ಪಡೆಯುವುದಕ್ಕಾಗಿ ಕುರರ ಪಕ್ಷಿಯ ಮೇಲೆ ಆಕ್ರಮಣವನ್ನು ಮಾಡಿದವು. ಜೀವ ಭಯದಿಂದ ಕುರರವು ಓಡಾಡಿ ಕೊನೆಗೆ ಬಾಯಿಯಲ್ಲಿದ್ದ ಮಾಂಸವನ್ನು ಕೆಳಗೆ ಎಸೆದು ಒಂದು ಟೊಂಗೆಯ ಮೇಲೆ ಕುಳಿತಿತು. ಆಗ ಅದರ ಬೆನ್ನು ಹತ್ತಿದ್ದ ಎಲ್ಲ ಪಕ್ಷಿಗಳು ಮಾಂಸದ ಕಡೆಗೆ ಹೋದವು. ಕುರರವು ಮಾಂಸವನ್ನು ತ್ಯಾಗ ಮಾಡಿದ್ದರಿಂದ ಶಾಂತಿಯನ್ನು ಪಡೆಯಿತು. ತ್ಯಾಗದಿಂದ ಮಾತ್ರ ಶಾಂತಿಯು ದೊರೆಯುತ್ತದೆ.

19. ಶಿಶುವೂ ಅವಧೂತನಿಗೆ ಗುರುವಾಗಿದೆ. ಮಗು ಯಾವ ರೀತಿಯಾಗಿ ನಿಶ್ಚಿಂತೆಯಿಂದ ಇರುವುದೋ ಅದೇ ರೀತಿಯಾಗಿ ಇರಲು ಕಲಿಯಬೇಕು. ಅದಕ್ಕೆ ಮಾನ - ಅಪ

**ಆನಂದದ, ಜ್ಞಾನದ, ಶಾಂತ ಸ್ಥಿತಿಯ ಮೂರ್ತ ರೂಪದಲ್ಲಿ ಕಾಣಿಸಿಕೊಳ್ಳುವವರೇ ಅವಧೂತರು ಅವಧೂತರಿಗೆಲ್ಲ ಪರಮಗುರು ದತ್ತಾತ್ರೇಯ. ಅವ ಧೂತ ಎಂಬ ಅಕ್ಷರಗಳಿಗೆ ಸ್ವಾರಸ್ಯಕರವೂ ಆಳವೂ ಆದ ಅರ್ಥವಿದೆ 'ಅ' ಎಂದರೆ ಆಶೆಗಳನ್ನು ಬಿಟ್ಟಿರುವುದು, ಆದಿ-ಮಧ್ಯ-ಅಂತ್ಯ ಎಂಬ ಎಣಿಕೆ ಇಲ್ಲದೆ ಶುಚಿಯಾಗಿ ರುವುದು ; ಎಂದೂ ಆನಂದದಲ್ಲಿ ನೆಲೆಸಿರುವುದು 'ವ' ಎಂದರೆ ಹಿಂದಣ ವಾಸನೆಗಳೆಲ್ಲ ಬಿಟ್ಟು ಹೋಗಿರುವುದು; ಅವನ ಮಾತಿನಲ್ಲಿ ದೋಷವಾಗಲಿ, ಗೊಂದಲವಾಗಲಿ, ಉದ್ವೇಗವಾಗಲಿ ಇರದು ಅವನು ಹಿಂದಣ ಮುಂದಣ ಸಂದರ್ಭಗಳನ್ನು ಕೈಬಿಟ್ಟು ಈಗಣ ಕ್ಷಣದಲ್ಲಿ ಮಾತ್ರ ಇರುವನು 'ಧೂ'ಎಂದರೆ ಧೂಳಿನಿಂದ ಮುಚ್ಚಲ್ಪಟ್ಟ ದೇಹ ತೊಳೆಯಲ್ಪಟ್ಟ ಮನಸ್ಸು, ಯಾವುದೊಂದು ಈತಿ ಬಾಧೆಯೂ ಇರದು; ಧ್ಯಾನಧಾರಣಗಳೆಂಬ ಯೋಗ ವಿಧಿಯಾಗಲಿ ಅವನಿಗೆ ಬೇಕಾದುದಿಲ್ಲ 'ತ' ಎಂದರೆ ತತ್ವವನ್ನು ಕುರಿತದ್ದೇ ಚಿಂತೆ, ಉಳಿದಂತೆ ಯಾವ ಚಿಂತೆಯೂ ಇರದಿರುವುದು ತಮಸ್ಸೆಂಬ ಅಜ್ಞಾನ ವಿಲ್ಲದೆ. ನಾನು - ನನ್ನದೆಂಬ ಅಹಂಕಾರವಿಲ್ಲದಿರು ವುದು.ಇಂಥ ಲಕ್ಷಣಗಳುಳ್ಳವನೇ ಅವಧೂತ; ಇಂತಹ ಲಕ್ಷಣ ಸಂಪನ್ನನಿಗಲ್ಲದೆ ಮತ್ತೆಂತಹವರಿಗೆ ತಾನೆ ಆನಂದದಲ್ಲಿ ನೆಲೆಸಲಾದೀತು? ಆನಂದದ ವಿಗ್ರಹ ರೂಪವೇ ದತ್ತಾತ್ರೇಯ.**

ಮಾನ,ಲಾಭ - ಹಾನಿ ಮುಂತಾದ ದ್ವಂದ್ವಗಳ ಪ್ರಭಾವ ಇರುವುದಿಲ್ಲ.

20. ಸುಸಂಸ್ಕೃತ ಕುಲದ ಕನ್ಯೆಯೋರ್ವಳಿಂದ ಅವಧೂತ ಮಹತ್ತ್ವದ ಪಾಠವನ್ನು ಕಲಿತನು. ಒಮ್ಮೆ ಆ ಕನ್ಯೆಯೊಬ್ಬಳೇ ಮನೆಯಲ್ಲಿದ್ದಾಗ ಕೆಲವು ಕನ್ಯಾರ್ಥಿ ಗೃಹಸ್ಥರು ಮನೆಗೆ ಬಂದರು. ಬಂದವರನ್ನು ಸ್ವಾಗತಿಸಿ ಅವರಿಗಾಗಿ ಊಟವನ್ನು ಸಿದ್ಧಪಡಿಸಬೇಕೆಂದು ನೋಡಿದಾಗ ಮನೆಯಲ್ಲಿ ಅಕ್ಕಿ ಬರಿದಾಗಿರುವ ಸಂಗತಿಯು ಗೊತ್ತಾಯಿತು. ಗುಟ್ಟಾಗಿ ಭತ್ತವನ್ನು ಕುಟ್ಟಲು ಆರಂಭಿಸಿದಾಗ ಅವಳ ಕೈಬಳೆಗಳು ಸದ್ದು ಮಾಡತೊಡಗಿದವು.ಬುದ್ಧಿವಂತ ಕನ್ಯೆಯು ಒಂದೊಂದೇ ಬಳೆಗಳನ್ನು ತೆಗೆಯುತ್ತ ಪ್ರತಿಯೊಂದು ಕೈಯಲ್ಲೂ ಒಂದೇ ಬಳೆಯನ್ನು ಉಳಿಸಿಕೊಂಡು ಸದ್ದು ಮಾಡದೆ ಅಕ್ಕಿ ತಯಾರಿಸಿದಳು.ಸಂಸಾರದ ದ್ವಂದ್ವಕ್ಕಿಂತ ಏಕಾಂಗಿಯ ವೈರಾಗ್ಯ ಉತ್ತಮ ಎಂಬುದು ಇದರ ಪಾಠ.

21. ಅನಿತ್ಯವಾದ ಶರೀರವನ್ನು ಕಾಪಾಡಲು ಮನೆ ಕಟ್ಟಿಸಬಾರದೆಂಬ ಪಾಠವನ್ನು ಕಲಿತದ್ದು ಸರ್ಪದಿಂದ ಇರುವೆ ಗೆದ್ದಲು ಹುಳಗಳಿಂದ ನಿರ್ಮಿತವಾದ ಮನೆಯಲ್ಲಿ ಹಾವು ಸೇರಿಕೊಂಡು ವಾಸ ಮಾಡುತ್ತದೆ.

22. ವ್ಯಾಧನಿಂದ ಏಕಾಗ್ರತೆಯನ್ನು ಕಲಿಯಬಹುದಾಗಿದೆ. ಬೇಡನು ಗುರಿಯಿಟ್ಟು ಬಾಣ ಬಿಡುವಾಗ ಸುತ್ತಮುತ್ತಲಿನ ಪರಿಸರದಿಂದ ಪ್ರಭಾವಿತನಾಗದೆ ಏಕಮನದಿಂದ ತನ್ನ ಗುರಿಯ ಕಡೆಗೆ ಗಮನ ನೀಡುವಂತೆ ಯೋಗಿಯಾದವನು ಪರಮಾತ್ಮನಲ್ಲಿ ಏಕಾಗ್ರಚಿತ್ತವನ್ನು ಇಡಬೇಕಾದ ಸಂಗತಿಯನ್ನು ಕಲಿಯಬಹುದಾಗಿದೆ.

23. ತನ್ನ ದೇಹದಲ್ಲಿರುವ ನೂಲೆಳೆಯಿಂದ ಬಲೆಯನ್ನು ನಿರ್ಮಿಸಿ ಅದನ್ನು ತನ್ನ ನಿಯಂತ್ರಣದಲ್ಲಿಯೇ ಇಟ್ಟು ಕೊಂಡು ಕೊನೆಗೆ ತನ್ನಲ್ಲಿಯೇ ಅದನ್ನು ಒಳ ಸೇರಿಸಿ ಕೊಳ್ಳುವ ಜೇಡರ ಹುಳದಂತೆ ಭಗವಂತನೂ ಸೃಷ್ಟಿ- ಸ್ಥಿತಿ - ಲಯಗಳಿಗೆ ಕಾರಣವಾಗಿದ್ದಾನೆ ಎಂದು ತಿಳಿದಿರುವೆನು.

24. ಕಣಜದ ಹುಳವು ತಿನ್ನುವುದಕ್ಕಾಗಿ ತಂದ ಕೀಟವು ಪ್ರಾಣಭಯದಿಂದ ಕಣಜದ ಬಗ್ಗೆಯೇ ಯೋಚಿಸುತ್ತ ಅದರ ರೂಪವನ್ನೇ ಹೊಂದುವುದಂತೆ. ಅದೇ ರೀತಿಯಾಗಿ ಭಕ್ತನು ಭಗವಂತನನ್ನೇ ಚಿಂತಿಸುತ್ತಿದ್ದರೆ ಅವನೊಂದಿಗೆ ತಾದಾತ್ಮವನ್ನು ಹೊಂದುವನು.

ವೈರಾಗ್ಯವನ್ನು ಪ್ರತಿಪಾದಿಸುವುದು ಅವಭೂತ ತತ್ತ್ವದ ಮುಖ್ಯ ಆಶಯ. ಲೌಕಿಕರಾದ ನಾವು ಸಂಸಾರವನ್ನು ತೊರೆದು ವೈರಾಗ್ಯವನ್ನು ಹೊಂದುವ ಬಗ್ಗೆ ಯೋಚಿಸುವುದು ಅಸಂಭವ. ಆದರೆ, ಮಿತವಾದ ಆಸೆ, ಆಕಾಂಕ್ಷೆಗಳನ್ನು ಇರಿಸಿಕೊಳ್ಳುವುದು ಕಷ್ಟವಲ್ಲ. ನಿರೀಕ್ಷೆಗಳಿಲ್ಲದ ಬದುಕಿನಲ್ಲಿ ನಿರಾಶೆಯೂ ಇಲ್ಲ! ಅದನ್ನೇ ಅವಧೂತ ಗೀತೆ ಬೋಧಿಸುತ್ತದೆ. ಅದು ಬೋಧಿಸುವ ತತ್ತ್ವ ಪ್ರಖರ ಬೆಳಕೂ ಅಲ್ಲ. ಕತ್ತಲೆಯೂ ಅಲ್ಲ. ಹಿತವಾದ ಪೂರ್ಣಚಂದ್ರನ ಬೆಳಕು!





## ಭಾಗವತ ಕಥಾಸಾಗರ

# ಭಕ್ತ ಪ್ರಹ್ಲಾದನ ಗುಣ ಗಣಗಳು

**ಡಾ|| ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ : ಡಿ.ಎಸ್.ಬದ್ರಿನಾಥ್**

ಭಕ್ತ ಪ್ರಹ್ಲಾದನ ಗುಣಗಳನ್ನು ಸಾಧುಗಳೂ, ಬ್ರಾಹ್ಮಣರೂ ಪ್ರತಿನಿತ್ಯ ಸ್ತುತಿಸುತ್ತಿರುತ್ತಾರೆ.

ಸಾಧು ಜನರ ಕುರಿತು ಚರ್ಚಿಸಲ್ಪಡುವ ಯಾವ ಸಭೆಯಲ್ಲಾದರೂ ಪ್ರಹ್ಲಾದನ ಕುರಿತ ಚರ್ಚೆ ತಪ್ಪದೇ ಬರುತ್ತದೆ. ಅಂತಹ ಪುಣ್ಯ ಚರಿತನಾದ ಪ್ರಹ್ಲಾದನೆಡೆಗೆ ಹಿರಣ್ಯಕಶಿಪುಗೇಕೆ ಅಷ್ಟೊಂದು ದ್ವೇಷ ಹುಟ್ಟಿತೆಂದು ಧರ್ಮರಾಜನು ನಾರದರನ್ನು ಪ್ರಶ್ನಿಸುವ ಮೂಲಕ ಭಾಗವತದ ಸಪ್ತಮಸ್ಕಂದದಲ್ಲಿ ಪ್ರಹ್ಲಾದ ಚರಿತ್ರೆಯು ಆರಂಭಗೊಳ್ಳುತ್ತದೆ. ಭಕ್ತರ ಚರಿತ್ರೆಗಳನ್ನು ಭಕ್ತರಿಂದಲೇ ಕೇಳಬೇಕು. ಕೃಷ್ಣ ಸೇವಾನುರಕ್ತನಾದ ಧರ್ಮರಾಯನು ಸಾಕ್ಷಾತ್ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಭಕ್ತಿ ಸೂತ್ರ ರಚನಕಾರರು ನಾರದ ಮುನಿ ದ್ವಾರ ಕೇಳಿದ್ದಾನೆ. ಈ ದಿವ್ಯವಾದ ಭಾಗವತ ಕಥೆಯನ್ನು ಈಗ ಮನತಣಿಯುವಷ್ಟು ಸವಿಯೋಣ.

ಸೋದರನ ಮರಣ-ಪ್ರತೀಕಾರವನ್ನು ತೀರಿಸಿಕೊಳ್ಳಬೇಕೆಂದು ನಿರ್ಧರಿಸಿದ ಹಿರಣ್ಯಕಶಿಪು ಮೊದಲು ತಾನು ಜನನಮರಣ ವಿಮುಕ್ತನಾಗಬೇಕೆಂದು ನಿರ್ಣಯಿಸಿಕೊಂಡಿದ್ದಾನೆ. ಅದಕ್ಕಾಗಿ ಆತನು ಮಂದರ ಪರ್ವತಕ್ಕೆ ಹೋಗಿ ಒಂಟಿಗಾಲಿನಲ್ಲಿ ನಿಂತು ಕೈಗಳನ್ನು ಆಕಾಶಕ್ಕೆ ಚಾಚಿ ಘೋರವಾದ ತಪಸ್ಸನ್ನು ಮಾಡಲು ಆರಂಭಿಸಿದ್ದಾನೆ.ಇದು ನಿಜವಾಗಿ ದೇವತೆಗಳಿಗೆ ಅದೆಷ್ಟೋ ಭೀತಿಯನ್ನುಂಟುಮಾಡಿದೆ. ಎಲ್ಲರೂ ಸೇರಿ ಪರಮೇಷ್ಠಿಯಾದ ಬ್ರಹ್ಮನ ಬಳಿ ಸಾಗಿ ಕೂಡಲೇ ಪರಿಹಾರವನ್ನು ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ಆಗ ಬ್ರಹ್ಮನು ಭೃಗು-ದಕ್ಷ ಮುಂತಾದ ವರೊಡಗೂಡಿ ಮಂದರ ಪರ್ವತದ ಕಡೆಗೆ ಒಳಗಡೆ ಸಾಗಿದ್ದಾರೆ. ಶಲ್ಯಗತ ಪ್ರಾಣನಾದ ಹಿರಣ್ಯಕಶಿಪು ಮಾಡಿದ ತಪಸ್ಸು ಬ್ರಹ್ಮನನ್ನೇ ವಿಸ್ಮಿತನನ್ನಾಗಿ ಮಾಡಿದೆ. ಪ್ರಸನ್ನನಾದ ಆತನು ಪ್ರಶಾಂತವದನನಾಗಿ ವರ ನೀಡಲು ಸನ್ನದ್ಧನಾಗಿದ್ದಾನೆ.

"ಕಶ್ಯಪತನಯಾ! ನಿನಗೆ ಶುಭವಾಗಲಿ! ಕೂಡಲೇ ತಪಸ್ಸಿನಿಂದ ಏಳುವನಾಗು. ನೀನು ಕೋರಿದ ವರವನ್ನು ನೀಡಲು ನಾನು ಸಿದ್ಧನಾಗಿದ್ದೇನೆ. ಮಹರ್ಷಿಗಳಿಗೂ ಮಾಡಲು ಸಾಧ್ಯವಾಗದ ಘೋರ ತಪವನ್ನೈದು ನೀನು ನನ್ನನ್ನು ಜಯಿಸಿರುವೆ." ಎಂದು ನುಡಿದು ಬ್ರಹ್ಮದೇವನು ತನ್ನ ಕಮಂಡಲದಲ್ಲಿ ಜಲವನ್ನು ಹಿರಣ್ಯಕಶಿಪುವಿನ ಮೇಲೆ ಚಿಮುಕಿಸಿದ್ದಾನೆ.ಆ ಜಲ ಪ್ರಭಾವದಿಂದ ಹಿರಣ್ಯಕಶಿಪು ಅಪೂರ್ವವಾದ ಬಲ ಸಂಪನ್ನನಾಗಿದ್ದಾನೆ.ಮೊದಲು ಆ ಅಸುರನು ಬ್ರಹ್ಮನಿಗೆ ನಮಸ್ಕರಿಸಿದ್ದಾನೆ. ಗದ್ಗದ ಕಂಠದಿಂದ ಬ್ರಹ್ಮನನ್ನು ಸ್ತುತಿಸಿದ್ದಾನೆ. ಅನಂತರ ತನ್ನ ಮನೋಭಿಲಾಷೆಯನ್ನು ಹೊರಗೆಡದಿದ್ದಾನೆ.

"ದೇವಾ! ವರದಶ್ರೇಷ್ಠ! ನೀನು ನನಗೇನಾದರೂ ವರ ಕೊಡಲು ನಿರ್ಧರಿಸಿದ್ದರೆ ನೀನೇ ಸೃಷ್ಟಿಸಿದ ಯಾರಿಂದಲೂ ನನಗೆ ಮರಣ ಬಾರದಿರಲೆಂದು ವರವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ. ಮನೆಯಲ್ಲಾಗಲೀ, ಒಳಗಾಗಲೀ, ಹೊರಗೇ ಆಗಲಿ, ಹಗಲಲ್ಲಾಗಲೀ, ರಾತ್ರಿಯಲ್ಲಾಗಲೀ, ನೆಲದಲ್ಲಾಗಲೀ ಆಕಾಶದಲ್ಲಾಗಲೀ, ನಾನು ಮರಣಿಸಬಾರದೆಂಬ ವರವನ್ನು ಕೊಡು. ನಿನ್ನ ಕೈಯಿಂದ ಸೃಷ್ಟಿಸಲ್ಪಟ್ಟ ಯಾರಿಂದಲೇ ಆಗಲೀ, ಯಾವುದೇ ಆಯುಧಗಳಿಂದಾಗಲೀ ಮನುಷ್ಯರಿಂದಾಗಲೀ ಅಧೋಲೋಕದ ಸರ್ಪಗಳಿಂದಾಗಲೀ ಮನುಷ್ಯರಿಂದಾಗಲೀ,ಸ್ಥಾವರ ಜಂಗಮ ಜೀವಿಗಳ ಕೈಯಿಂದಲಾಗಲೀ, ದೇವ-ದಾನವರಿಂದಾಗಲೀ, ಮರಣಬಾರದ ವರವನ್ನು ನಾನು ಕೋರಿಕೊಂಡಿದ್ದೇನೆ. ಯುದ್ಧರಂಗದಲ್ಲಿ ಯಾರೂ ನನಗೆ ಪ್ರತಿಸ್ಪರ್ಧಿಯಾಗಲೇ ಬಾರದು. ಸಕಲ ಲೋಕಪಾಲಕರ ಮೇಲಿನ ಸರ್ವಾಧಿಪತ್ಯವನ್ನು ನನಗೆ ನೀಡು.ಆ ಪದವಿಯಿಂದ ಲಭಿಸುವ ಸಮಸ್ತ ಯಶಸ್ಸನ್ನು ನನಗೆ ನೀಡು. ತಪ-ಯೋಗಗಳಿಂದ ಉಂಟಾಗುವ ಅಷ್ಟಸಿದ್ಧಿಗಳನ್ನು ನನಗೆ ಪ್ರಸಾದಿಸು.

ಹಿರಣ್ಯಕಶಿಪು ಕೇಳಿಕೊಂಡ ವರಗಳು ಪರಮದುರ್ಲಭವಾದವುಗಳಾದರೂ ಆತನ ತಪಸ್ಸಿಗೆ ಮೆಚ್ಚಿದ ಬ್ರಹ್ಮನು ಅವುಗಳನ್ನು ಆತನಿಗೆ ನೀಡಿದ್ದಾನೆ.ಈ ವಿಷಯವನ್ನು ಆತನು ಹಿರಣ್ಯ ಕಶಿಪುವಿಗೂ ತಿಳಿಸಿದ್ದಾನೆ.ಈ ವಿಧವಾಗಿ ಅಸುರಾಧಿಪತಿ ಕೇಳಿದ ವರಗಳನ್ನು

ಕೊಟ್ಟ ಬ್ರಹ್ಮನು ತನ್ನ ಲೋಕಕ್ಕೆ ತೆರಳಿದ್ದಾನೆ. ತಕ್ಷಣವೇ ಹಿರಣ್ಯಕಶಿಪು ವಿಕಟ್ಟಟಾಸ್ಯದಿಂದ ನಕ್ಕು ತನ್ನ ಅಸುರೀ ಪ್ರವೃತ್ತಿಯನ್ನು ಲೋಕಕ್ಕೆ ತೋರಿಸಲಾರಂಭಿಸಿದ್ದಾನೆ. ಸೈನ್ಯದ ಸಮೇತನಾಗಿ ಆ ದಾನವನು ಮೂಲ್ಲೋಕಗಳ ಮೇಲೆ ಧಾಳಿ ಮಾಡಿ ಅವೆಲ್ಲವನ್ನು ತನ್ನಾಧೀನಕ್ಕೆ ತೆಗೆದು ಕೊಂಡಿದ್ದಾರೆ. ಏಕಾಂಗಿಯಾಗಿ ಇಂದ್ರಭವನವನ್ನೇ ಆತನು ತನ್ನ ನಿವಾಸವನ್ನಾಗಿ ಮಾರ್ಪಾಡು ಮಾಡಿಕೊಂಡಿದ್ದಾನೆ. ಅದೇ ಸಮಯದಲ್ಲಿ ದೇವತೆಗಳು ಆತನ ಪಾದಗಳಲ್ಲಿರುವ ಸಂದರ್ಭವೇಪಟ್ಟಿದೆ. ಆತನು ಅವರೂಡನೆ ಅದೇ ಕಾರಣವನ್ನಾಗಿಸಿಕೊಂಡು ಅತಿ ಕಠೋರನಾಗಿ ವರ್ತಿಸಿದ್ದಾನೆ. ಈ ವಿಧವಾಗಿ ತನು ದೇವತೆಗಳ ಸಹಾಯವಿಲ್ಲದೆಯೇ ಸ್ವರ್ಗವನ್ನಾಳಲಾರಂಭಿಸಿದ್ದಾನೆ. ಅಸುರ ರಾಜನ ಪೀಡೆಗಳಿಂದ ತತ್ತರಿಸಿದ ಲೋಕಪಾಲಕರು ಮಹಾವಿಷ್ಣುವಿಗೆ ಮೊರೆ ಹೋಗಿದ್ದಾರೆ.ತಮ್ಮ ಗೋಳನ್ನು ಹೇಳಿಕೊಂಡಿದ್ದಾರೆ. ಆಗವರಿಗೆ ಒಂದು ದಿವ್ಯವಾದ ಅಶರೀರವಾಣಿ ಕೇಳಿ ಬಂದಿದೆ.

"ದೇವಾತಾ ಮಹಾಶಿಯರೇ!ಭಯಪಡಬೇಡಿ.ನಿಮಗೆ ಎಲ್ಲಾ ಒಳ್ಳೆಯದೇ ಉಂಟಾಗುತ್ತದೆ.ನನ್ನ ನಾಮಕೀರ್ತನೆಯನ್ನು ಮಾಡಿ. ನನ್ನ ಕಥೆಗಳನ್ನು ಆಲಿಸಿ.ನನ್ನನ್ನು ಸ್ತುತಿಸಿ.ಇವೆಲ್ಲವೂ ಜೀವಿಗಳಿಗೆ ನಾನು ವರವನ್ನೀಯಲು ಕಾರಣೀಭೂತವಾಗುತ್ತವೆ. ಹಿರಣ್ಯಕಶಿಪುವಿನ ದುಷ್ಕರ್ಮಗಳು ನನಗೆ ಗೊತ್ತಿದೆ. ಶೀಘ್ರದಲ್ಲೇ ನಾನು ಅವುಗಳಿಗೆ ತೆರೆಯೆಳೆಯುತ್ತೇನೆ. ಅಲ್ಲಿಯವರೆಗೂ ನೀವು ಸಹನೆ ವಹಿಸಿರಿ. ಪ್ರಶಾಂತನೂ,ನಿರ್ವೈರಿಯಾದ ತನ್ನ ಸುತ ಪ್ರಹ್ಲಾದನನ್ನು ಅಸುರನು ಯಾವಾಗ ಹಿಂಸಿಸಲು ಆರಂಭಿಸುತ್ತಾನೋ ಆಗ ನಾನು ಅವತರಿಸಿ,ಆತನನ್ನು ಸಂಹರಿಸುತ್ತೇನೆ. ಬ್ರಹ್ಮದೇವನ ವರವಿದ್ದರೂ ಆತನನ್ನು ನಾನು ವಧಿಸುತ್ತೇನೆ.


ಲೋಕಗುರುವಾದ ಭಗವಂತನ ಮಾತನ್ನು ಕೇಳುತ್ತಲೇ ದೇವತೆಗಳು ಇನ್ನು ಹಿರಣ್ಯಕಶಿಪು ಸಂಹಾರವಾದಂತೇ ಸರಿಯೆಂದು ತಿಳಿದು ತಮ್ಮ ತಮ್ಮ ನಿವಾಸಗಳಿಗೆ ತೆರಳಿದ್ದಾರೆ. ಭಗವಂತನು ಹೇಳಿದ ಸಮಯಕ್ಕಾಗಿ ಅವರು ಕಾಯುತ್ತಲೇ ಸಮಯ ದೂಡಿದ್ದಾರೆ.

ಹಿರಣ್ಯಕಶಿಪುವಿಗೆ ನಾಲ್ವರು ಸುತರು. ಅದರಲ್ಲಿ ಪ್ರಹ್ಲಾದನೇ ವರಿಷ್ಠನು.ಪರಮ ಭಗವದ್ಭಕ್ತನಾದ ಆತನು ದಿವ್ಯ ಗುಣನಿಧಿಯಾದವನು ಕೇವಲ ಐದು ವರ್ಷದ ಬಾಲಕನಾದರೂ ಆತನು ಉತ್ತಮವಾದ ನಡೆ - ನುಡಿ ಹೊಂದಿದವನು. ಪರತತ್ವವನ್ನರಿಯಬೇಕೆಂಬ ಧೃಢನಿಶ್ಚಯದಿಂದ ಆತನು ಬ್ರಾಹ್ಮಣ್ಯ ಗುಣ ಸಂಪನ್ನನಾಗಿರುವನು. ಭಗವಂತನಂತೆಯೇ ಪರಜೀವಿಗಳೆಡೆಗೆ ದಯಾ ಸ್ವಭಾವವನ್ನು ಹೊಂದಿರುವವನು. ಆತನು ಎಲ್ಲರೊಂದಿಗೆ ಮಿತ್ರನಾಗಿ ವರ್ತಿಸುತ್ತಾ,ಹಿರಿಯರಿಗೆ ವಿನಮ್ರನಾಗಿ ದೀನರಿಗೆ ತಾಯ್ತಂದೆಯಾಗಿ,ಸಮವಯಸ್ಕರೊಂದಿಗೆ ಸಹೋದರನಾಗಿ ಬೆರೆಯುವವನು. ಗುರುಗಳನ್ನು ತನಗಿಂತ ಹಿರಿಯರಾದ ಶಿಷ್ಯರನ್ನು ಸಹಾ ಭಗವಂತನೆಂದೇ ಭಾವಿಸಿ ಪೂಜಿಸುವವನು.ವಿದ್ಯೆ, ಸೌಂದರ್ಯ ಉಚ್ಛಕುಲದ ಜನ್ಮದಿಂದಾಗಿ ಉಂಟಾಗುವ ಸಮಾಜ ಭೇದ ಭಾವಕ್ಕೆ ಸರ್ವದಾ ಆತನು ದೂರವೇ ಇರುವವನು. ಅಸುರ ವಂಶದಲ್ಲಿ ಜನಿಸಿದ್ದರೂ ಆತನು ಮಹಾವಿಷ್ಣುಭಕ್ತನಾದನು. ಆತನೆಂದೂ ವೈಷ್ಣವರನ್ನು ದ್ವೇಷಿಸಿದವನಲ್ಲ.ಎಂತಹ ಪರಿಸ್ಥಿತಿಯಲ್ಲೂ ಸಹಾ ಆತ ವಿಚಲಿತನಾಗಲಿಲ್ಲ.ಭೌತಿಕವಾದ ಸಮಸ್ತ ವಿಷಯಗಳಲ್ಲೂ ಆತನು ಎಲ್ಲಾ ಅನುರಕ್ತಿಯನ್ನು ಬಿಟ್ಟುಬಿಟ್ಟಿದ್ದಾನೆ.

ವಾಸ್ತವದಲ್ಲಿ ಪ್ರಹ್ಲಾದನಿಗೆ ಬಾಲ್ಯದಿಂದಲೂ ಆಟಗಳಲ್ಲಿ ಆಸಕ್ತಿಯಿರಲಿಲ್ಲ.ಆತನ ಚಿತ್ತವು ಸಹಾ ಕೃಷ್ಣ ಸ್ಮರಣೆಯಲ್ಲೇ ಮುಳುಗಿ ಹೋಗುತ್ತಿತ್ತು ತತ್ಕಾರಣವಾಗಿ ಆತನು ಜಗತ್ತೇಕೆ ಇಂದ್ರಿಯ ಭೋಗ ಕರ್ಮಗಳಲ್ಲಿ ಮುಳುಗಿ ಹೋಗಿದೆಯೆಂದು ಚಿಂತಿಸುತ್ತಿದ್ದನು.ಸದಾ ಕೃಷ್ಣಚಿಂತನೆಯಲ್ಲಿ ಮುಳುಗಿರುವ ಆತನು ಕೂರುವುದು, ನಿಲ್ಲುವುದು, ನಡೆಯುವುದು, ಅನ್ನಾಹಾರಗಳನ್ನು ಸ್ವೀಕರಿಸುವುದು ಸಂಭಾಷಣೆಗೈಯುವುದು ಮುಂತಾದ ಪ್ರಕ್ರಿಯೆಗಳು ಹೇಗೆ ನೆರವೇರುತ್ತಿವೆಯೆಂಬ ಪರಿವೆಯೂ ಇರುತ್ತಿರಲ್ಲಿ. ಸರ್ವತ್ರ ಸದಾಕಾಲ ಕೃಷ್ಣನನ್ನೇ ಕಾಣುವ ಪ್ರಹ್ಲಾದ ಒಮ್ಮೊಮ್ಮೆ ಕೋಪಿಸುವನು ಒಮ್ಮೊಮ್ಮೆ ಹರ್ಷಿಸುವನು, ಮತ್ತೊಮ್ಮೆ ಆಹ್ಲಾದದಿಂದಿರುವಂತೆ ಕಂಡು ಬರುವನು. ಮಗದೊಮ್ಮೆ ಗಾಯನ ಮಾಡುವನು. ತನ್ನ ಹಸಿಗೂಸನ್ನು ತೊಟ್ಟಿಲಲ್ಲಿ ಮಲಗಿಸಿ ತಾಯಿ ಹೊರಟು ಹೋಗುತ್ತಲೇ ಮಗು ಹೇಗೆ ಎದ್ದು ಅಳುವುದೋ ಅದೇ ರೀತಿ ಕೃಷ್ಣನೆಲ್ಲಿದ್ದಾನೆ"ಎಂದು ಆ ಕಡೆ-ಈ ಕಡೆ ಹುಡುಕುತ್ತಾ ವಿರಹ ಭಾವವನ್ನು ಅನುಭವಿಸುವನು. "ಕಂದಾ! ಅಳಬೇಡ ಬರುತ್ತಿದ್ದೇನೆ' ಎಂದು ತಾಯಿ ತನ್ನ ಮಗುವಿನೆಡೆಗೆ ಬರುವಂತೆ,ತನ್ನನ್ನು ಅಪ್ಪಿಕೊಳ್ಳುವ ದೈವ" ಎಂದು ಕೂಗುತ್ತಾ ಆತನು ನರ್ತಿಸುವವನು.ಒಮ್ಮೊಮ್ಮೆಯಂತೂ ಆತನು ಭಾವ ವಿಹ್ವಲನಾಗಿ ಭಗವದ್‌ಲೀಲೆಗಳನ್ನು ಉಚ್ಚರಿಸುವನು. ಕೆಲವು ಸಾರಿ ಭಗವಂತನ ಕರಸ್ಪರ್ಶದಿಂದ ಪುಳಕಿತನಾಗಿ ಆರ್ಧ ನಿಮೀಲಿತ ನೇತ್ರಗಳಿಂದ ಆನಂದ ಭಾಷ್ಪಗಳನ್ನು ದುರಿಸುತ್ತಾ ಮೂಕನಾಗಿ ಬಿಡುವನು. ಅಂತಹಾ ಪರಮಭಾಗವತೋತ್ತಮನ ಪಾರವಶ್ಯ ಲಕ್ಷಣಗಳನ್ನು ಕಂಡು ಆಧ್ಯಾತ್ಮಿಕ ಭಾವಾವೇಶವಿಲ್ಲದವರೂ ಸಹಾ ಪುನೀತರಾಗುವರು.

ಹಿರಣ್ಯಕಶಿಪು ಶುಕ್ರಾಚಾರ್ಯರನ್ನು ತಮ್ಮ ಕುಲಪುರೋಹಿತರನ್ನಾಗಿ ನೇಮಿಸಿಕೊಂಡಿದ್ದಾನೆ.ಶುಕ್ರಾಚಾರ್ಯರ ಸುತನಾದ ಅಷಂಡುಡುಮಾರ್ಕರು ರಾಜನ ಸಂಗ್ರಹಿಸಿದ ಅರಮನೆಯ ಹತ್ತಿರದಲ್ಲಿರುವ ಒಂದು ಆಶ್ರಮದಲ್ಲಿರುವರು. ಸುರರಾಜನು ತನ್ನ ಮಗನಾದ ಪ್ರಹ್ಲಾದನನ್ನು ಶಿಕ್ಷಣಕ್ಕಾಗಿ ಷಂಡಾಮಾರ್ಕರ ಆಶ್ರಮಕ್ಕೆ ಕಳಿಸಿದ್ದಾನೆ. ಗುರುಗಳು ಬೋಧಿಸುವ ರಾಜನೀತಿ, ಅರ್ಥಶಾಸ್ತ್ರಗಳು ಪ್ರಹ್ಲಾದನಿಗೆ ಹಿಡಿಸುವಂಥವಲ್ಲ. ಆದರೂ ಆಶ್ರಮ ವಿಧಿಯಾನುಸಾರ ಆತನು ಅವುಗಳನ್ನೆಲ್ಲಾ ಕೇಳಿ ಬಿಟ್ಟು ಬಿಡುವನು. ವಿದ್ಯಾಭ್ಯಾಸವು ಸ್ವಲ್ಪ ಕಾಲದ ನಂತರ ಹಿರಣ್ಯಕಶಿಪು ತನ್ನ ಪುತ್ರನು ಕಲಿತಿರುವ ವಿದ್ಯೆಯನ್ನು ತಿಳಿದುಕೊಳ್ಳಲು ಹಂಬಲಿಸಿದ್ದಾನೆ.





# ಅನ್ನಮಯ್ಯ ಜೀವನ ಚರಿತ್ರೆ

– ಮೂಲ. ಎಂ. ಶಿವ ಪ್ರವೀಣ್


– ಅನುವಾದ ಶ್ರೀಮತಿ. ಬಿ. ಪದ್ಮಜ

**ಅನ್ನಮಯ್ಯನ ತಿರುಮಲೆಯ ಪ್ರಯಾಣ:**

ಕೋನೇಟಿ ರಾಯಂಡ ಕೊಂಡಲ ವಾಡೇ
ಕಾನಿಕ ರೂಕಲ ಕಣಂಜಾಲ ವಾಡೆ
ವರುಸ ಬಂಗಾರು ಮೇಡ ವಾಂಡೆ ತಿಮ್ಮಪ್ಪ
ವರಮುಲ ರಾಯಂಡೆ ವಾಡೆ ತಿಮ್ಮಪ್ಪ
ಗೊಡ್ಡುರಾಳಿ ನೈನಮ್ ಗೋಮರುಳ ನೋಸಂಗಿ
ವಡ್ಡಿ ಕಾಸುಲ ಗೋಣುವಾಂಡೆ ತಿಮ್ಮಪ್ಪ

(ಅನ್ನಮಯ್ಯ ಚರಿತ್ರೆ ದ್ವಿಪದ ಪುಟ 109. 110)

ಸಪ್ತಗಿರಿಯೊಡೆಯ ಬಡ್ಡಿಕಾಸಿನವನು. ಬಂಗಾರದ ಮಂದಿರವಾಸ, ವರಗಳನ್ನು ಸುರಿಸುವವನು ಎನ್ನುತ್ತಾ ಪರಿಪರಿಯಾಗಿ ಸ್ತುತಿಸುತ್ತಾ ಮುಂದಕ್ಕೆ ನಡೆಯುತ್ತಿರುವ ಆ ಭಕ್ತ ಜನ ಸಮೂಹದ ಹಿಂದೆ ಅನ್ನಮಯ್ಯ ಹೋಗುತ್ತಿದ್ದ.ಆ ಭಕ್ತ ಜನರೊಂದಿಗೆ ಯಾತ್ರೆಯನ್ನು ಮಾಡುತ್ತಿದ್ದ ಅನ್ನಮಯ್ಯ ತಿರುಪತಿ ಪದ್ಮಾವತಿಯಮ್ಮನ ಗುಡಿಯನ್ನು ಸೇರಿ ಆಕೆಗೆ ಅನೇಕ ನಮಸ್ಕಾರಗಳನ್ನು ಮಾಡಿದ. ಅಲ್ಲಿಂದ ತಿರುಮಲೆ ಬೆಟ್ಟವನ್ನು ಹತ್ತುತ್ತಾ ನರಸಿಂಹಸ್ವಾಮಿಗೆ ನಮಿಸುತ್ತಾ ಕಾಲುನಡಿಗೆಯ ಮಾರ್ಗದಲ್ಲಿರುವ ಎಲ್ಲಾ ದೇವರುಗಳಿಗೆ ನಮಸ್ಕರಿಸಿದ, ಪವಿತ್ರವಾದ, ಪರಮಪಾವನವಾದ , ಪಾಪಗಳನ್ನು ಕಳೆಯುವ ತಿರುಮಲೆಯ ಬೆಟ್ಟವನ್ನು ಹತ್ತುತ್ತಾ ಅದರ ಅಂದವನ್ನು ಕಣ್ ತುಂಬಾ ತುಂಬಿಸಿಕೊಂಡು ಮನಸಾರೆ ಸಂದರ್ಶಿಸುತ್ತಾ ಪುಲಕಿತಗೊಳ್ಳುತ್ತಾ. ಮೈಮರೆಯುತ್ತಾ ಮೊಣಕಾಲ ಪರ್ವತವನ್ನು ಸೇರಿದ. ಹುಟ್ಟಿದಾಗಿನಿಂದಲೂ ತಾಯಿಯನ್ನೂ ಬಿಟ್ಟು ಎಂದೂ ಹೊರಗೆ ಬಾರದ ಅನ್ನಮಯ್ಯ ಹಸಿವೆಯಿಂದ ಸುಧೀರ್ಘ ಪ್ರಯಾಣ ಮಾಡುತ್ತಾ ತುಂಬಾ ಆಯಾಸಗೊಂಡು ಹಾಗೇ ಒಂದು ಬಂಡೆಯ ಮೇಲೆ ಕುಳಿತ.



**ಪದ್ಮಾವತೀದೇವಿಯ ಕಟಾಕ್ಷ**

ತನ್ನೊಂದಿಗೆ ಬಂದ ಭಕ್ತರು ಯಾರೂ ಅವನ ಹಸಿವೆಯನ್ನು ಗ್ರಹಿಸಲಿಲ್ಲ. ಆದರೆ ಆತನ ಹಸಿವನ್ನು ಗಮನಿಸಿದ ಲೋಕ ಜನನಿ ಎಲ್ಲ ಮಾತೆಯರಿಗೂ ಮಾತೆಯಾದ ಅಲಮೇಲುಮಂಗಮ್ಮ ಆ ಸರ್ವ ಮಂಗಳೆಯಾದ ಪದ್ಮಾವತೀ ದೇವಿ ಹಿರಿಯ ಮುತ್ತೈದೆಯಂತೆ ಅನ್ನಮಯ್ಯನ ಬಳಿಗೆ ಬಂದಳು. ಪ್ರಪಂಚದಲ್ಲಿ ಮಕ್ಕಳ ಹಸಿವನ್ನು ತಿಳಿಯುವುದು ಅಮ್ಮ ಮಾತ್ರ ತಾನೇ?

‘ಅಪ್ಪಾ ಮಗು! ನಿನ್ನನ್ನು ನೋಡಿದರೆ ತುಂಬಾ ಹಸಿವಿನಿಂದ ಬಳಲುತ್ತಿರುವಂತಿದೆ, ಎಂದು ಮಾತನಾಡಿಸಿದಳು. ಅನ್ನಮಯ್ಯ ಆಕೆಯ ಮಾತುಗಳಿಂದ ಪುಳಕಿತನಾದ ತನಗೆ ಹಸಿವು ಆಯಾಸ ಎಲ್ಲವೂ



ಕಳೆದು ವೇಗದಿಂದ ತಿರುಮಲೇಶನನ್ನು ದರ್ಶಿಸುವ ಭಾಗ್ಯವನ್ನು ನೀಡು ಎಂದು ಕೇಳಿ ಕೊಂಡ.

ಅನವಡು ಕಮಲಾ ಮಹಾದೇವಿ ಶಿಶುವುವ್
ದನ ಕೃಪಾಮೃತ ಧರಂ ದನಿವಿನಿಮ್ಮಿಂಚಿ
ಬಾಲಕಃ ಯೇ ಮಹಾ ಪರ್ವತೇಂದ್ರಲು
ಲಾಲಿಕ ಸಕಲ ಸಾಲಗ್ರಾಮ ಮಯಮು
ಘನೂಳದು ನೀಡಿ ಚೆಪ್ಪು ಗಾಳ್ಳನಕ್ಕಮಾಂ
ಜನದು ನೀ ಚೆಪ್ಪುಳು ಸಡಲಿಂಚಿಮ್ಮೀವ್ಯೆಚಿ
ಕಾನುಗೋನ ಕಣ್ಣುಲಂಗನವಚ್ಚು ನನಿನ
ವಿನಿ ಬಾಲುಂಡಟ್ಲ ಕಾವಿಂತು ನೆನ ನುಚು

(ಅನ್ನಮಾಚಾರ್ಯ ಚರಿತ್ರ, ಪುಟ 157)

'ಅಪ್ಪಾ! ಪರಮಪಾವನವಾದ, ಸಾಲಿಗ್ರಾಮವಾದ ಈ ತಿರುಮಲೆಯ ಪರ್ವತದ ಮೇಲೆ ಪಾದರಕ್ಷೆಗಳೊಂದಿಗೆ ನಡೆದಿದ್ದರಿಂದ ನಿನಗೆ ನನ್ನ ಸ್ವಾಮಿಯ ದರ್ಶನ ಮಾರ್ಗ ಕಂಡು ಬರುತ್ತಿಲ್ಲ. ಒಮ್ಮೆ ಪಾದರಕ್ಷೆಗಳನ್ನು ಬಿಟ್ಟು ನೋಡು, ನಿನ್ನ ಸುತ್ತಲೂ ಇರುವ ಪರಬ್ರಹ್ಮತತ್ತ್ವ ಗೋಚರಿಸುತ್ತದೆ ಎಂದು ಕಮಲನಯನೆ ಹೇಳಿದಳು. ಅಮ್ಮನ ಮಾತುಗಳನ್ನು ಅನ್ನಮಯ್ಯ ಶಿರಸಾವಹಿಸಿದ. ಕೂಡಲೇ ಪಾದರಕ್ಷೆಗಳನ್ನು ಬಿಟ್ಟು. ಅಲ್ಲಿಯವರೆಗೂ ಮರಗಳು, ಹುತ್ತಗಳು, ಗುಡ್ಡಗಳಂತೆ ಕಂಡು ಬಂದ ತಿರುಮಲೆಯ ಬೆಟ್ಟ ಈಗ ಆತನ ಕಣ್ಣುಗಳಿಗೆ ಎಲ್ಲವೂ ವಿಷ್ಣುಮಯವಾಗಿ ಕಂಡು ಬಂತು. ತನಗೆ ಈ ಭಾಗ್ಯವನ್ನು ಉಂಟು ಮಾಡಿದ ಆ ಜಗನ್ಮಾತೆಗೆ ವಂದಿಸಿದ. ಆ ತಾಯಿ ತಾನು ತಂದ ಶ್ರೀ ಹರಿಯ ಪ್ರಸಾದವನ್ನು ಅನ್ನಮಯ್ಯನಿಗೆ ನೀಡಿ ತಿನ್ನಬೇಕೆಂದು ಹೇಳಿದಳು. ಆ ಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸಿದ ಅನ್ನಮಯ್ಯ ಸಂತೋಷಭರಿತನಾದ. ಅಮ್ಮ ನೀಡಿದ ಪ್ರಸಾದವನ್ನು ತಿಂದ ನಂತರ ಅನ್ನಮಯ್ಯನಿಗೆ ಪರ್ವತವೆಲ್ಲಾ ಭಗವಂತನಂತೆ ಕಂಡು ಬಂತು. ತನ್ನನ್ನು ಕನಿಕರಿಸಿ, ಕಟಾಕ್ಷಿಸಿದ ಆ ತಾಯಿಯನ್ನು ಅಲಮೇಲುಮಂಗಳೆಂದು ತಿಳಿದು, ಆಶು ಕವಿತೆಯನ್ನು ಹಾಡಿ ಅರ್ಚಿಸಿದ.

'ಅಮ್ಮಕುಂ ದಾಳ್ಳಪಾಕ ಘನುಂಡ
ಡನ್ನುಂಡು ಪದ್ಯ ಶತಂಬುಜೆಪ್ಪಂಗೋ
ಕೊಮ್ಮಣಿ ವಾಕ್ಪ್ರಸುನಮೂಲಮ್
ಗೂರಿಮಿತೋ ನಲಮೆಲು ಮಂಗಕುನ್'

## ತಿರುಮಲೆಯ ದರ್ಶನ

ಇಮ್ಮಡಿಗೊಂಡ ಉತ್ಸಾಹದಿಂದ ಅನ್ನಮಯ್ಯ ತಿರುಮಲೆಯ ಗಿರಿಯನ್ನು ಸೇರಿಕೊಂಡ. ಬೆಟ್ಟದ ಮೇಲೆ ಹೋದ ಕೂಡಲೇ ಮೊದಲು ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಪವಿತ್ರ ಸ್ನಾನವನ್ನು ಆಚರಿಸಿದ. ಸ್ವಾಮಿ ಪುಷ್ಕರಿಣಿ ಸೌಂದರ್ಯವನ್ನು ದರ್ಶಿಸಿದ ಅನ್ನಮಯ್ಯನ ಹೃದಯ ಬಿಳಿಯ ತಾವರೆಯಂತೆ ವಿಕಸನಗೊಂಡಿತು ಆನಂದ ಉಕ್ಕುತ್ತಿರುವ ವರಾಹಸ್ವಾಮಿ ಆಲಯವನ್ನು ಸಂದರ್ಶಿಸಿದ.

ಭೂವರಾಹಸ್ವಾಮಿಯ ದರ್ಶನದ ಭೂಲೋಕ ವೈಕುಂಠವೆಂದು ತಿರುವೇಂಕಟನಿಲಯವಾದ ಆಲಯದ ಸಂದರ್ಶನಕ್ಕೆ ಹೊರಟ. ಆನಂದ ನಿಲಯಕ್ಕೆ ದರ್ಶನಕ್ಕಾಗಿ ಪ್ರಧಾನ ದ್ವಾರವನ್ನು ದಾಟಿ, ಗರುಡ ಗಂಬಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದ. ಬೆಳ್ಳಿಯ ಬಾಗಿಲನ್ನು ದಾಟಿ ಪ್ರದಕ್ಷಿಣೆ ಮಾರ್ಗದಲ್ಲಿ ಬಂದು ಆಲಯಕ್ಕೆ ಪ್ರದಕ್ಷಿಣೆ ಮಾಡಿದ ಆಲಯದಲ್ಲಿನ ಅಡುಗೆ ಮನೆಯಿಂದ ಬರುತ್ತಿದ್ದ ತುಪ್ಪದ ವಾಸನೆಯನ್ನು ಆಸ್ವಾದಿಸುತ್ತಾ,

ಏ ಪೊದ್ದು ಚೂಚಿನ ದೇವುಡಿತ್ಲಾನೆ ಯಾರಾಗಿಂಚು
ರೂಪುಳತೋ ಬದಿವೇಳು ರುಚಲ್ಲೈ ನಟ್ಲಂಡನು
ಮೇರು ಮಂದಾರಾಲವಲೇ ಮೇರಾಯು ನಿದ್ದೆನಲು
ಸೂರಿಯಚಂದ್ರುಲ ವಂಟಿ ಚುಟ್ಟಂ ಬಳ್ಲೆಲು
ಆರನಿ ರಾಜಾನ್ನಾಲು ಅಂದುಪ್ಪೈ ವಡ್ಡಿಂಚಂಗಾಣು
ಬೋರನನ ಚುಕ್ಕಾಲು ರಾಶಿವ್ರೋಸಿ ನಟ್ಲುಂಡೇನು
ಪಂಡಿನ ಪಂಡುಲ ವಂಟಿ ಪಚ್ಚಳ್ಳುಂ ಗೂರಲುನು
ವಂಡಿ ಯಲುಮೇಲು ಮಂಗ ವಡ್ಡಿಂಚಂಗಾ
ಅಂಡನೇ ಶ್ರೀವೆಂಕಟೇಶುಂಡಾರಗಿಂಚಿ ಮಿಗುಳಗ
ದಂಡೀಗಾ ದಾಸುಲಕೆಲ್ಲ ದಂಚಿನಟ್ಲುಂದೇನು

ಎಂದು ಶ್ರೀಹರಿಯ ನೈವೇದ್ಯವನ್ನು ಸ್ತುತಿಸುತ್ತಾ ಪ್ರದಕ್ಷಿಣೆಯನ್ನು ಸಾಗಿಸುತ್ತಾ. ಆ ಪ್ರದಕ್ಷಿಣ ಮಾರ್ಗದಲ್ಲಿನ ಯೋಗಾನರಸಿಂಹ, ಶ್ರೀಮದ್ರಾಮಾನುಜಾಚಾರ್ಯರನ್ನು ದರ್ಶಿಸಿ ದೇದೀಪ್ಯಮಾನವಾಗಿ ಬೆಳುಗುತ್ತಿದ್ದ ಆನಂದ ನಿಲಯವನ್ನು ಕಣ್ಣಾರೆ ನೋಡಿ, ಮನಸಾರೆ ಆನಂದಿಸಿದ. ವಾಹನಮಂಟಪದಲ್ಲಿ ಸ್ವಾಮಿಯ ಉತ್ಸವಕ್ಕಾಗಿ ನೀಡಿದ

ಉಚ್ಚೈ ಶ್ರವವನ್ನು (ಅಶ್ವವನ್ನು) ಗರುಡವಾಹನ, ಶೇಷವಾಹನ ವನ್ನು ದರ್ಶಿಸಿ, ಧ್ಯಾನಿಸಿದ ನಿತ್ಯಕಲ್ಯಾಣಭೂತನಾದ ಶ್ರೀನಿ ವಾಸನ ಪರಿಣಯದ ಉತ್ಸವಗಳನ್ನು ನಿರ್ವಹಣೆ ಮಾಡುವ ಕಲ್ಯಾಣೋತ್ಸವ ಮಂಟಪವನ್ನು ದರ್ಶಿಸಿದ.ಭಕ್ತರು ಕಾಣಿಕೆ ಗಳನ್ನು ಸಮರ್ಪಿಸುತ್ತಿದ್ದ ಹುಂಡಿಯನ್ನು ಸಂದರ್ಶಿಸಿದ. ನಂತರ ತನ್ನ ಮೇಲು ಹೊದಿಕೆಯ ಅಂಚನ್ನು ಹರಿದು ಅದರಲ್ಲಿ ತನ್ನ ಬಳಿ ಇದ್ದ ಹಣವನ್ನು ಸ್ವಾಮಿಗೆ ಅರ್ಪಿಸಿದ.

**ಶ್ರೀ ವೆಂಕಟೇಶ್ವರ ಸಂದರ್ಶನ**

ಬಂಗಾರದ ಬಾಗಿಲಿನ ಮೂಲಕ ಆಲಯವನ್ನು ಪ್ರವೇ ಶಿಸಿ, ಅಲ್ಲಿ

ಗ್ರಾಕ್ಕುನ ದಗ್ಗರ ಗನುಪಟ್ಟು ಪಸಿಂಡಿ
ಟಕ್ಕುಲ ತಲಾ ವಾಕಿಟನು ಗಾನವಚ್ಚು
ಧಳಧಳಲ ತುಲಕಿಂಚು ದರಾ ಚಕ್ರಹಸ್ತ
ಮುಲು ಬೊಡ್ಡುಮಾನಿಕಮುನು ಗಠಾರಮುನು
ಮಂಜೀರ ಕಿಂಕಿಣೀ ಮಂಜುಳ ಪಾದ
ಕಂಜ ದ್ವಯಂಬುನು ಗಾಂಚನಾಂಬರಮು
ಕಟಿ ಮೀದ ಜೇರ್ಚಿನ ಕಾರ ಪಂಕಜಂಬು

ಬಾಗಿಲಿನಿಂದ ನೋಡಿದರೆ ಸ್ಪಷ್ಟವಾಗಿ ಕಂಡು ಬರುವ ಮೂರ್ತಿಯನ್ನು ಮೇಲಿನ ಎರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಧರಿಸಿದವನನ್ನು ನಾಭಿಯಲ್ಲಿ ಮಾಣಿಕ್ಯದಿಂದ ಅಲಂಕರಿಸಲ್ಪಟ್ಟ ವನನ್ನು,ನಂದಕಧಾರಿಯನ್ನು ಮನೋಹರವಾದ ಕಿರುಘಂಟೆ ಗಳನ್ನು ಪಾದಗಳಲ್ಲಿ ಧರಿಸಿದವನು. ಕಟಿ ಹಸ್ತ ವರದಹಸ್ತನನ್ನು ಮಣಿಕರ್ಣಿಭರಣವನ್ನು ಧರಿಸಿದವನನ್ನು, ಮಂದಸ್ಮಿತ ವದ ನಾರವಿಂದನನ್ನು,ಉತ್ತಮವಾದ ಮುತ್ತಿನ ಊರ್ಧ್ವಪುಂಡ್ರ ಗಳನ್ನು ಹೊಂದಿದವನನ್ನು, ಧಗ ಧಗ ಹೊಳೆಯುವ ರತ್ನ ಕಿರೀಟ ಧಾರಿಯನ್ನು, ಶ್ರೀವತ್ಸಾಂಕ ಕೌಸ್ತುಭಧಾರಿಯನ್ನು,ದಿವ್ಯ ಮಂಗಳಾಕಾರನನ್ನು, ಅನ್ನಮಯ್ಯ ತೃಪ್ತಿಯಾಗುವವರೆಗೂ ದರ್ಶಿಸಿದ ಆ ದಿವ್ಯ ಮಂಗಳ ವಿಗ್ರಹವನ್ನು ಅನ್ನಮಯ್ಯ ಸ್ತುತಿಸಿದ. ಸ್ತುತಿಸಿ ಕೀರ್ತಿಸಿದ ಸುಂದರನಾದ ಸ್ವಾಮಿಯನ್ನು ಕಂಡು ಧನ್ಯನಾದೆ ಎಂದು ಅನ್ನಮಯ್ಯ ತಮ್ಮ ಕೀರ್ತನೆಯಲ್ಲಿ ಹಾಡಿ ಹೊಗಳಿ ಆನಂದಿಸಿದ್ದಾನೆ.

ಪೊಡಗಂಟಿಮಯ್ಯ ಮಿಮ್ಮು ಪುರುಷೋತ್ತಮ, ಮಮ್ಮು
ನೆಡಯಕ ವಯ್ಯಾ ಕೋನೇಟಿ ರಾಯಡಾ
ಕೋರಿಮಮ್ಮು ನೇಲಿನಟ್ಟಿ ಕುಲದೈವಮಾ ಚಾಲ
ನೇರಿಚಿ ಪೆದ್ದಲಿಚ್ಚಿನ ನಿಧಾನಮಾ
ಗಾರವಿಂಚಿ ದಪ್ಪಿದೀರ್ಚು ಕಾಳಮೇಘಮಾ, ಮಾಕು
ಚೇರವಕುಂಚಿತ್ತಮ್ಮುಲೋನೀ ಶ್ರೀನಿವಾಸುಡಾ॥

ಎನ್ನುತ್ತಾ ಪರವಶಗೊಂಡ, ಅರ್ಚಕರು ನೀಡಿದ ತೀರ್ಥ ಗಳನ್ನು ಸೇವಿಸಿ,ತನ್ನ ನಿವಾಸಕ್ಕೆ ಹೊರಟ ಅನ್ನಮಯ್ಯ. ಆ ರಾತ್ರಿ ಆನಂದ ಪರವಶತೆಯಿಂದ ನಿದ್ದೆ ಬರದೇ ಇದ್ದಾಗ ಕಣ್ಣು ತುಂಬಾ ವೆಂಕಟೇಶ್ವರನ ರೂಪವನ್ನು ತುಂಬಿಕೊಂಡ. ಮರು ದಿನ ಬೆಳಗ್ಗೆ ತಿರುಮಲೆಯ ಕ್ಷೇತ್ರದಲ್ಲಿ ಇರುವಂತಹಾ ಕುಮಾರ ಧಾರೆ, ಅಮರತೀರ್ಥ,ಆಕಾಶಗಂಗೆ, ಪಾಪವಿನಾಶನ ತೀರ್ಥ ಗಳನ್ನು ಸೇವಿಸಿದ.ನಂತರ ಅನ್ನಮಯ್ಯ ಆಶುಕವಿತೆಯಾಗಿ ಅಲಮೇಲುಮಂಗಪತಿಯ ಮೇಲೆ ಅನರ್ಗಳವಾಗಿ ಶತಕವನ್ನು ಹಾಡಿದ ಅಷ್ಟೇ, ಬೀಗಗಳು ತಮಗೆ ತಾವೇ ಬಿದ್ದಿ ಹೋದುವು. ಇವೆಲ್ಲವನ್ನೂ ಗಮನಿಸಿದ ಅರ್ಚಕರು ಆಶ್ಚರ್ಯದಿಂದ ಆ ಬಾಲ ಅನ್ನಮಯ್ಯನ ಭಕ್ತಿಯನ್ನು ಕೊಂಡಾಡಿ, ಸಗೌರವದಿಂದ ಒಳಗೆ ಕರೆದುಕೊಂಡು ಹೋದರು. ಅಲ್ಲಿ ಬಂಗಾರದ ನಗಗಳಿಂದ ಅಲಂಕರಿಸಲ್ಪಟ್ಟಿದ್ದ. ಭಕ್ತರ ಪಾಲಿನ ಕಲ್ಪತರುವಾಗಿರುವ ಶ್ರೀ ವೆಂಕಟಪತಿಯನ್ನು ಅನ್ನಮಯ್ಯ ಸೇವಿಸಿದರು.

'ಧರೆಯೇ ಸಿಂಹಾಸನವಾಗಿ, ನಭವೇ ಛತ್ರವಾಗಿ, ದೇವತೆಗಳೇ ಭೃತ್ಯಾರಾಗಿ ದೇವತೆಗಳ ಪರಿವರವೇ ಮಂದಿ ಮಾರ್ಬಲರಾಗಿ ಬ್ರಹ್ಮಾಂಡವೆಲ್ಲಾ ತುಂಬಿರುವ, ಸಿರಿಯೇ ಪತ್ನಿ ಯಾಗಿ ವಿರಿಂಚಿಯೇ ಮಗನಾಗಿ, ಶ್ರೀ ಗಂಗೆಯೇ ಸತ್ಪುತ್ರಿಯಾಗಿ,

ರಾಜಸದಿಂದ ರಾರಾಜಿಸುತ್ತಿರುವ ಶ್ರೀ ಮನ್ನಾರಾಯ ಣನನ್ನು ಅನ್ನಮಯ್ಯನು ಸಂದರ್ಶಿಸುವ ಅರ್ಚಕರು ಆಗ ಮೋಕ್ತನಾಗಿ ಮಾಡುವ ಆರಾಧನೆಯ ವಿಧಾನವನ್ನು ನೋಡಿ ಅನ್ನಮಯ್ಯನು ಪುನಃ ಅದೇ ಶತಕವನ್ನು ಪಠಿಸಿದನು. ಸ್ವಾಮಿಯು ಕರುಣೆಯನ್ನು ತೋರಿದ.ಅದಕ್ಕೆ ನಿದರ್ಶನವಾಗಿ ಶ್ರೀನಿವಾಸನ ಕೊರಳಿನಲ್ಲಿ ಮುತ್ತಿನಹಾರವು ಜಾರಿ ಸ್ವಾಮಿಯ ಪದಗಳ ಮೇಲೆ ಬಿತ್ತು. ಅರ್ಚಕರು ಆಶ್ಚರ್ಯಗೊಂಡರು. ಶ್ರೀನಿ ವಾಸನ ಕೃಪಾಕಟಾಕ್ಷವನ್ನು ಪಡೆದವನು ಎಂದು ಹಾಡಿ ಹೊಗಳಿದರು. ಈ ಬಾಲಕನು ಸಾಧಾರಣನನಲ್ಲ. ಶ್ರೀನಿವಾಸನ ಭಕ್ತ ಶಿರೋಮಣಿ ಎಂದು ಹೊಗಳಿದರು ಅಲ್ಲಿದ್ದವರು ಆ ಮಾತು ಗಳನ್ನು ಕೇಳಿ ಆ ಬಾಲ ಅನ್ನಮಯ್ಯನನ್ನು ಗೌರವದಿಂದ ನೋಡಿದರು. ಅಂದಿನಿಂದ ಪ್ರತೀದಿನ ಶ್ರೀಹರಿಯ ದರ್ಶನವನ್ನು ಮಾಡಿ ಕೊಳ್ಳುತ್ತ ನಾರಾಯಣನ ನಾಮ ಸಂಕೀರ್ತನೆಗಳನ್ನು ಹಾಡುತ್ತಾ ತಿರುಮಲೆಯ ಬೀದಿಗಳಲ್ಲಿ ಓಡಾಡುತ್ತಿದ್ದ ಅನ್ನಮಯ್ಯ.

**-ಸಶೇಷ**



# ನಾಗಾವಲೋಕನ

- ಶ್ರೀಮತಿ. ಸುಮ ಚಂದ್ರಶೇಖರ್
9880060354

ಆದಿ ಮಾನವನಿಂದ ಮೊತ್ತ ಮೊದಲು ದೈವೀಕರಿಸಲ್ಪಟ್ಟು, ಪುರಾತನವಾದರೂ ಬಲಗುಂದದ ಆರಾಧನೆಯಾಗಿ ಮಾನವ ವಿಕಾಸದೊಂದಿಗೆ ಸಾಗಿ ಬಂದ ನಿಸರ್ಗದ ಚೈತನ್ಯ, ಫಲವತ್ತತೆಯ ಹಾಗೂ ಅಭಿವೃದ್ಧಿಯ ಸಂಕೇತವಾದ ನಾಗ-ಉಪಾಸನೆಯ ಹಿನ್ನೆಲೆ ರೋಚಕವಾದುದು. ಹಳೆಯ ಪೊರೆಯನ್ನು ಕಳಚಿಕೊಳ್ಳುತ್ತಾ ಮೈಗೆ ಹೊಸಕಾಂತಿ ಪಡೆಯುವ ಪ್ರಾಣಾಂತಿಕವಾದ ಆಕ್ರಮಣ, ಹೆಡೆಯೆತ್ತಿ ದಿಟ್ಟಿಸುವ ಭಯ ಹುಟ್ಟಿಸುವ ನೋಟಗಳ ಸರ್ಪದ ಕುರಿತು ಭಯಮಿಶ್ರಿತ ಆಕರ್ಷಣೆಗಳೇ ಮನುಷ್ಯ ತಲೆಬಾಗುವಂತೆ ಮಾಡಿರುವ ಅಂಶಗಳು. ಹೊನ್ನಿನಂತೆ ಹೊಳೆಯುವ ಶರೀರ, ಅಂಕುಡೊಂಕಾದ ನಡಿಗೆ, ತಲೆಯೆತ್ತಿ ಓಲಾಡುವ ಗಂಭೀರ ನಿಲುವು; ವಿಷದ ಭಯ ಇಲ್ಲದಿದ್ದರೆ ಅದನ್ನು ಹಿಡಿದು ಮುದ್ದಾಡುತ್ತಿದ್ದನೋ ಏನೋ!

### ಕುಂಡಲಿನಿ ಕೌಶಲ

ಬಾಹ್ಯ ಜಗತ್ತಿನಲ್ಲಿ ಕಾಡುವ ಸರ್ಪವನ್ನು ಮನುಷ್ಯ ದೇಹದೊಳಗೂ ಬಿಟ್ಟುಕೊಂಡು, ದೇಹ ಪ್ರಕೃತಿಯನ್ನು ಅಭ್ಯಾಸ ಮಾಡುವ ಪರಿಪಾಠವೂ ನಮ್ಮಲ್ಲಿದೆ. ನಮ್ಮ ಯೋಗ ತತ್ವ ಉಪನಿಷತ್ ನಾಲ್ಕು ರೀತಿಯ ಯೋಗಗಳು ಹೇಳುತ್ತದೆ. ಇದರಲ್ಲಿನ ಲಯ ಯೋಗದಲ್ಲಿ 'ಕುಂಡಲಿನಿ'ಯ ಉಲ್ಲೇಖವಿದೆ. ಕುಂಡಲಿನಿ ಎಂದರೆ ಸುರುಳಿಯಾಕಾರ, ಕುಂಡಲಿಯ ಶಕ್ತಿಯು ಬೆನ್ನು ಮೂಳೆಯ ಕೆಳಭಾಗದಲ್ಲಿ ಹಾವಿನಂತೆ ಸುರಳಿಯಾಕಾರದಲ್ಲಿ ಸುತ್ತಿ ಕುಂಡಲಿಯ ಶಕ್ತಿಯು ಬೆನ್ನ ಮೂಳೆಯ ಕೆಳಭಾಗದಲ್ಲಿ ಹಾವಿನಂತೆ ಸುರಳಿಯಾಕಾರದಲ್ಲಿ ಸುತ್ತಿಕೊಂಡಿರುತ್ತದೆ ಎಂದು ಯೋಗ ವಿಜ್ಞಾನ ಹೇಳುತ್ತದೆ. ಯೋಗದ ಮೂಲಕ ಈ ಹಾವನ್ನು ಅಂದರೆ ಕುಂಡಲಿಯನ್ನು ಜಾಗೃತಗೊಳಿಸಿ ಒಂದೊಂದೇ ಚಕ್ರದ ಮೂಲಕ ಅದರ ಶಕ್ತಿಯು ಬೆನ್ನು ಮೂಳೆಗಳ ಮೂಲಕ ಹಾದು ಮೆದುಳು ಸೇರುವಂತೆ ಮಾಡಲಾಗುತ್ತದೆ. ಆದರೆ ಇದನ್ನು ಗುರುವಿನ ಮೂಲಕವೇ ಸಾಕಾರಗೊಳಿಸಿಕೊಳ್ಳಬೇಕು. ಯೋಗದಲ್ಲಿ ಮಾತ್ರವಲ್ಲ, ಅನೇಕ ಶಾಸ್ತ್ರಗಳಲ್ಲಿ ಈ 'ಸರ್ಪಶಕ್ತಿಯ' ಪ್ರಸ್ತಾಪವಿದೆ. ಪ್ರಾಜ್ಞರ ಪ್ರಕಾರ ದೇಹದಲ್ಲಿ ನಾಲ್ಕು ಪುರುಷರಿದ್ದಾರೆ. ಶರೀರ ಪುರುಷ, ಛಂದಃ ಪುರುಷ ವೇದಪುರುಷ ಮತ್ತು ಸಂವತ್ಸರ ಪುರುಷ. ಈ ದೇಹ ನಿಂತು ನಡೆದಾಡಬೇಕಾದರೆ ದೇಹದಲ್ಲಿ ಶರೀರ ಪುರುಷನಾದ ಶಿವಶಕ್ತಿಬೇಕು. ಮನಸ್ಸು ಯೋಚಿಸಿದಕ್ಕೆ ಸ್ಪಂದಿಸಲು, ವಾಕ್ ಶಕ್ತಿಯಾಗಿ ಹೊರ ಹೊಮ್ಮಲು ಛಂದಃ ಪುರುಷನಾದ ಶೇಷ ಶಕ್ತಿ (ಶೇಷ ಎಂದರೆ ಸರ್ಪ) ಬೇಕು.

ವಿಶೇಷವಾಗಿ ಅಭೀಷ್ಟನಾದ ಶೇಷ ಶಯನನಾಗಿರುವ ಭಗವಂತ ನಮ್ಮಲ್ಲಿರುವ ವೇದಪುರುಷ (ಗರುಡ) ಜಾಗೃತನಾಗುವಂತೆ ಮಾಡಿ ಅಪೂರ್ವವಾದ ವೈದಿಕ ವಾಙ್ಮಯ ಶಕ್ತಿ ಪ್ರಾಪ್ತವಾಗುವಂತೆ ಮಾಡುತ್ತದೆಯಂತೆ. ಶ್ರೀ ಜಗನ್ನಾಥದಾಸರು ಶೇಷ ಶಕ್ತಿಯ ಕುರಿತು ರಚಿಸಿದ ಒಂದು ಕೀರ್ತನೆಯಲ್ಲಿ 'ಶೇಷ ಶಕ್ತಿ ನಮ್ಮೊಳಗೇ ಇದೆ. ಈ ಶೇಷ ದೇವರು (ಶಕ್ತಿ) ಜಾಗೃತವಾದಾಗ, ಸರ್ಪದ ಸಹಸ್ರಾರು ಹೆಡೆಗಳು ಬಿಚ್ಚಿ ನಮಗೆ ಭಗವಂತ ಕಾಣುತ್ತಾನೆ. ಅವನು ಶೇಷಶಾಯಿ ಎಂದು ವರ್ಣಿಸುತ್ತಾರೆ.

### ಪಂಚಮಿ ಜೀವನದ ಜೋಕಾಲಿ

ಶ್ರಾವಣ ಬಂತು ಕಾಡಿಗೆ ಬಂತು ನಾಡಿಗೆ ಬಂತು. ಬೀಡಿಗೆ ಬಂತು ಶ್ರಾವಣ ಓ! ಬಂತು ಶ್ರಾವಣ! - ಎಂದು ನಮ್ಮ ಶ್ರಾವಣದ ಸಂಭ್ರಮದ ಸಿರಿಯನ್ನು ತಮ್ಮದೇ ಜನಪದದ ಸಿರಿಯಲ್ಲಿ ಬೇಂದ್ರೆಯವರು ಹಾಡಿದ್ದಾರೆ. ಅದೂ ಈಗಲೂ ಧಾರವಾಡದ ಪೇಡಾದಷ್ಟೇ ಸವಿಯಾಗಿದೆ. 'ನಾಗರ ಪಂಚಮಿ ನಾಡಿಗೇ ದೊಡ್ಡದು' ಎನ್ನುವ ಮಾತಿದೆ. ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ರೀತಿಯಲ್ಲಿ ಆಚರಿಸಲಾಗುತ್ತಿದೆ.

### ಕಲ್ಪನೆ - ಆಚರಣೆ

ದೇವರನ್ನು ಸರ್ವಭೂತಾಂತರಾತ್ಮ ಎಂದು ತಿಳಿದವರು ಭಾರತೀಯರು. ಆದ್ದರಿಂದಲೇ ಅನೇಕ ಪ್ರಾಣಿ ವಿಶೇಷಗಳನ್ನೂ, ವೃಕ್ಷ ವಿಶೇಷಗಳನ್ನೂ ಕೆಲವು ದಿವ್ಯಶಕ್ತಿಗಳ ಸಂಕೇತವಾಗಿ ಭಾರತೀಯ ಸಂಸ್ಕೃತಿ ಮಾನ್ಯ ಮಾಡಿದೆ.



ಆನೆಯ ಸೊಂಡಿಲ ಗಣಪತಿ, ಕುದುರೆಯ ಮುಖದ ಹಯಗ್ರೀವ, ಹಂದಿಯ ಮುಖದ ವರಾಹಾವತಾರಿ ವಿಷ್ಣು - ಇವರೆಲ್ಲ ದೇವತಾಮೂರ್ತಿಗಳಾದರೆ ಶೇಷ,ಆನೆ, ಆಮೆ, ಮೀನು, ಸಿಂಹ, ಇಲಿ, ನಂದಿ, ನವಿಲು ಮುಂತಾದ ಪ್ರಾಣಿಗಳು, ಹಂಸ ಗರುಡ ಮೊದಲಾದ ಹಕ್ಕಿಗಳು ದೈವ ಸಾನ್ನಿಧ್ಯದಲ್ಲಿ ಸೇವೆ ಸಲ್ಲಿಸುತ್ತದೆ. ಜಗತ್ತಿನ ಇತರ ದೇಶಗಳ ಸಂಸ್ಕೃತಿಯಲ್ಲೂ ಈ ನಂಬಿಕೆ ರೂಢಿಯಲ್ಲಿದೆ.

ಅವುಗಳ ವಂಶ ನಾಶದ ಅಂಚಿನಲ್ಲಿದ್ದಾಗ ಆಸ್ತಿಕನಿಂದ ಉಳಿದು ಬೆಳೆಯಲ್ಲಿಲ್ಲವೇ? ಹಾಗೆ ಪ್ರತಿಯೊಬ್ಬರ ವಂಶವು ಬೆಳೆಯ ಬೇಕಲ್ಲವೇ? ಹೀಗಾಗಿ ನಾಗಪ್ರತಿಷ್ಠೆಯನ್ನು ನಡೆಸು ವುದು,ನಾಗನನ್ನು ಪೂಜಿಸುವುದು ವಂಶೋದ್ಧಾರಕ ಪದ್ಧ ತಿಯೂ ಹೌದು.

ಆದ್ದರಿಂದ ಸರ್ಪದ ಕಣ್ಣುಗಳನ್ನೇ ಹೋಲುವ ಸಾಸು ವೆಯ ಬಳಕೆ ಅಂದು ಸಂಪ್ರದಾಯ ಸಮ್ಮತವಲ್ಲ. ಅಂತೆಯೇ ಅತಿಯಾದ ಶಾಖದಿಂದ ಅದರ ಚರ್ಮಗಳು ಸುಟ್ಟು ಹೋಗು ವುದಲ್ಲವೇ? ಅದಕ್ಕಾಗಿ ಅಂದು ಅತಿ ಶಾಖ ನೀಡುವ ಹುರಿಯುವ ಕ್ರಿಯೆಯಾಗಲಿ,ಎಣ್ಣೆಯಲ್ಲಿ ಕರಿಯುವ ನೀತಿಯಾಗಲಿ ನಿಷಿದ್ಧ,ಒಳಗಡೆ ಹಬೆಯಿಂದಲೇ ಬೇಯುವ ಕಡುಬು, ಹುರಿಯದ ಎಳ್ಳಿನ ಚಿಗಳಿ, ತಂಬಿಟ್ಟು ಮಾಡಲಾಗುವುದು. ಆಯಾ ಋತುವಿಗನು ಸಾರವಾಗಿ,ಅವುಗಳ ಆಚರಣೆಯಿಂದ ಆರೋಗ್ಯ ಕಾಪಾಡುವ ಪರಿಕಲ್ಪನೆ ಅದ್ಭುತ.

ಎಳ್ಳಿನಲ್ಲಿರುವ ಎಣ್ಣೆ ಅಂಶದಿಂದ ವರ್ಷ ಋತುವಿನಲ್ಲಿ ಉಲ್ಬಣ ಗಳೊಳ್ಳುವ ಅನೇಕ ವಾತ ರೋಗಗಳು ಶಮನವಾಗುವುದು. ಇದ ರಲ್ಲಿರುವ ನೈಸರ್ಗಿಕ ಈಸ್ಟ್ರೋಜನ್ ಸ್ತ್ರೀ ಸಂಬಂಧಿ ರೋಗಗಳಿಗೆ ಉಪಯುಕ್ತ ಮುಖ್ಯವಾಗಿ ಸ್ತನದ ಕ್ಯಾನ್ಸರ್, ಗರ್ಭಾಶಯದ ಗಡ್ಡೆ ಗಳನ್ನು ತಡೆಗಟ್ಟುವ ಸಾಮರ್ಥ್ಯವಿದೆ. ವಿಟಮಿನ್ ಇ ತ್ವಚೆಯ ಮತ್ತು ಕೂದಲುಗಳ ಆರೋಗ್ಯ ಸಂರಕ್ಷಿಸುವುದು.

ಭತ್ತ ಜೋಳವನ್ನು ಹುರಿದಾಗ ಅರಳಾಗುತ್ತದೆ. ಮಹಿಳೆಯರು ಅರಳನ್ನು ನಿಯಮಿತವಾಗಿ ಬಳಸಿದಾಗ ಮುಟ್ಟಿನ ತೊಂದರೆಗಳನ್ನು ತಡೆಯಬಹುದು. ಇದರಲ್ಲಿರುವ ನಿಯಾಸಿನ್ ಅಂಶವು ಕೊಲೆಸ್ಟ್ರಾಲ್ ಕಡಿಮೆ ಮಾಡುತ್ತದೆ. ರೈಬೋಫ್ಲವಿನ್ ರಕ್ತಹೀನತೆಯನ್ನು ತಡೆಯುವಲ್ಲಿ ಉಪ ಯುಕ್ತ.

ಗೋಧಿ ಹಿಟ್ಟನ್ನು ಹುರಿದು ಮಾಡುವ ಖಾದ್ಯ ತಂಬಿಟ್ಟು. ಗೋಧಿ ನಮ್ಮ ದೇಹಕ್ಕೆ ಪ್ರೋಟೀನ್ ಒದಗಿಸುವ ಪ್ರಮುಖ ಆಹಾರ, ಇದ ರಲ್ಲಿರುವ ಜಿಂಕ್, ಫೋಲಿಕ್ ಆಮ್ಲ, ಪೊಟಾಶಿಯಂ,ವಿಟಮಿನ್ ಬಿ ನರ ದೌರ್ಬಲ್ಯಕ್ಕೆ ದಿವ್ಯೌಷಧ. ಈ ಎಲ್ಲ ಕಾರಣಕ್ಕೆ ನಮ್ಮ ಪೂರ್ವಿಕರು ಇವುಗಳ ಮಹತ್ವ ಅರಿತು,ಆಹಾರ ಔಷಧಿ ಇಲ್ಲವೇ ಪ್ರಸಾದದ ರೂಪದಲ್ಲಿ ಯಾದರೂ ಒದಗಲಿ ಎಂದು ಹಬ್ಬಗಳಲ್ಲಿ ಅಳವಡಿಸಿದರು.

### ಉಪಯೋಗಗಳು

ಲಘು, ಸ್ನಿಗ್ಧ, ತಿಕ್ತ, ಮಧುರ, ಕಟು ರಸಗಳನ್ನು ಮತ್ತು ಉಷ್ಣ ವೀರ್ಯ ಹೊಂದಿದೆ. ತ್ರಿದೋಷ ಶಾಮಕವಾಗಿದ್ದು ವಿಶೇಷವಾಗಿ ಕಫ ಮತ್ತು ಪಿತ್ತ ಶಾಮಕವಾಗಿದೆ. ಇದು ರಕ್ತ, ಮೇದಸ್ಸು ಶುಕ್ರ ಧಾತು,ಮನಸ್ಸು ಮತ್ತು ಗರ್ಭಾಶಯದ ಮೇಲೆ ಕಾರ್ಯ ನಿರ್ವಹಿಸುತ್ತದೆ. ದಕ್ಷಿಣ ಕನ್ನಡದಲ್ಲಿ ಕೇದಿಗೆಯನ್ನು ಹೋಲುವ ಮತ್ತೊಂದು ಕೇದಿಗೆ ಹೆಚ್ಚು ಬೇಡಿಕೆ ಇರುವಾಗ ಇದನ್ನೆ ಕೇದಿಗೆ ಎಂದು ಮಾರುವರು. ಮುಂಡಕದ ಎಲೆಯಿಂದ ಸಾಮಾನ್ಯವಾಗಿ ಕೊಟ್ಟೆ ಕಡುಬನ್ನು ಬೇಯಿಸುವರು. ಇದು ಕೇದಿಗೆಯ ಎಲೆಗಿಂತಲೂ ದಪ್ಪವಿರುವುದು. ಇದನ್ನು ಹದಮಾಡಿ ಕೊಟ್ಟೆ ತಯಾರಿಸುವ ವರು. ಕೇದಿಗೆ ಎಲೆಗಳು ತೆಳುವಾಗಿರುತ್ತವೆ.ಹೆಚ್ಚು ದೊರೆ ಯುವುದಿಲ್ಲ.ಕೇದಿಗೆಯ ಕೊರತೆ ಇರುವ ಕಡೆ ಮುಂಡಕ ವನ್ನು ಉಪಯೋಗಿಸುವರು.

ಹೂವಿನಲ್ಲಿ ಲಿವರ್‌ನ್ನು ರಕ್ಷಿಸುವ, ಎಲೆಗಳಲ್ಲಿ ಖಿನ್ನತೆ ಯನ್ನು ಕಡಿಮೆ ಮಾಡುವ ಮತ್ತು ಬೇರಿನಲ್ಲಿ ಕ್ಯಾನ್ಸರ್ ಗುಣ ಮಾಡುವ ಶಕ್ತಿ ಇದೆ ಎನ್ನುತ್ತದೆ ಸಂಶೋಧನೆ. ಬಂಗಾರ ವರ್ಣದ ಕೇತಕಿಯ ಪುಷ್ಪವು ಹೇಮಕೇತಕಿ ಎನ್ನುವರು. ಕೇದಿಗೆ ತೈಲವು ನೋವು ನಿವಾರಕವಾಗಿರುವುದರಿಂದ ಕೀಲು ಮೂಳೆನೋವು, ಸೊಂಟನೋವು,ತಲೆನೋವು

## ನಾಗದೇವತೆಗೆ ಪ್ರಿಯ ಕೇದಿಗೆ

ಹೂವು ಕೇದಿಗೆಯನ್ನು ಸೂಚಿ ಪುಷ್ಪ, ಹಲೀಮಕ, ತೃಣಶೂನ್ಯ, ಕರತೃಣ ಸುಗಂಧ ಎಂಬುದಾಗಿಯೂ ಕರೆಯುತ್ತಾರೆ. ನಾಗ ದೇವತೆಗೆ, ಲಕ್ಷ್ಮೀ ಮತ್ತು ಗಣಪತಿ ಪೂಜೆಗಳಲ್ಲಿ ಕೇದಿಗೆಯನ್ನು ಬಳಸುವುದು ರೂಢಿಯಲ್ಲಿದೆ. ಆಹಾರ ಮತ್ತು ಔಷಧಗಳು ವಿವಿಧ ಸ್ಥಳಗಳಿಗೆ ಅನುಗುಣವಾಗಿ ಬೆಳೆಯುವುದು ಪ್ರಕೃತಿಯ ವಿಸ್ಮಯಗಳಲ್ಲೊಂದು. ಪಾಕಕ್ರಿಯೆಗಳು ಮತ್ತು ಉಪಯೋಗಿಸುವ ವಿಧಾನಗಳು ಸಹ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುವುದನ್ನು ನಾವು ನೋಡಬಹುದು. ಪ್ರಕೃತಿಯ ಮಾತೆಯೇ ಜಗತ್ತಿನಲ್ಲೆಡೆ ಮಾನವನ ಆರೋಗ್ಯವನ್ನು ಕಾಪಾಡಲು ಹವಾಗುಣಕ್ಕೆ ತಕ್ಕಂತೆ ಆಹಾರ ಮತ್ತು ಔಷಧಗಳನ್ನು ವಿನ್ಯಾಸಗೊಳಿಸಿರುವುದು ಕೂಡಾ ಪ್ರಕೃತಿಯ ಕೊಡುಗೆಯೇ ಸರಿ.

ದಕ್ಷಿಣ ಕನ್ನಡದಲ್ಲಿ (ಕೊಟ್ಟೆ ಕಡುಬು) ಒಂದು ವಿಶಿಷ್ಟವಾದ ತಿಂಡಿ. ಹಲಸಿನ ಅಥವಾ ಕ್ಯಾದಿಗೆ ಎಲೆಗಳಲ್ಲಿ ಕಡುಬು ಬೇಯಿಸಿ ತಯಾರಿಸುವರು. ಎಲೆಗಳ ಸುವಾಸನೆ ಮತ್ತು ಔಷಧ ಗುಣಗಳು ಕಡುಬಿಗೆ ಸೇರುವುದರಿಂದ ತಿನ್ನಲು ರುಚಿಯಾಗಿದ್ದು ಮತ್ತು ಆರೋಗ್ಯಕ್ಕೆ ಹಿತವಾಗಿದೆ. ಕುಂದಾಪುರ ತಾಲ್ಲೂಕಿನ ಕುಂಭಾಸಿಯ ಆನೆಗುಡ್ಡೆ ಶ್ರೀ ವಿನಾಯಕನಿಗೆ ಕೇದಿಗೆಯ ಕೊಟ್ಟೆ ಕಡುಬಿನ ಸೇವೆ ಮಾಡುವುದು ವಿಶೇಷ.

ಕೇದಿಗೆಯು ಕಾಡಿನಲ್ಲಿ ಮತ್ತು ಸಮುದ್ರ ದಂಡೆಗಳಲ್ಲಿ ಚಿಕ್ಕ ಮರವಾಗಿದೆ ಗುಂಪಾಗಿ ನದಿ ತೀರಗಳಲ್ಲಿ, ಕೊಳಗಳ ಹತ್ತಿರ ಮತ್ತು ನೀರಿರುವ ಜಾಗಗಳಲ್ಲಿ ಬೆಳೆಯುವುದು. ಸುಮಾರು 30 ರಿಂದ 40 ಜಾತಿಗಳು ಇವೆ. ಅವುಗಳಲ್ಲಿ ಪ್ಯಾನ್ಡನಸೆ ಒಡರೋಟಿಸಿಮಸ್ ಎಂಬುದು ಕ್ಯಾದಿಗೆಯಾಗಿದ್ದು ಅದ ಪ್ಯಾನ್ಡನೇಸಿ ಕುಟಂಬಕ್ಕೆ ಸೇರಿದೆ ಕಾಂಡವು ಅಂಕುಡೊಂಕಾಗಿರುತ್ತದೆ. ವರ್ಷದಲ್ಲಿ ಮೂರು ಬಾರಿ ಹೂ ಬಿಡುವುದು. ಸುಮಾರು 30 ರಿಂದ 40 ಹೂ ಬಿಡುವುದು. ತುದಿ ಚೂಪಾಗಿದ್ದು ಎಲೆಯ ಅಂಚು ಗರಗಸದಂತೆ ಇರುವುದು. ಕೇದಿಗೆ ಹೂ ಬೂದು ಬಣ್ಣದ ದಿಂಡಿನ ಭಾಗವಾಗಿದೆ. ಕೇದಿಗೆಯಲ್ಲಿ ಗಂಡು ಮತ್ತು ಹೆಣ್ಣು ಎಂಬ ಎರಡು ವಿಧಗಳಿವೆ. ಗಂಡು ಹೂ ಹೆಣ್ಣು ಪರಿಮಳವನ್ನು ಹೊಂದಿರುವುದರಿಂದ ಸುಗಂಧ ತೈಲವನ್ನು ತಯಾರಿಸುವರು. ಸೂಚಿ ಪುಷ್ಪ, ಹಲೀಮಕ, ತೃಣಶೂನ್ಯ, ಕರತೃಣ, ಸುಗಂಧ ಎಂಬ ಪರ್ಯಾಯಗಳನ್ನು ಹೊಂದಿದೆ.

ಮತ್ತು ಕಿವಿ ನೋವುಗಳಲ್ಲಿ ಉಪಯೋಗಿಸುವರು. ಕೇತಕಿಯ ಸುಗಂಧವು ಮನಸ್ಸಿಗೆ ಚೈತನ್ಯವನ್ನು ನೀಡುವುದು. ಶರೀರದ ದಣಿಯನ್ನು ನೀಗಿಸುವುದಲ್ಲದೆ ಮನಸ್ಸಿಗೆ ಸಂತೋಷವನ್ನುಂಟು ಮಾಡುವುದು.

ಎಲೆಯನ್ನು ಚರ್ಮರೋಗಗಳಿಗೆ, ಸಕ್ಕರೆ ಕಾಯಿಲೆಗೆ ಔಷಧವಾಗಿ ಬಳಸುವರು. ಸಂಧಿನೋವು ಕಡಿಮೆ ಮಾಡುವ ಗುಣವನ್ನು ಹೊಂದಿದೆ. ಎಲೆಯನ್ನು ಜಗಿಯುವುದು ವಸಡಿನ ಆರೋಗ್ಯಕ್ಕೆ ಒಳ್ಳೆಯದು. ವಸಡಿನ ರಕ್ತಸ್ರಾವವನ್ನು ಕಡಿಮೆಗೊಳಿಸುವುದು. ಸ್ನಾನ ಮಾಡುವ ನೀರಿಗೆ ಹಾಕಿ ಸ್ನಾನ ಮಾಡುವುದರಿಂದ ಸೂರ್ಯನಿಂದ ಉಂಟಾಗುವ ಸನ್‌ಬರ್ನ್ ಇಲ್ಲವಾಗುವುದು. ಹೂವಿನ ದಿಂಡಿನ ಭಾಗವನ್ನು ತಲೆನೋವು ಮತ್ತು ಕಾಲುನೋವು ನಿವಾರಿಸಲು ಬಳಸುವರು. ಕೇದಿಗೆಯನ್ನು ಸುಗಂಧ ತೈಲ, ಚಾಪೆ, ಚೀಲ, ಹಗ್ಗ, ಬುಟ್ಟಿ, ಪೇಪರ್,.. ಪೇಂಟ್ ಬ್ರಶ್ ತಯಾರಿಸ ಬಹುದು. ಬಟ್ಟೆಗೆ ಮತ್ತು ಆಹಾರಕ್ಕೆ ಸುಗಂಧ ಬರಿಸಲು, ಸೋಪು, ಅಗರಬತ್ತಿ, ಕೇಶ ತೈಲ, ಪಾನ್ ಮಸಾಲ, ಸೌಂದರ್ಯ ಸಾಧನಗಳಲ್ಲಿಯೂ ಬಳಸುವರು. ಇದರ ತೊಗಟೆಯ ಕಷಾಯವು ಗಾಯಗಳನ್ನು ಶುದ್ಧಿಗೊಳಿಸಿ ಒಣಗಿಸುವುದು.

### ನಾಗನ ನೆನೆಯುತ್ತಾ:

ಹಾವಿನ ಪೊರೆ ಕಳಚುವಿಕೆಯನ್ನು ಗುರುತಿಸಿ ಮನುಷ್ಯನು ಸಂಸಾರದ ಅಚೀಚೆಯ ಹಂಗುತೊರೆಯ ಬೇಕೆನ್ನುವ ಉಪದೇಶ ಸಾರ ವೇದದಲ್ಲಿದೆ. ಬಂಜೆತನ ಮತ್ತು ಚರ್ಮರೋಗ ನಿವಾರಣೆಗೆ ನಾಗನಿಗೆ ಹರಕೆ ಅನೂಚಾನ, ನಾಗನನ್ನು ಕುಂಡಲಿನಿಗೆ ಹೋಲಿಸಿ, ಚಿತ್ತವೃತ್ತಿಯನ್ನು ನಿಯಂತ್ರಿಸಿ ತಂತ್ರ ಶಾಸ್ತ್ರಾಗಮ ರೀತ್ಯಾ ಅರ್ಚಿಸಿ ಇಷ್ಟಾರ್ಥ ಫಲಿಸುವ ವಿಧಾನ ನಮ್ಮಲಿದೆ.

ಶ್ರಾವಣದಲ್ಲಿ ಮಳೆಯ ಆರ್ಭಟ ಅದರಿಂದ ರಕ್ಷಣೆ ಪಡೆಯಲು ಬಿಲಗಳಿಂದ ಸರ್ಪಗಳು ಹೊರಬರುವುವು. ಮೃಣ್ಮಯ ನಾಗನ ಪೂಜೆಗೆ ಕಾರಣ ರೈತನಿಗೆ ಮಣ್ಣೆ ಸರ್ವಸ್ವವಾದುದರಿಂದ ಮಣ್ಣಿನ ಪೂಜೆ ಕೂಡ ಮಹತ್ವದ್ದು. ನಿಜಕ್ಕೂ ಹುತ್ತವನ್ನು ಕಟ್ಟುವುದು ಪ್ರಕೃತಿಯಲ್ಲಿ ವಿಸ್ಮಯದ ಆರ್ಕಿಟೆಕ್ಟ್ ಎಂದು ಗುರುತಿಸಲಾಗುವ ಗೆದ್ದಲು. ಪರಿಸರ ಸ್ನೇಹಿಯಾದ ಗೆದ್ಲಿನ ಮನೆಗೆ ಹಾವು ಬಂದು ಸೇರಿಕೊಳ್ಳುತ್ತದೆ. ಕಾಲಿಲ್ಲದಿದ್ದರೂ ತೆವಳಿ ಸರಿದು ಹೋಗುವವು ಭುಜಂಗಗಳು ಅವುಗಳಂತೆ ನಾವು ಶಕ್ತಿ ಮೀರಿ ಧರ್ಮಮಾರ್ಗಿಗಾಮಿಗಳಾಗಬೇಕು ಎಂಬುದನ್ನು ಹೇಳುತ್ತದೆ. ಒಂದೇ ಹುತ್ತದಲ್ಲಿ ಹಲವು ಸರ್ಪಗಳು ನೆಲೆಸುವ ಅನ್ಯೋನತೆ, ಒಟ್ಟಾಗಿ ಬ್ರಹ್ಮನನ್ನು ಪ್ರಾರ್ಥಿಸಿದ ಆ ಧಾರ್ಮಿಕ ಒಗಟ್ಟು, ಸಹೋದರ ಭಾವನೆ ನಮಗೆ ಆದರ್ಶಪ್ರಾಯ.

### ನಾಗನಿಗೆ ಆರಾಧನೆ:

ನಾಗರಹಾವು ಎಂದರೆ ನಮಗೆ ಅದೇನೋ ಭೀತಿ. ನಮ್ಮೆಲ್ಲಾ ನ್ಯೂನತೆಗಳಿಗೂ ನಾಗದೋಷವೇ ಕಾರಣ ಎನ್ನುವ

ಭ್ರಮೆ ನಮ್ಮದು. ಆ ಕಾರಣ ನಾಗರ ಸಂತುಷ್ಟಿಗೆಂದು ಪೂಜೆ, ಪುನಸ್ಕಾರ, ಎಲ್ಲದರಲ್ಲೂ, ಕುಂಡಲಿನಿ ಶಕ್ತಿಯಲ್ಲೂ, ದೇಹದೊಳಗಿನ ಚಕ್ರದಲ್ಲೂ, ಅಂಗ ವಿನ್ಯಾಸ, ಬ್ರಹ್ಮಾಂಡದ ನಿರ್ಮಾಣ ಸ್ಥಿತಿಯಲ್ಲೂ, ಸೋದರ ಸೋದರಿಯರ ಬಾಂಧವ್ಯದಲ್ಲೂ, ಜಾತಕ ಕುಂಡಲಿಯಲ್ಲಿ ರಾಹುವಾಗಿ, ಕೇತುವಾಗಿಯೂ, ಹೀಗೆ ಅನೇಕತೆಯಲ್ಲೂ ಏಕಸ್ವರೂಪವಾಗಿ ನಾಗನನ್ನು ಕಾಣುವ ತವಕ, ಅಂತಹ ತವಕ, ಭಾವುಕತೆಯ ಬುಸು ಗುಡುವಿಕೆಯಲ್ಲೇ ಅವನ ಹೆಸರಿನಲ್ಲೊಂದು ಆಚರಣೆ. ಇಲ್ಲಿ ನಾವು ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದು ನಾಗ, ನಾಗ ಎಂದಾಕ್ಷಣ ನಮ್ಮ ದೃಷ್ಟಿ ಹರಿವುದು ಅದರೊಳಗಿನ ವಿಷ. ನಾಗನೆಲ್ಲಿ ಕಚ್ಚಿ ವಿಷವನ್ನು ಉಣಿಸುತ್ತಾನೋ, ಜೀವ ತೆಗೆಯುತ್ತಾನೋ ಎನ್ನುವ ಭಯ. ಅಂದರೆ ಭಯ ಬಗೆ ಹರಿಯಲು ಅಭಯಬೇಕು. ಇಲ್ಲಿ ಅಭಯ ಎನ್ನುವುದು ಪರಿವರ್ತನೆಯ ಹಾದಿಯ ಪ್ರಾರಂಭ. ಒಳ್ಳೆಯದಕ್ಕೆ ಬುನಾದಿ! ಇನ್ನೊಂದು ದೃಷ್ಟಿಕೋನದಲ್ಲಿ ನೋಡೋಣ. ವೈಜ್ಞಾನಿಕವಾಗಿ ವಿಷ ಎಂದರೆ ಟಾಕ್ಸಿಕ್. ತ್ಯಾಜ್ಯ ವಸ್ತು. ಶರೀರದೊಳಗೆ ಸೇರಿ ಕೊಂಡಾಗ ಕಾಯಿಲೆಗೆ ಕಾರಣವಾಗುತ್ತದೆ. ಜೀವಭಯಕ್ಕೆ ಮೂಲ, ಮತ್ತೆ ಪರಿವರ್ತನೆಯ ಹಾದಿ ತೆರೆದುಕೊಳ್ಳುತ್ತದೆ.

ಮೇಲಿನೆರಡೂ ಸಂಗತಿಗಳು ಪರಿವರ್ತನೆಯನ್ನೇ ಬಯಸಿದರೂ ನೋಡುವ ದೃಷ್ಟಿಕೋನ ಬೇರೆಯಾಗುತ್ತದೆ. ಮೊದಲನೆಯದರಲ್ಲಿ ದೈವೀಕ್ರಜ್ಞೆ ಅಥವಾ ಅಲೌಕಿಕ ಜ್ಞಾನದ ತೃಷೆಯಿದ್ದರೆ, ಎರಡನೆಯದರಲ್ಲಿ ಲೌಕಿಕ ಪ್ರಜ್ಞೆಅಥವಾ ಲೋಕಜ್ಞಾನವೇ ಮುಖ್ಯವಾಗುತ್ತದೆ. ಹೀಗೆ ಪಯಣ ಅಜ್ಞಾನದಿಂದ ಜ್ಞಾನದತ್ತ ಸಾಗುತ್ತದೆ. ಅದಕ್ಕೆ ಭಯವೇ ಮಾನದಂಡವಾಗುತ್ತದೆ. ಕಾಲ ಸೂಚಕವಾಗುತ್ತದೆ. ಈ ದೃಷ್ಟಿಯಲ್ಲೇ ನಾಗರ ಪಂಚಮಿ ಹಬ್ಬವನ್ನು ಗಮನಿಸೋಣ.

ಈ ಹಬ್ಬದಾಚರಣೆಯಲ್ಲಿ ಭೀತಿಯೇ ಪ್ರೀತಿಯಾಗಿ ಪರಿವರ್ತನೆಯಾಗುತ್ತದೆ. ಬದಲಾವಣೆಗೆ ನಾಂದಿ ಹಾಡುತ್ತದೆ. ಶಾಲೆಯಲ್ಲಿ ನಾವು ಓದಿ ತಿಳಿದದ್ದು ಹಾವಿಗೂ, ಹಾಲಿಗೂ ಎತ್ತಣಿಂದೆತ್ತ ಸಂಭಂಧವಯ್ಯ? ಆದರೂ ನಾವು ಹಾವಿಗೆ ಹಾಲೆರೆಯುತ್ತೇವೆ. ಸಂಭ್ರಮಿಸುತ್ತಲೇ ದೋಷಗಳೆಲ್ಲಾ ದೂರವಾಯಿತು ಎಂದು ಭಾವಿಸುತ್ತೇವೆ. ಹೀಗೆ ಹಾಲು ಭಯ ಕಳೆವ, ಅಭಯ ನೀಡುವ ಸಾಧನವಾಯಿತು. ನಂಬಿಕೆಗೊಂದು ಆಧಾರವಾಯಿತು. ನಂಬಿಕೆಗೆ ಮತ್ತಷ್ಟು ಇಂಬು ಕೊಡಲು ತುಪ್ಪವೂ ಬಳಕೆಯಾಯಿತು.

ನಮ್ಮಲ್ಲೊಂದು ನಂಬಿಕೆಯಿದೆ. ನಂಬಿಕೆಗೆ ಪುಷ್ಟಿ ಕೊಡುವಂತಹ ಆಚರಣೆಗಳಿವೆ. ಇಲ್ಲಿ ನಂಬಿಕೆಗಳು ಶೂನ್ಯವಾದರೆ ಆಚರಣೆಗಳೇ ಅಂಕಿಗಳಾಗುತ್ತವೆ. ಆಚರಣೆ, ನಂಬಿಕೆ ಒಂದಾದಾಗ ಭಾವನೆಗಳಿಗೊಂದು ಬೆಲೆ ಬರುತ್ತದೆ. ಹೌದು, ಅಂತಹ ನಂಬಿಕೆ, ಆಚರಣೆಗಳ ಬೆನ್ನಲ್ಲಿ ಮೌಲ್ಯ ಪಡೆದು ಕೊಂಡದ್ದೇ ನಾಗರ ಪಂಚಮಿ. ಪಂಚಮಿ ಹಬ್ಬ ಚೌತಿಗೆ ತನಿ ಎರೆದು, ಮನದೊಳಗಿನ ವಿಷ ಕಳೆದುಕೊಂಡು ಪಂಚಮಿಗೆ ಸಿಹಿಯುಣಿಸಿ ಸೋದರ ಬಾಂಧವ್ಯ ಗಟ್ಟಿ ಮಾಡೋ ಹಬ್ಬ.

## ನವ ನಾಗನೊಳಗಿನ ಆಧ್ಯಾತ್ಯ ಸಿಂಚನ

ಶ್ರಾವಣದಲ್ಲಿ ಚಂದ್ರನ ಪ್ರಭಾವ ಹೆಚ್ಚು. ಚಂದ್ರನು ಮನಸ್ಸಿಗೆ ಸಂಬಂಧಪಟ್ಟ ಗ್ರಹ. ಚಂದ್ರನ ಪ್ರಭಾವ ಹೆಚ್ಚುತ್ತಿರುವ ಶ್ರಾವಣಮಾಸದ ಪಂಚಮಿಯಂದು ನಾಗಾರಾಧನೆ ಮಾಡುವುದರಿಂದ ಕೇವಲ ದೇಹಾರೋಗ್ಯ ಮಾತ್ರವಲ್ಲದೆ ಮಾನಸಿಕ ದುಃಖವೂ ನಿವಾರಣೆಯಾಗಬಲ್ಲದು.

ಸುಂದರವಾದ ಬದುಕನ್ನು ಬಯಸದವರಿಲ್ಲ. ಮನುಷ್ಯ ಸಂಘಜೀವಿ. ಸಮಾಜಜೀವಿ. ಏಕತಾನತೆ ಮನುಷ್ಯನನ್ನು ಕಾಡುವ ಭೂತ. ಹಾಗಾಗಿ ಸಾಂಸಾರಿಕ ಜೀವನವನ್ನು ಬಯಸುತ್ತಾನೆ. ವಿವಾಹದ ಅನಂತರ ಮನುಷ್ಯ ಬಯಸುವ ಇನ್ನೊಂದು ಆಶಯವೆಂದರೆ ಸಂತತಿ. ಅದಿಲ್ಲದೆ ದಾಂಪತ್ಯ ಜೀವನ ಅಪೂರ್ಣ. ಎಲ್ಲ ಯೋಗ್ಯತೆ ಪಡೆದಿದ್ದೂ ಸಂತತಿ ಪಡೆಯಲು ಸಾಧ್ಯವಾಗದಿದ್ದರೆ ಜ್ಯೋತಿಷಿಗಳು ನೀಡುವ ಅಭಿಪ್ರಾಯವೆಂದರೆ ಸರ್ಪಶಾಪ ಸಂತತಿಗೆ ಪ್ರತಿಬಂಧಕವಾದ ಸರ್ಪದೋಷ ಪರಿಹಾರದಿಂದ ಶುಭಸಂತತಿ, ಅದೆಷ್ಟೋ ಮಂದಿಗೆ ಎಷ್ಟು ದುಡಿದರೂ ಗಳಿಸುವುದು ಸಾಧ್ಯವಾಗದಿದ್ದರೆ ಅದಕ್ಕೂ ಸರ್ಪಶಾಪ ಕಾರಣವೆಂದು ಊಹಿಸಬಹುದು. ಆರೋಗ್ಯ ಪ್ರಾಪ್ತಿಗೂ ಸರ್ಪಾನುಗ್ರಹ ಕಾರಣ. ಹಾಗಾಗಿ ಆರೋಗ್ಯ, ಸಂತತಿ, ಸಂಪತ್ತಿಗೆ ಅಧಿದೇವತೆ ನಾಗದೇವರೆಂದು ಶಾಸ್ತ್ರ ಹೇಳುತ್ತದೆ.

ಕಾಲಿಲ್ಲದೆ ಭೂಮಿಯಲ್ಲಿ ತೆವಳಿಕೊಂಡು ಸಾಗುವ ಎಲ್ಲ ಸರೀಸೃಪಗಳು ಸರ್ಪಗಳೇ. ಆದರೆ ವಿಷವಿದ್ದು ಶಾಪಾನುಗ್ರಹ ಶಕ್ತಿಯುಳ್ಳ ಸರ್ಪನಿಗೆ ನಾಗ ಎಂದು ಹೆಸರು. ಹೆಡೆಯುಳ್ಳ ಈ ನಾಗನಿಗೆ ಪೂಜೆ ಸಲ್ಲುತ್ತದೆ. ಹೀಗೆ ಮನುಷ್ಯನಿಗೂ ನಾಗನಿಗೂ ಅನಾದಿ ಕಾಲದಿಂದಲೂ ಸಂಬಂಧವಿದೆ. ಅದ್ದರಿಂದ ಭಾರತದಲ್ಲಷ್ಟೇ ಅಲ್ಲದೇ ವಿದೇಶಗಳಲ್ಲಿಯೂ ನಾಗಾರಾಧನೆ ನಡೆಯುತ್ತದೆ. ಚೀನಾ, ಇರಾನ್, ಶ್ರೀಲಂಕಾ, ಸುಮೇಲಿಯಾ,

ಬ್ಯಾಬಿಲೋನಿಯಾ, ಗ್ರೀಕ್, ಈಜಿಪ್ಟ್ ರಾಷ್ಟ್ರಗಳಲ್ಲಿಯೂ ನಾಗಾರಾಧನೆ ನಡೆಯುತ್ತದೆ.

ಆರೋಗ್ಯ ದೇವತೆಯ ಕೈಯಲ್ಲಿ ಕೋಲಿನಲ್ಲಿ ಜೋಡಿ ನಾಗಗಳು ಸುತ್ತಿರುವುದು ವೈದ್ಯ ವಿಜ್ಞಾನದ ಸಂಕೇತವಾಗಿ ಇವತ್ತೂ ಕಾಣಬಹುದು. ಮಾನುವ ಜೀವನಕ್ಕೂ ನಾಗನಿಗೂ ಇರುವ ಸಂಬಂಧಕ್ಕೆ ಪುಷ್ಠಿ ನೀಡುವ ಅಂಶಗಳಿವು.

**ನಾಗಾರಾಧನೆ ಹಿಂದಿನ ಒಂದಿಷ್ಟು ಸೂಕ್ಷ್ಮ**

ನಾಗರ ಪಂಚಮಿ ಬಂದರೆ ಶ್ರಾವಣದ ಹಬ್ಬಗಳ ಮೆರವಣಿಗೆಗೆ ಹಸಿರು ನಿಶಾನೆ ತೋರಿದಂತೆ. ಒಡಹುಟ್ಟಿದವರು, ಹೆಣ್ಣು ಮಕ್ಕಳ ಹಬ್ಬ ಎಂಬ ಬಣ್ಣವೂ ಪಂಚಮಿಗಿದೆ. ನಾಗನ ಹಬ್ಬ ಮುದ್ದು ಮಕ್ಕಳಿಗೆ, ವಟುಗಳಿಗೆ ಬ್ರಹ್ಮಚಾರಿಗಳಿಗೆ ಬಹಳ ಮುಖ್ಯ, ಮಕ್ಕಳೆಂದರೆ ನಾಗಪ್ಪನಿಗೆ ಬಲು ಇಷ್ಟ. ಮಕ್ಕ ಳಿಗೂ ಅಳ್ಳಿಟ್ಟು-ತಂಬಿಟ್ಟು, ಜೋಕಾಲಿ ಜೀಕುವುದು ಅಷ್ಟೇ ಇಷ್ಟ. ಆದ್ದರಿಂದ ಮಕ್ಕಳಾಗದವರು ನಾಗನನ್ನು ಪೂಜಿಸುತ್ತಾರೆ. ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಘಾಟಿ ಸುಬ್ರಹ್ಮಣ್ಯಕ್ಕೆ ಹೋಗಿ ನಾಗಪೂಜೆ, ನಾಗಮಂಡಲ, ಆಶ್ಲೇಷ ಬಲಿ ಪೂಜೆ ಇತ್ಯಾದಿ ಸೇವೆಸಲ್ಲಿಸುತ್ತಾರೆ. ಹಾಲೆರೆದು ಹುತ್ತವನ್ನು ಪೂಜಿಸಿ ಪ್ರಸಾದವನ್ನು ಹಂಚಿಕೊಳ್ಳುತ್ತಾರೆ. ಕಲ್ಲಿನ ವಿಗ್ರಹಗಳಿಗೆ ಹಾಲೆರೆದು ಪ್ರಕೃತಿ ಪ್ರೇಮ ಮೆರೆಯುವವರೂ ಅಧಿಕ ಸಂಖ್ಯೆಯಲ್ಲಿ ದ್ದಾರೆನ್ನಿ.

ಭೌತ ವಿಜ್ಞಾನ ಹೇಳುವಂತೆ ಹುತ್ತಕ್ಕೆ ಹಸುವಿನ ಹಾಲೆರೆದು ಆ ಮಣ್ಣಿನ ಸ್ವೀಕಾರದಿಂದ ಸಂತಾನ ಪ್ರಾಪ್ತಿಯಾಗುವುದೆಂದು ನಂಬಿದ್ದಾರೆ. ಅದು ಮೌಢ್ಯವಲ್ಲಂ ಹುತ್ತದಲ್ಲಿ ಹಸಿವೆಯಿಂದ ಕಂಗೆಟ್ಟ ಹಾವುಗಳು ಚಲಿಸುವಾಗ ಅವುಗಳ ರಜಸ್ಸು ಮತ್ತು ತೇಜಸ್ಸು ಹುತ್ತದ ಪರಿಷ್ಕೃತ ಮಣ್ಣಿಗೆ ಅಂಟಿಕೊಂಡಿದ್ದು. ಅದರ ಮೇಲೆ ಗೋವಿನ ಹಾಲು ಬಿದ್ದಾಗ ಆರೋಗ್ಯಕ್ಕೆ ಹಿತವಾದ ವಿಶಿಷ್ಟ ಬಗೆಯ ವಾಯುವೊಂದು ಹೊರಹೊಮ್ಮುತ್ತದೆ. ಅದು ಕೆಲವು ಲೈಂಗಿಕ ದೋಷಗಳಿಗೆ ವಿಶಿಷ್ಟ ಪರಿಹಾರವಾಗುತ್ತದೆ ಎನ್ನಲಾಗಿದೆ.

ನಾಗನ ಬಗ್ಗೆ ಮನೋವಿಜ್ಞಾನ ಹೇಳುವಂತೆ, ಪುರಾಣಗಳಲ್ಲಿ ಬರುವ ಐದೇಳು ಹೆಡೆಗಳುಳ್ಳ ಶೇಷನೆಂದರೆ ಅದು ಮೆದುಳಿನ ಬಳ್ಳಿಗಳು. ಸೂಕ್ಷ್ಮನಾಳಗಳೇ ಅನಂತ ಫಣಗಳು, ಇವುಗಳ ಮೇಲೆ ನಲಿದು ನಿಯಂತ್ರಿಸಿ ಅವುಗಳಲ್ಲಿರುವ ವಿಷ ಆಕರ್ಷಣವೇ ಕಾಳಿಂಗ ಮರ್ದನ ಎಂದು ಕರೆಯಲಾಗುತ್ತದೆ. ಯೋಗ ವಿಜ್ಞಾನದ ಪ್ರಕಾರ ಮಂಡಲಗಳಲ್ಲಿ ಮಂಡಿತವಾಗುವ ನಾಗದೇವ, ಅದು ನರನಾಡಿ ಮಂಡಲಗಳಲ್ಲಿ ಅವಿತಿರುವ ಕುಂಡಲಿನಿ. ಅದು ಜಾಗೃತವಾಗಿ ಹೆಡೆ ಬಿಚ್ಚಿದಾಗಲೇ ಮನುಷ್ಯ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬಲ್ಲ. ಖಗೋಳ ವಿಜ್ಞಾನಿಗಳು ಹೇಳುತ್ತಾರೆ. ಗುರುತ್ವಾ ಕರ್ಷಣ ಶಕ್ತಿಯ ಜಾಲವನ್ನೇ ಪುರಾಣಿಕರು ಸಂಕರ್ಷಣನ ಹೆಡೆಗಳ ಮೂಲಕ ಚಿತ್ರಿಸಿದ್ದಾರೆ ಎಂದು.

ನಾಗಾರಾಧನೆಯ ಬಗ್ಗೆ ಆರೋಗ್ಯ ವಿಜ್ಞಾನ ಹೀಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಸಪ್ತಧಾತುಗಳ ಸ್ಥಿತಿಗತಿಗಳ ಮೇಲೆ ಅದ್ಭುತವಾದ ಕಾಯ, ಸಫಲತೆಯ ಸಂಕೇತವಿರಬೇಕು ಎಂದು. ಶ್ರಾವಣ ಮಾಸದಲ್ಲಿ ಫಸಲು ಬಿಡುವ ಸಂದರ್ಭ. ಇಲಿ ಕೀಟಗಳ ಬಾಧೆ ತಡೆಯಲು ಸರ್ಪಗಳ ಅನುಗ್ರಹವೇ ಬೇಕು. ಈ ಕಾರಣಕ್ಕಾಗಿ ಆ ಸಂದರ್ಭಗಳಲ್ಲಿ ಸರ್ಪಗಳಿಗೆ ಹಾಲಿನ ಉಪಚಾರ ಎಂದು ಕೃಷಿ ವಿಜ್ಞಾನ ಹೇಳುತ್ತದೆ.

ಸರ್ಪ ಮನ್ಮಥನ ಚಿಹ್ನೆ ಇದನ್ನು ಗೂಢವಾಗಿ ಯೋಚಿಸಿದಾಗ ನಮ್ಮ ಸಾಹಿತ್ಯದಲ್ಲಿ ಹಾಸುಹೊಕ್ಕಾದ ಲಾಂಛನವಾಗಿದೆ ಎಂದು ಹೇಳುತ್ತದೆ ರಾಮವಿಜ್ಞಾನ, ನಮ್ಮ ಜಾತಿಯೊಳಗಿರುವ ಬಾಂಧವ್ಯ ಪ್ರಜ್ಞೆ, ಮಾನವ ಜಾತಿ ಅನುಸರಿಸ ಬೇಕಾದದ್ದು ಸರ್ಪ ಸಂಸ್ಕಾರ ಮಾನವ ಸಂಸ್ಕೃತಿಗೆ ಬೇಕು ಎಂದು ಸಮಾಜ ವಿಜ್ಞಾನ ಹೇಳುತ್ತದೆ. ಅದಕ್ಕಾಗಿ ಅವುಗಳಿಗೆ ಈ ಬಗೆಯ ಗೌರವ ಎಂದು.

ವಿಷ್ಣುವು ಕ್ಷೀರ ಸಾಗರದಲ್ಲಿ ಹೋಗಿ ಹೋಗಿ ಸರ್ಪನ ಮೇಲೇಕೆ ಪವಡಿಸಿದ ಎಂಬುದಕ್ಕೆ ಹಾಸ್ಯ ವಿಜ್ಞಾನ ಹೇಳುವ ಕಾರಣ ಹೀಗಿದೆ. ನಿದ್ರಾದೇವಿ ತನ್ನನ್ನು (ವಿಷ್ಣುವನ್ನು) ಆಲಂಗಿಸಿದಾಗ ಲಕ್ಷ್ಮೀ ದೇವಿಯನ್ನು ಕಾಯಬೇಕಾದರೆ ಸರ್ಪಗಾವಲು ಬೇಕು. ಆದ್ದರಿಂದಲೇ ಲಕ್ಷ್ಮೀ ಇದ್ದಲ್ಲಿ ಸರ್ಪನ ಕಾವಲು.

ನಾಗರಾಜ ಕೇವಲ ಕಾಯುವ ದೇವತೆಯಲ್ಲ ಕಲಾರಸಿಕನಲ್ಲ ಕಾಯಿಲೆ ನಿವಾರಕನೂ ಹೌದು. ಆತ ಶಿವನ ತಲೆಯ ಮೇಲೆ ಹೂವಾಗಿ ಕಂಡರೆ ಗಣಪನ ಹೊಟ್ಟೆಯ ಮೇಲೆ ಹಗ್ಗವಾಗಿ ಕಾಣುತ್ತಾನೆ. ಸಮುದ್ರ ಮಂಥನ ಕಾಲಕ್ಕೆ ಕಡೆಯುವಾಗ ಹಗ್ಗವಾದರೆ ಮತ್ತೊಂದೆಡೆ ಸರ್ಪಾಸ್ತ್ರನಾಗುತ್ತಾನೆ. ಕಣ್ಣುಗಳೇ ಕಿವಿಯಾದ, ಹೊಟ್ಟೆಯೇ ಕಾಲಾಗಿರುವ ಈ ನಾಗರಾಜ, ನವ ನಾಗರಿಕ ಕಣ್ಣು, ಕಿವಿ ತೆರೆಯಿಸಲಿ, ಹಾಲಿನ ಕಡಲಿನ ನಡುವೆ ಒಡಲಲ್ಲಿ ಒಡೆಯನನ್ನು ಹೊತ್ತು, ಹೆಡೆ ಬಿಡಿಸಿ, ಕೊಡೆಯಾಗಿ ಈ ಹಾವು ನಮ್ಮ ಜೀವನವನ್ನು ಹಾಲಾಗಿಸಲಿ, ಹಾಯಾಗಿಸಲಿ.



ವಂದೇಪದ್ಮಕರಾಂ ಪ್ರಸನ್ನವದನಾಂ ಸೌಭಾಗ್ಯದಾಂ ಭಾಗ್ಯದಾಂ
ಹಸ್ತಾಭ್ಯಾ ಮಭಯಪ್ರದಾಂ ಮಣಿಗಣೈರ್ನಾನಾವಿಧೈರ್ಭೂಶಿತಾಮ್,
ಭಕ್ತಾಭೀಷ್ಟಫಲಪ್ರದಾಂ ಹರಿ ಹರಬ್ರಹ್ಮಾದಿಭಿ ಸ್ಸೇವಿತಾಂ
ಪಾರ್ಶ್ವೇ ಪಂಕಜ ಶಂಬ ಪದ್ಮನಿಧಿಭಿರ್ಯುಕ್ತಾಂ ಸದಾ ಶಕ್ತಿಭಿಃ,

ಸರಸಿಜನಯನೇ ಸರೋಜಹಸ್ತೇ
ಧವಳತರಾಂಶುಕಗಂಧಮಾಲ್ಯ ಶೋಭೇ,
ಭಗವತಿ ಹರಿವಲ್ಲಭೇ ಮನೋಜ್ಞೇ
ತ್ರಿಭುವನಭೂತಿಕರಿ ಪ್ರಸೀದ ಮಹ್ಯಾಮ್.

# ಲಾಕ್‌ಡೌನ್ ವಿರಾಮದ ನಂತರ ತಿರುಮಲೆಯಲ್ಲಿ ಪ್ರಾರಂಭವಾದ ಸ್ವಾಮಿಯವರ ದರ್ಶನದ ದೃಶ್ಯಮಾಲಿಕೆ



































ತಿರುಮಲೆಯಲ್ಲಿ ಸ್ವಾಮಿಯವರ ಆಲಯದಲ್ಲಿ ಶಾಸ್ತ್ರೋಕ್ತವಾಗಿ ಆಣಿವರ ಆಸ್ಥಾನ ನಡೆಯಿತು. ಶ್ರೀ ಶ್ರೀ ಶ್ರೀ ದೊಡ್ಡ ಜೀಯರ್ ಅವರು , ಶ್ರೀ ಶ್ರೀ ಶ್ರೀ ಚಿನಜೀಯರ್ ಸ್ವಾಮಿಗಳು, ತಿ.ತಿ.ದೇ. ಧರ್ಮಕರ್ತರ ಮಂಡಲಿಯ ಅಧ್ಯಕ್ಷರಾದ ಶ್ರೀ ವೈ.ವಿ.ಸುಬ್ಬಾರೆಡ್ಡಿ ದಂಪತಿಗಳು, ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಧರ್ಮಾರೆಡ್ಡಿ ದಂಪತಿಗಳು, ಹಾಗೂ ಉನ್ನತಾಧಿಕಾರಿಗಳು ಪಾಲ್ಗೊಂಡರು.







ಕರೋನಾವೈರಸ್ ನಾಶವಾಗಿ ಸಮಸ್ತ ಪ್ರಪಂಚವೂ ಆಯುರಾರೋಗ್ಯ ವಾಗಿರಬೇಕೆಂದು ಪ್ರಾರ್ಥಿಸುತ್ತಾ ತಿ.ತಿ.ದೇ. ನಿರ್ವಹಿಸಿದ ರಾಹುಗ್ರಹ ಚೂಡಾಮಣಿ ಸೂರ್ಯಗ್ರಹಣ ಜಪಯಜ್ಞ.

# ರಾಷ್ಟ್ರ ನಿರ್ಮಾಣ ಹರಿದಾಸರು

– ಡಾ॥ ವಾಸುದೇವ ಅಗ್ನಿಹೋತ್ರಿ

ಈ ದೇಶದಲ್ಲಿ ದೇವಾಲಯ, ವಿದ್ಯಾಲಯ, ನ್ಯಾಯಾಲಯಗಳು ಒಂದೇ ಆಗಿದ್ದವು. ಈ ದೇಶದ ೬ ಲಕ್ಷ ಗ್ರಾಮಗಳಲ್ಲಿರುವ ಹನುಮಾನ ದೇವಾಲಯವೇ ಬಹುತೇಕ ಆ ಗ್ರಾಮದ ಪ್ರಮುಖ ಶ್ರದ್ಧಾ ಕೇಂದ್ರವಾಗಿತ್ತು. ಹೀಗಾಗಿ ಇದರಂತೆ ವಿಶಾಲ ಕರ್ನಾಟಕದ ಪ್ರಥಮ ಏಕೈಕ ಚಕ್ರವರ್ತಿ ಶ್ರೀ ಕೃಷ್ಣ ದೇವರಾಯನಿಗೆ ಹಿಂದೂ ರಾಜ್ಯ ರಮಾರಮಣ ಎಂದು ಕರೆದರು. ಅವನ ಧರ್ಮಗುರುಗಳಾದ ಶ್ರೀ ವ್ಯಾಸರಾಯ ಸ್ವಾಮಿಗಳು ೬೦೦ ಹನುಮಾನ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಉಲ್ಲೇಖವನ್ನು ಇಲ್ಲಿ ಗಮನಿಸಬಹುದು. ಇದೇ ಸಂದರ್ಭದಲ್ಲಿ ಮುತ್ತು ರತ್ನಗಳನ್ನು ಬೀದಿ, ಬೀದಿಗಳಲ್ಲಿ ಅಳೆದುಮಾರಿದ ಶ್ರೀಮಂತ ಸಂಸ್ಕೃತಿ ಇತ್ತು. ಹೀಗಾಗಿ ಈ ಸಾಮ್ರಾಜ್ಯದ ಪತನವೇ ತಾಳಿಕೋಟಿ ಯುದ್ಧ (೧೫೬೫) ಇದರ ಪೂರ್ವದಲ್ಲಿಯೇ ಶ್ರೀಪಾದರಾಜರು ಅವರ ಶಿಷ್ಯರಾದ ವ್ಯಾಸರಾಜರು ಈ ಧರ್ಮ ಸಂಸ್ಥಾನದ ಗುರುಗಳಾಗಿದ್ದರು. ವ್ಯಾಸರಾಯರು ಪೂಜಾ ಕಾಲದಲ್ಲಿ ಕನ್ನಡ ಕೀರ್ತನೆಗಳನ್ನೇ ತಮ್ಮ ಗುರುಗಳಾದ ಶ್ರೀಪಾದ ರಾಜರಂತೆ ರಚಿಸಿ ಹಾಡಿದರು. ಅವರು ಕನಕ ಪುರಂದರಂತಹ ಶಿಷ್ಯದ್ವಯರನ್ನು ರಾಷ್ಟ್ರ ನಿರ್ಮಾಣಕ್ಕೆ, ರಾಷ್ಟ್ರದ ಸಾಂಸ್ಕೃತಿಕ ರಕ್ಷಣೆಗೆ, ರಾಷ್ಟ್ರದ ತತ್ಕಾಲೀನ ಪೋಷಣೆಗೆ ಸಿದ್ಧ ಪಡಿಸಿದರು. ಈ ಇಬ್ಬರು ಹರಿದಾಸರು ಸಮಾಜೋ, ಧಾರ್ಮಿಕ ರಾಯಭಾರಿಗಳಂತೆ ಸುಮಾರು ೧ ಶತಮಾನಗಳ ಕಾಲ ೧೫೧೦ ರಿಂದ ೧೫೯೦ ರ ವರೆಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿದರು. ಇವರಿಬ್ಬರು ಶ್ರೀಮಂತರು, ಸಬಲರು, ಸುಶಿಕ್ಷಿತರು, ಮತ್ತು ಸುಸಂತ್ಕೃತರು ಮುಂದೆ ಜ್ಞಾನ, ಭಕ್ತಿ ವೈರಾಗ್ಯಗಳ ಸಾಧನೆಯಿಂದ ಸಾಮಾಜಿಕ ಕಾರ್ಯದಲ್ಲಿ ತೊಡಗಿದರು. ವ್ಯಕ್ತಿ ತನ್ನ ಸ್ವರೂಪ, ಪ್ರವೃತ್ತಿ ಮತ್ತು ಯೋಗ್ಯತೆಗೆ ಅನುಸಾರವಾಗಿ ಸಾಧಾನಾ ಮಾರ್ಗದಲ್ಲಿ ನಡೆದರೆ ಅವನಿಗೆ ಇಹಲೋಕದಲ್ಲಿ ಸುಖ ಪರಲೋಕದಲ್ಲಿ ಮುಕ್ತಿ ಸಿಗುವುದು ಖಂಡಿತ ಎಂದು ಹೇಳುತ್ತಲೇ ಅವರು ರಾಷ್ಟ್ರದ ಏಕತೆಗಾಗಿ ಬೇಕಾದ ತಾಳ್ಮೆ, ಸಂಘಟನೆ, ಸಹಬಾಳ್ವೆ, ಮತ್ತು ಸಾತ್ವಿಕತೆಯನ್ನು ತಮ್ಮ ಕೀರ್ತನೆಗಳ ಮುಖಾಂತರ ಬಿತ್ತಿ ತತ್ಕಾಲಿನ ಸಮಾಜದ, ತನ್ಮೂಲಕ ರಾಷ್ಟ್ರದ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

೧೩೪೧ ರಲ್ಲಿ ದಕ್ಷಿಣ ಭಾರತದ ಮೊದಲ ಮುಸ್ಲಿಂ ಸಾಮ್ರಾಜ್ಯವಾದ ಬಹಮನಿ ಸಾಮ್ರಾಜ್ಯ ಸ್ಥಾಪನೆಯಾಗುವ ಸಂದರ್ಭದಲ್ಲಿಯೇ ನರಹರಿ ತೀರ್ಥರು ಆಗಿ ಹೋದರು. "ರಾಜ" ಎಂಬ ಶಬ್ದ ಮುಂಬರುವ ರಾಷ್ಟ್ರ ನಿರ್ಮಾಣದ ಆಧ್ಯಾತ್ಮ ತಂಡವೊಂದನ್ನು ಸೈನ್ಯ ರೂಪದಲ್ಲಿ ನಿರ್ಮಿಸಲು ಹೊರಟವರು ಶ್ರೀ ಪಾದರಾಜರು, ವ್ಯಾಸರಾಜರು ಹಾಗೂ ಮುಂದೆ ಗುರು ರಾಜರು ಎಂದರೆ ಶ್ರೀ ರಾಘವೇಂದ್ರ ಪ್ರಭುಗಳು. ಈ ಮೂರು ಜನ ಸಾತ್ವಿಕ ಸಾಮ್ರಾಜ್ಯದ ಸಾಮ್ರಾಟರು , ರಾಷ್ಟ್ರನಿರ್ಮಾಣದಲ್ಲಿ ತೋರಿಸಿದ ದೂರದೃಷ್ಟಿಯ ಫಲಶೃತಿಯೇ ದಾಸಕೂಟ. ಈ ಮೂವರು ದೂರದೃಷ್ಟಿಯ ಮಹಾನ್ ಜ್ಞಾನಸಾಮ್ರಾಜ್ಯದ ಆಧ್ಯಾತ್ಮ ನೇತಾರರು. ಆದ್ದರಿಂದಲೇ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ರಾಜಾಧಿರಾಜ ಗುರುಸಾರ್ವಭೌಮ ಎಂದು ಕರೆಯುವುದು. ಇವರೆಲ್ಲರ ಆರಾಧ್ಯ ದೈವ ಮೂಲ ರಾಮ ಹಾಗೂ ದಿಗ್ವಿಜಯ ರಾಮ. ಇವೆಲ್ಲವೂ ಸುಮ್ಮನೇ ಹೇಳುವ ಪರವಶದ ಮಾತುಗಳಲ್ಲ. ಹರಿದಾಸರ ದ್ವಿತೀಯ ಘಟ್ಟದ ನೇತಾರರಾದ ವಿಜಯದಾಸರ ಶಿಷ್ಯ ಪರಂಪರೆಯ ಪೋಷಕರು ಮಂತ್ರಾ ಲಯದ ಪ್ರಭುಗಳೆಂಬುದು ಐತಿಹಾಸಿಕ ಸತ್ಯ. ಹೀಗಾಗಿ, ಹೆಚ್ಚು ಕಡಿಮೆ ೧೯೪೮ ರಲ್ಲಿ ನಡೆದ ರಜಾಕಾರ ಆಕ್ರಮಣದವರೆಗೆ ವಿಶೇಷವಾಗಿ ಇಲ್ಲಿ ಉಲ್ಲೇಖಿಸುವುದಾದರೆ ಪಂಡಿತ ತಾರಾನಾಥರ ಗಡಿಪಾರ್ ಪ್ರಕರಣ, ರಾಘವಾಚಾರ್ಯರ ರಾಷ್ಟ್ರ ಭಕ್ತಿ ಕುರಿತ ಕೀರ್ತನೆಗಳು ಸ್ವಾಮಿ ರಮಾನಂದ ತೀರ್ಥರ ಚಪಾತಿ





ಹಾಗೂ ಕಮಲದ ಹೂವಿನ ಗೌಪ್ಯ ಸಂಘಟನೆಯ ಸಂಕೇತಗಳು ಇತ್ಯಾದಿ ಎಲ್ಲ ತತ್ಕಾಲೀನ ಹರಿದಾಸರ ಕೀರ್ತನೆಗಳಲ್ಲಿ ಕಾಣುತ್ತವೆ. ಇನ್ನೂ ಕೆಲವು ಹಿರಿಯ ಹರಿದಾಸರು ವಿಶೇಷವಾಗಿ ತುಂಗಾನದಿಯ ಆಚೆ ಬಳ್ಳಾರಿಯ ವರೆಗೆ ನೈಜಾಮನ ಪ್ರಾಂತ್ಯವಲ್ಲದ ಪ್ರದೇಶದಲ್ಲಿ ಇದ್ದು, ರಾಯ ಚೂರು, ಗುಲಬರ್ಗಾ, ಬೀದರವರೆಗಿನ ಮೂರು ಜಿಲ್ಲೆಯ ಪ್ರದೇಶದ ಜನರನ್ನು ಎಚ್ಚರಿಸಿದರು. ಪ್ರೇರೇಪಿಸಿದರು, ಸಂಘಟಿಸಿದರು ಮತ್ತು ರಕ್ಷಿಸಿದರು. ಕೃಷ್ಣಾ ಮತ್ತು ತುಂಗಾ ನದಿಯ ಗಡಿಯಲ್ಲಿನ ಭಕ್ತಿಯ ಆಂದೋಲನವು ಸಾತ್ವಿಕ ಶಕ್ತಿಯ ಆಂದೋಲನವಾಯಿತು. ಆಯಾ ಪ್ರದೇಶದ ಎಲ್ಲ ಗುಡಿ ಗೋಪುರಗಳನ್ನು ಸಂಚರಿಸುವ ಹರಿದಾಸರು ತಮ್ಮ ಕೀರ್ತನೆ ಗಳಲ್ಲಿ ಕೆಡುತ್ತಿರುವ ಕಾಲವನ್ನು ಹೇಳುತ್ತಿದ್ದರು. ಅದನ್ನು ಪುನಃ ಪುನಃ ಕಲಿಯುಗವೆಂದು ಕರೆದು ಎಚ್ಚರಿಸುತ್ತಿದ್ದರು. ಕಲಿಯ ವಾಸದ ಸ್ಥಾನಗಳದ ಇಸ್ಪೇಟ್, ಗಾಂಜಾ (ಗುಡು ಗುಡಿ) ಸೇದು ತಾರ ವೇಶ್ಯಾವಾಟಿಕೆ ಮೊದಲಾದ ದುಶ್ಚಟಗಳಿಗೆ ಬಲಿಯಾಗು ತ್ತಿರುವ ಜನರ ಬಗ್ಗೆ ವ್ಯಂಗ್ಯ ವಿಡಂಬನೆಗಳಿಂದ ಎಚ್ಚರಿಸುತ್ತಾ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಇವರೇ ಆಗಿನ ಕಾಲದ ರಾಷ್ಟ್ರ ನಿರ್ಮಾಣದ ರಾಯಭಾರಿಗಳು.

ಜಾಣೆ ನಂಬಿದೆ ಇಸ್ಪೀಟ್ ರಾಣಿ ನೀನೊಲಿದೆನ್ನ
ಪಾಣಿಯೊಳು ಬಂದು ಕಾಣಿಸಮ್ಮಾ
ವಾಣಿ ಶ್ರೀಲಕುಮೀಶ ರುದ್ರಾಣಿಯರಿಗಿಂತ
ಕ್ಷೋಣಿಯೊಳಗೆ ಬಹುಮಾನಿತೆ ನೀನಮ್ಮಾ

ಸಮಾಜದಲ್ಲಿ ಇಸ್ಪೀಟ್ ಪರೇಲ್‌ನಂತಹ (ತ್ರೀ ಕಾರ್ಡ್ಸ್) ದುಶ್ಚಟವನ್ನು ಕುರಿತು ಈ ಮೇಲಿನ ಕೀರ್ತನೆಯಲ್ಲಿ ಶ್ಯಾಮಸುಂದರ ವಿಠಲದಾಸರು ಅತ್ಯಂತ ಮಾರ್ಮಿಕವಾಗಿ ಚಿತ್ರಿ ಸಿದ್ದಾರೆ. ಮೊದಲನೇಯ ನುಡಿಯಲ್ಲಿ ಪಿತ್ರಾರ್ಜಿತ ಆಸ್ತಿಯನ್ನು ಕಳೆದುಕೊಂಡು ದನ, ಕರು ಹೊಲ ಮನೆಗಳನ್ನು ಮಾರಿ ಸಮಾಜದಲ್ಲಿ ಹಾಸ್ಯಾಸ್ಪದವಾಗಿ ಹೆಂಡತಿ ಮಕ್ಕಳ ಕೈಗೆ ಕೊನೆಗೆ ಪರಟೆ ಕೊಟ್ಟೆ ಎನ್ನುವಲ್ಲಿ ಸಮಾಜದ ನೈಜಸ್ಥಿತಿ ತಿಳಿದು ಬರುತ್ತದೆ. ಕೊನೆಯ ನುಡಿಯಲ್ಲಿ ನಿರ್ಲಜ್ಜನಾಗಿ

ಅಕ್ಕರದಲಿ ಎರಡೆಕ್ಕದೊಳು ಬಂದು
ಪಕ್ಕನೆ ನೀ ಎನ್ನ ಕೈಯೊಳು ಖರೆ
ಮುಕ್ಕಣ್ಣ ಸಖ ತನ್ನ ಬೊಕ್ಕಸದೊಳಗಿನ
ರೊಕ್ಕ ಹಾಕಲು ಅವನ ಲೆಕ್ಕಿಸೆನಮ್ಮಾ

ಈ ನುಡಿಯಲ್ಲಿ ಎಕ್ಕ ರೂಪದಲ್ಲಿ ಲಕ್ಷ್ಮೀಗೆ ಬರಲು ಕೇಳಿ ತಮ್ಮ ನಿಜವಾದ ಆಧ್ಯಾತ್ಮಿಕ ಪುಣ್ಯವನ್ನು ಸಾಧಿಸಲು ಎಂದರೆ ಮುಕ್ಕಣ್ಣ ಸಖನ ಬೊಕ್ಕಸದೊಳಗೆ ರೊಕ್ಕ ಹಾಕಲು ಕೇಳುತ್ತಾರೆ. ನರಬಲಿ ಕವನವನ್ನು ಬರೆದು ಬ್ರಿಟೀಷರ ಕಾಲದಲ್ಲಿ ಜೈಲಿಗೆ ಹೋಗಿಬಂದ ವರಕವಿ ದ.ರಾ ಬೇಂದ್ರೆಯವರನ್ನು ತಮ್ಮ ಗ್ರಾಮಕ್ಕೆ ಕರೆಯಿಸಿ ಕಾರ್ಯಕ್ರಮ ಮಾಡಿದ ಹಾಗೂ ಬೇಂದ್ರೆಯವರ ಮೇಲೆ ಕೀರ್ತನೆ ಮಾಡುವುದರ ಮುಖಾಂತರ ಪರೋಕ್ಷವಾಗಿ ಬ್ರಿಟೀಷರ ವಿರುದ್ಧ ರಾಷ್ಟ್ರನಿರ್ಮಾಣದ ಸಾಹಸೀ ಹರಿದಾಸರೇ ಶ್ಯಾಮಸುಂದರ ವಿಠಲದಾಸರು. ಒಟ್ಟಿನಲ್ಲಿ ಸ್ವಸ್ಥ ಸಮಾಜವೇ ಹರಿದಾಸರ ಗುರಿ. ಕೌಟಂಬಿಕ ವ್ಯವಸ್ಥೆ ಕೆಡದಂತೆ ರಾಷ್ಟ್ರ ನಿರ್ಮಾಣ ಮಾಡುವ ಭಕ್ತ ಕವಿಗಳು ಹರಿದಾಸರು. ನೈಜಾಂನ ಆಳ್ವಿಕೆಯಲ್ಲಿ ಇಂತಹ ಹರಿದಾಸರು ಇರದೆ ಇದ್ದರೆ ಎಲ್ಲ ದೇವಾಲಯಗಳು ದುಶ್ಚಟಗಳ ತಾಣ ಗಳಾಗುತ್ತಿದ್ದವು.

ವಿಶೇಷವಾಗಿ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಪ್ರಾಣೇಶದಾಸರು, ಶ್ಯಾಮಸುಂದರ ವಿಠಲ ದಾಸರು, ಮೊದಲಾದವರು ಸುಮಾರು ೨೦೦ ವರ್ಷದ ಈ ಅವಧಿಯಲ್ಲಿ ಈ ಭಾಗದ ಎಂದರೆ ಅವಿಭಾಜಿತ ರಾಯಚೂರು ಜಿಲ್ಲೆಯಲ್ಲಿ ಸಾಕಷ್ಟು ಸಾತ್ವಿಕ ಪ್ರೇರಣೆ ನೀಡಿದರು. ಗೋವು. ಗೀತೆ, ಗಂಗೆ, ಗಾಯತ್ರಿ ಮತ್ತು ಗುರುವಿನ ಬಗ್ಗೆ ಇರುವ ಜನರ ಶ್ರದ್ಧೆ ಹಾಗೂ ತತ್ಸಂಬಂಧ ಇರುವ ಶ್ರದ್ಧಾ ಕೇಂದ್ರಗಳ ರಕ್ಷಣೆ ಮತ್ತು ಪೋಷಣೆಯೇ ರಾಷ್ಟ್ರನಿರ್ಮಾಣ ಎಂದು ಸಾರಿ ಹೇಳಿ ದರು. ಇವೆಲ್ಲವುಗಳು ಅಂದರೆ ಈ ಪಂಚ "ಗ" ಕಾರ ಗಳು ಗೋವಿಂದನ ಸೇವೆಗಾಗಿ ಎಂದರೆ , ಜನತೆ ಜನಾರ್ಧನ ಎಂಬ ಸಮೀಕರಣವನ್ನು ಪ್ರತಿಕೂಲ ಪರಿಸ್ಥಿತಿಯಲ್ಲಿ ಹಾಕಿ ಕೊಂಡು ತಮ್ಮ ಮುಂದಿರುವ ಜ್ವಲಂತ ಸಮಸ್ಯೆಯಾದ ಸಾಮಾಜಿಕ ವಿಘ ಟನೆಯನ್ನು ತೊಲಗಿಸಿದರು. ವಿಶೇಷವಾಗಿ ಜಗನ್ನಾಥದಾಸರು ಈ ಕೆಳಗಿನ ಷಟ್ಪದಿಯಲ್ಲಿ "ವಸುದೈವ ಕುಟುಂಬ ಕಮ್" ಎಂಬ ವಿಶಾಲ ಹೃದಯದ ದೂರದೃಷ್ಟಿಕೋನದ ಭ್ರಾತೃತ್ವವನ್ನು ವಿವರಿಸಿದ್ದಾರೆ.

ಸರ್ವದೇಶವು ಪುಣ್ಯದೇಶವು
ಸರ್ವಕಾಲವು ಪರ್ವಕಾಲವು
ಸರ್ವಜೀವರು ದಾನಪಾತ್ರರು
ಮೂರು ಲೋಕದೊಳು
ಸರ್ವಮಾತುಗಳೆಲ್ಲ ಮಂತ್ರವು
ಸರ್ವಕೆಲಸಗಳೆಲ್ಲ ಪೂಜೆಯು
ಶರ್ವವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ

ಶ್ರೀಮನ್‌ನಾರಾಯಣನ ಧ್ಯಾನ ಉಳ್ಳವರಿಗೆ ಕಾಲ ದೇಶಾತೀತವಾದ ಜ್ಞಾನ ಬರುತ್ತದೆ ಎಂದು ಪ್ರತಿಕೂಲ ಸಮಾಜೋ ಧಾರ್ಮಿಕ ವಾತಾವರಣದಲ್ಲಿ ಪ್ರತಿಪಾದಿಸಿದರು.

ಹರಿದಾಸರು ಅನುಸರಿಸಿದ ಮಾರ್ಗವೆಂದರೆ ಕೀರ್ತನೆ, ಹರಿಕಥೆ, ಜಾತ್ರೆ, ನವರಾತ್ರಿಯಲ್ಲಿ ಭಜನೆ ಗುರುವಾರದ ಭಜನೆ, ಶ್ರಾವಣಮಾಸದ ಉತ್ಸವಗಳನ್ನು ನವರಾತ್ರಿಯಲ್ಲಿ ಶ್ರೀನಿವಾಸ ಕಲ್ಯಾಣ, ಧಾತ್ರಿ ಹೋಮ, ಕೋಜಾಗರ ಹುಣ್ಣಿಮೆ, ವಸಂತ ಪೂಜೆ, ಭಾಗೀರಥಿ ಜಯಂತಿ, ಮೊದಲಾದ ಪರಿಸರ ಸ್ನೇಹಿ ಗ್ರಾಮೀಣ ಗಡಿ ಭಾಗವನ್ನು ಅಕ್ಷುಣ್ಯವಾಗಿ ಉಳಿಸಲು ದುಡಿದರು. ಇದೆಲ್ಲವೂ ರಾಷ್ಟ್ರನಿರ್ಮಾಣದ ಎಂದರೆ ಸಾಮಾಜಿಕ ಸಂಘಟನೆ ಗಾಗಿ ಪುನರ್ ಸ್ಥಾಪಿಸಿ ಆಚರಣೆಯಲ್ಲಿ ತಂದು ಜನ ಸಾಮಾ ನ್ಯರು ಅನುಸರಿಸುವಂತೆ ಮಾಡಿದ ರಾಷ್ಟ್ರದ ಹಬ್ಬ ಹರಿದಿನಗಳು. ಇವೆಲ್ಲದರ ಉಲ್ಲೇಖ ರಾಮಾಯಣ ಭಾರತದಂತಹ ಗ್ರಂಥ ಗಳಲ್ಲಿ ಇರುವ ಪ್ರಮಾಣಗಳನ್ನು ಬಳಸಿದರು. ಅವರು ಮೇಲಿಂದ

ಮೇಲೆ ತಿರುಪತಿ, ಉಡುಪಿ, ಪಂಢರಪುರ, ಮಂತ್ರಾ ಲಯ ಅಹೋಬಲ, ಮೊದಲಾದ ಯಾತ್ರೆಗಳನ್ನು ಭಕ್ತ ಜನ ರೊಂದಿಗೆ ಮಾಡುತ್ತಿದ್ದರು. ಅವರ ಇನ್ನೊಂದು ಪ್ರಮುಖ ಸ್ಥಳೀಯ ಸಂಘಟನೆ ಎಂದರೆ ರಾಯಚೂರು ಜಿಲ್ಲೆಯಲ್ಲಿರುವ ಪ್ರಮುಖ ಶ್ರದ್ಧಾ ಕೇಂದ್ರಗಳಾದ ಮಾನವಿ ಹತ್ತಿರದ ಕಲ್ಲೂರು, ದೇವದುರ್ಗ ಹತ್ತಿರ ಕೊಪ್ಪರ ಅದರಂತೆ, ಹನುಮಸಾಗರ, ಗೋರೆಬಾಳ್ ಹೀಗೆ ಸ್ಥಳೀಯ ಜಾಗೃತ ಕೇಂದ್ರಗಳನ್ನು ವಿಶೇಷವಾಗಿ ರಜಾ ಕಾರರಿಂದ ಬಹು ಪೀಡಿತ ಪ್ರದೇಶವಾದ ಮಾನ್ವಿ ದೇವದುರ್ಗ, ರಾಯಚೂರು,ಲಿಂಗಸೂರು, ಕುಷ್ಟಗಿ, ಕುಕನೂರು, ಕನಕಗಿರಿ, ಯಲಬುರ್ಗಾ, ಮೊದಲಾದ ಪ್ರದೇಶಗಳಲ್ಲಿ ತಮ್ಮ ವಿಶೇಷ ಭಕ್ತಿ ಕೇಂದ್ರಗಳನ್ನು ಸ್ಥಾಪಿಸಿ ಜನರನ್ನು ಸಂಘಟಿಸಿ ದರು. ಈ ಎಲ್ಲ ಸ್ಥಳಗಳಲ್ಲಿ ಜನರಿಗಿರುವ ಶ್ರದ್ಧೆಯನ್ನು ಗಟ್ಟಿಗೊಳಿಸಿದರು. ಜೊತೆ ಯಲ್ಲಿ ಆಯಾ ವಿಶೇಷ ಸಂದರ್ಭಗಳಲ್ಲಿ ಬಬ್ರುವಾಹನ, ಅಭಿ ಮನ್ಯು, ದ್ರೌಪದಿ, ಧೃವ, ಪ್ರಹ್ಲಾದ ಮೊದಲಾದ ವೀರಭಕ್ತರ ಹರಿಕಥೆಗಳನ್ನು ಹೇಳಿ ಜನರ ಮನಸ್ಸು ಧೃತಿಗೆಡದಂತೆ ಕಾಪಾ ಡಿದರು.

ರಾಷ್ಟ್ರ ನಿರ್ಮಾಣ, ರಾಷ್ಟ್ರಾವಲೋಕನ, ರಾಷ್ಟ್ರೀಯತೆ, ರಾಷ್ಟ್ರಾಯ ಸ್ವಾಹಾಃ, ರಾಷ್ಟ್ರೀಯ ಇದನ್ನಮಮ  ಈ ಎಲ್ಲ ಶಬ್ದಗಳನ್ನು ಹರಿದಾಸರು ಕೇಳಿದ್ದರು.  ಹಲವಾರು ರಾಷ್ಟ್ರೀಯ ಚಳುವಳಿಗಳಲ್ಲಿ ತಮ್ಮ ಪೂರ್ವಾಶ್ರಮದಲ್ಲಿ (ಆರ್ಯ ಸಮಾಜ, ಹಿಂದೂ ಮಹಾ ಸಭಾ ಇತ್ಯಾದಿ) ಭಾಗವಹಿಸಿದ್ದರು. ರಾಷ್ಟ್ರ ಧರ್ಮ, ಕಾಲದೇಶ ಮೊದಲಾದ ಸರ್ವೇಸಾಮಾನ್ಯ ವಿಚಾರ ಗಳನ್ನು ಹರಿದಾಸರಿಗೆ ತಿಳಿದಿತ್ತು. ಈ ಪ್ರಬಂಧದ ಪ್ರಥಮ ಹಂತ ದಲ್ಲಿ ಹೇಳುವುದೇನೆಂದರೆ, "ರಾಮನೇ ರಾಷ್ಟ್ರ  ರಾಷ್ಟ್ರವೇ ರಾಮ," ಎಂಬ ಕಲ್ಪನೆಯು ರಾಮಾಯಣದಲ್ಲಿ  ಓದಿದಂತೆ ರಾಷ್ಟ್ರ ಒಂದು ಮಾತೃ ಸ್ವರೂಪಿ ಎಂಬ ಕಲ್ಪನೆ ದಾಸರಿಗಿತ್ತು. ರಾಷ್ಟ್ರದ ನಿರ್ಮಾಣ ವೃದ್ಧಿ "ಅಭಿವೃದ್ಧಿ" ವಿಕಾಸ - ಹೀಗೆಲ್ಲ ಯೋಜಿಸ ಬಹುದು.

ಹರಿದಾಸರಾಗಲೀ ಅಥವಾ ಯಾವುದೇ ಭಕ್ತನಾಗಲೀ ರಾಷ್ಟ್ರದ ನಿರ್ಮಾಣದಲ್ಲಿ ಹೇಗೆ ಪಾಲ್ಗೊಳ್ಳಬೇಕೆಂಬುದು ಸಹಸ್ರಾರು ವರ್ಷಗಳ ರಾಷ್ಟ್ರೀಯ ಅವಲೋಕನದಿಂದ ತಿಳಿದು ಬರುತ್ತದೆ.

ರಾಷ್ಟ್ರವೇಂದರೆ ಕಲ್ಲು "ಮಣ್ಣು ಅಲ್ಲ" ಆದರೆ ಅದನ್ನು ಬಿಡುವಂತೆಯೂ ಇಲ್ಲ ನಿಜವಾದ ಅರ್ಥದಲ್ಲಿ ರಾಷ್ಟ್ರವೆಂದರೆ ಪ್ರಜೆಗಳು. ಇದು ಜಗತ್ತು ಕಂಡ ಸತ್ಯ. ಎಂದರೆ ಜನರೇ ಜನಾರ್ಧನ. ಇದನ್ನು ವಾಯು ಜೀವೋತ್ತಮತ್ವದ ಅರ್ಥ ದಲ್ಲಿಯೂ ವಿಸ್ತರಿಸಬಹುದು. ಹರಿದಾಸರು ಬರುವುದಕ್ಕಿಂತ ಮುಂಚೆ ಇರುವ ಜನ ಜೀವನ ಈ ದೇಶದ ಸಂಸ್ಕೃತಿ, ಕಲೆ ಮತ್ತು ಕಲೋಪಾಸನೆಗೂ ಹಾಗೂ ಅವರ ಅವಧಿಯಲ್ಲಾದ ಹೊಸ ಜೀವನ ಮತ್ತು ಕಲಾಪದ್ಧತಿಗಳ ಆವಿಷ್ಕಾರ ಅಳವಡಿಕೆ ಮತ್ತು ದಾಖಲೆಯೇ ರಾಷ್ಟ್ರನಿರ್ಮಾಣ ಎಂದು ಬೇರೆ ಹೇಳ ಬೇಕಾಗಿಲ್ಲ. ಹರಿದಾಸರು ರಾಷ್ಟ್ರನಿರ್ಮಾಣದಲ್ಲಿ ಈ ಕೆಳಗಿನ ಕೆಲವು ಪ್ರಮುಖ ವಿಷಯಗಳನ್ನು ಮೇಲಿಂದ ಮೇಲೆ ಹೇಳಿ - ನಿರ್ವಹಿಸಿ ರಾಷ್ಟ್ರ ನಿರ್ಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡರು. ಏಕೆಂದರೆ  ಅವರೇ ಹೇಳುವಂತೆ ಅವರು ಭಗ ವಂತನನ್ನು ನೋಡಲು ಯಾತ್ರೆಗೆ ಹೋದವರಲ್ಲ. ಅವನ ಭಕುತರ ದರ್ಶನಕ್ಕಾಗಿ ಎಂದರೆ ಪ್ರಜಾಹಿತ ಚಿಂತನೆಗಾಗಿ ದೇಶ ಸಂಚಾರ ಮಾಡಿದ ಸಾಂಸ್ಕೃತಿಕ, ಸಾತ್ವಿಕ ರಾಯಭಾರಿಗಳು. "ರಂಗನೊಲಿಯನೋ ಭಕ್ತರ ಸಂಗದೊರೆಯದೇ'.


ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ  ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ. ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
ಟೋಲ್ ಫ್ರಿ ನಂಬರ್
18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!

ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.

# ಬೃಹದಾರಣ್ಯಕೋಪನಿಷತ್

- ಶ್ರೀಮತಿ. ಎ. ಗೀತಾ ವೀರರಾಘವನ್

ಬೃಹದಾರಣ್ಯಕೋಪನಿಷತ್ ಉಪನಿಷತ್ತುಗಳಲೆಲ್ಲಾ ಬಹಳ ದೊಡ್ಡದು. ಇದು ಶುಕ್ಲ ಯಜುರ್ವೇದಕ್ಕೆ ಸೇರಿದೆ. ಇದು ಕಾಣ್ವ ಪಾಠ ಮತ್ತು ಮಧ್ಯಾಂದಿನ ಪಾಠದಲ್ಲಿ ಲಭ್ಯವಾಗಿವೆ. ಶ್ರೀ ಶಂಕರ ಮತ್ತು ಶ್ರೀರಂಗರಾಮಾನುಜ ಮುನಿಗಳು ವ್ಯಾಖ್ಯಾನ ಮಾಡಿರುವುದು ಕಾಣ್ವಪಾಠಕ್ಕೆ ಸೇರಿದೆ. ಈ ಉಪನಿಷತ್ತಿನಲ್ಲಿ ಆರು ಅಧ್ಯಾಯಗಳು ಐವತ್ತೇಳು ಉಪವಿಭಾಗಗಳಿವೆ. ಈ ಉಪವಿಭಾಗಗಳನ್ನು ಬ್ರಾಹ್ಮಣಗಳೆಂದು ಕರೆಯುತ್ತಾರೆ. ಒಂದೊಂದು ಬ್ರಾಹ್ಮಣದಲ್ಲಿಯೂ ಅನೇಕಾನೇಕ ವಾಕ್ಯ ಖಂಡಗಳಿವೆ. ಈ ಉಪನಿಷತ್ತಿನಲ್ಲಿ ಕೆಲವು ಭಾಗಗಳು ಛಾಂದೋಗ್ಯ ಉಪನಿಷತ್ತಿಗಿಂತಲೂ ಪ್ರಭಾವಶಾಲಿಯಾಗಿವೆ. ವೇದಾಂತದ ಪರಮ ತತ್ವವು ಈ ಉಪನಿಷತ್ತಿನಲ್ಲಿ ಅಡಗಿದೆ. ಎಲ್ಲಾ ಪ್ರಧಾನ ಉಪನಿಷತ್‌ಗಳ ಸಾರವೂ ಈ ಒಂದು ಉಪನಿಷತ್ತಿನಲ್ಲಿ ಅಡಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಉಪನಿಷತ್ತಿನಲ್ಲಿ ಮೊದಲಿನಿಂದ ಕೊನೆಯ ತನಕ ಪರಮ ಪುರುಷನ ಅಂತರ್ಯಾಮಿತ್ವ (ಎಲ್ಲಾ ಜೀವಿಗಳಲ್ಲಿ ಅವನು ಅಂತರಾತ್ಮವಾಗಿರುವ ತತ್ವ) ವನ್ನು ಅನೇಕ ರೀತಿಯಲ್ಲಿ ನಿರೂಪಿಸಲಾಗಿದೆ. ಯಾಜ್ಞವಲ್ಕ್ಯರು ಮೈತ್ರೇಯಿಗೆ ನೀಡಿರುವ ಉಪದೇಶ, ಯಾಜ್ಞವಲ್ಕ್ಯರು ಉಷಸ್ತ ಚಕ್ರಾಯಣ ಮತ್ತು ಕಹೋಳನಿಗೆ ನೀಡಿರುವ ಉಪದೇಶ ಮಧುವಿದ್ಯೆ, ಅಂತರ್ಯಾಮಿ ಬ್ರಾಹ್ಮಣ ಎಲ್ಲವೂ ಈ ಉಪನಿಷತ್ತಿನ ಪ್ರಧಾನ ತತ್ವವೇ ಪರಮಾತ್ಮನು ಅಂತರ್ಯಾಮಿಯಾಗಿ ಎಲ್ಲಾ ಜೀವಿಗಳನ್ನು ಆಳುತ್ತಿರುವನೆಂದು ನಿರೂಪಿಸುತ್ತದೆ. ಈ ಉಪನಿಷತ್ತಿನಲ್ಲಿ ಮೊದಲಿನಿಂದ ಕೊನೆಯವರೆಗೆ ಯಾಜ್ಞವಲ್ಕ್ಯರ ಪಾಂಡಿತ್ಯ ಮತ್ತು ಪ್ರತಿಭೆ ಕಂಡು ಬರುತ್ತದೆ.

ಈ ಉಪನಿಷತ್ತಿನ ಮೊದಲನೆಯ ಅಧ್ಯಾಯದಲ್ಲಿ ಈ ವಿಶ್ವವನ್ನೇ ಅಶ್ವದ ರೂಪವೆಂದು ವರ್ಣಿಸಿದೆ. ಇದು ಅಶ್ವಮೇಧದ ಸಂಕೇತನ ವರ್ಣನೆಯಾಗಿದೆ.

ಮೊದಲು ಇಲ್ಲಿ ಈಗ ಕಂಡು ಬರುವ ಸ್ಥೂಲಾವಸ್ಥೆಯ ಯಾವುದೇ ವಸ್ತು ಇರಲಿಲ್ಲ. 'ಅಶನಾಯ' ಎಂಬ ಮೃತ್ಯು ಶಬ್ದ ವಾಚ್ಯವಾದ ಶರೀರನಾದ ಪರಮಾತ್ಮನಿಂದ ಆವೃತವಾಗಿದ್ದಿತು.

ಪ್ರಜಾಪತಿಯ ಮಕ್ಕಳು ದೇವತೆಗಳು ಮತ್ತು ಅಸುರರು. ದೇವತೆಗಳ ಸಂಖ್ಯೆ ಕಡಿಮೆ. ಅಸುರರ ಸಂಖ್ಯೆ ಅಪಾರ. ಅವರು ಲೋಕಗಳನ್ನು ಗೆಲ್ಲಬೇಕೆಂದು ಇದ್ದರು. ದೇವತೆಗಳು ತಾವು ಅಸುರರನ್ನು ಉದ್ಗೀತದಿಂದ ಯಜ್ಞದಲ್ಲಿ ಗೆಲ್ಲಲು ನಿಶ್ಚಯಿಸಿದರು.

ಈ ಜಗತ್ತಿನ ಸೃಷ್ಟಿಗೆ ಕಾರಣನಾದ ಪರಮ ಪುರುಷನನ್ನು ಮತ್ತು ಅವನನ್ನು ಉಪಾಸನೆಯಿಂದ ಪಡೆಯಬಹುದೆಂಬುದನ್ನು ಮುಮುಕ್ಷುವು (ಮೋಕ್ಷವನ್ನು ಇಚ್ಛಿಸುವವನು) ತಿಳಿಯಬೇಕು. "ಆತ್ಮೈವ ಇದಮಗ್ರ ಆಸೀತ್" ಎಂಬ ಉಪನಿಷತ್ತು ಅವನನ್ನು ವರ್ಣಿಸುತ್ತದೆ. ಅವನು ತನ್ನನ್ನು ಬದಲಾವಣೆ ಮಾಡಿಕೊಂಡು ಈ ಜಗತ್ತನ್ನು ಸೃಷ್ಟಿಸಲಿಲ್ಲ. ಅವನಿಗೆ ಚೇತನವು ಮತ್ತು ಅಚೇತನವು ಶರೀರವಾಗಿದೆ. ಅಚೇತನವು ಸ್ವರೂಪದಲ್ಲಿ ಬದಲಾವಣೆ ಹೊಂದುತ್ತದೆ. ಚೇತನರಿಗೆ ಸ್ವಭಾವದಲ್ಲಿ ಬದಲಾವಣೆ ಆಗುತ್ತದೆ. ಅಂದರೆ ಅವರ ಧರ್ಮಭೂತಜ್ಞಾನ ಹೆಚ್ಚು ಕಡಿಮೆಯಾಗಿ ಮಾರ್ಪಾಡಾಗುತ್ತದೆ. ಪರಬ್ರಹ್ಮನು ಎಲ್ಲದರಲ್ಲೂ ಅಂತರ್ಯಾಮಿಯಾಗಿ ಇರುತ್ತಾನೆ. ಅವನಿಗೆ ಯಾರೂ ಸಮಾನರಾಗಲೀ ಅಧಿಕರಾಗಲೀ ಇಲ್ಲ. ಅವನು ಸಾರ್ವಭೌಮ. ಅವನು ಅಂತರ್ಯಾಮಿಯಾಗಿ ಎಲ್ಲರನ್ನೂ ಆಳುತ್ತಾನೆ. ಆದುದರಿಂದ 'ಅಹಂ' ಎನ್ನುವ ಪದವು ಆ ಅಂತರ್ಯಾಮಿಯಾದ ಪರಬ್ರಹ್ಮನವರೆಗೆ ವಿಸ್ತರಿಸುತ್ತದೆ.

ಮನಸ್ಸು, ವಾಕ್ಕು, ಪ್ರಾಣ ಮತ್ತು ಇಂದ್ರಿಯಗಳು, ಇವುಗಳಲ್ಲಿ ಪ್ರಾಣವು ಅತ್ಯಂತ ಶ್ರೇಷ್ಠವೆಂದು ನಿರೂಪಿಸಲಾಗಿದೆ.

ಸೃಷ್ಟಿಗೆ ಮೊದಲು ಆ ಪರಬ್ರಹ್ಮನೊಬ್ಬನೇ ಇದ್ದನು. ಅವನು ತಾನು ಒಬ್ಬನೇ ಇರುವುದನ್ನು ನೋಡಿ ತಾನು ಹಿರಣ್ಯಗರ್ಭನಾಗಬೇಕೆಂದು ಇಚ್ಛಿಸಿದನು. ಅವನು ಹಿರಣ್ಯಗರ್ಭನಾದನು. ಅವನು "ಅಹಂ" ಎಂಬ ಹೆಸರಿನಿಂದ ತಿಳಿಯ

ಲ್ಪಟ್ಟನು.ಆದುದರಿಂದಲೇ ಇಂದಿಗೂ ಎಲ್ಲರೂ ಏನು ಕೇಳಿದರೂ"ಅಹಂ" (ನಾನು) ಎಂದು ಹೇಳಿ ಉತ್ತರ ಕೊಡುತ್ತಾರೆ. ಸೃಷ್ಟಿಗೆ ಪರಮಕಾರಣನು ಅವನೇ. ಅವನಿಗಿಂತ ಅಧಿಕರು ಯಾರು ಇರಲಿಲ್ಲ. ಹೇಗೆ ಜೇಡರ ಹುಳು ನೂಲಿನ ರೂಪದಿಂದ ಹೊರಕ್ಕೆ ಬರುವುದೋ,ಹೇಗೆ ಬೆಂಕಿಯು ಸಣ್ಣ ಸಣ್ಣ ಕಿಡಿಗಳಾಗುವುದೋ ಹಾಗೆ ಈ ಆತ್ಮನಿಂದ ಎಲ್ಲಾ ದೇವತೆಗಳೂ, ಎಲ್ಲಾ ಪ್ರಾಣಿಗಳೂ ಹೊರಬರುತ್ತಾರೆ.

ಎರಡನೆಯ ಅಧ್ಯಾಯದಲ್ಲಿ ೬೬ ಬ್ರಾಹ್ಮಣಗಳಿವೆ. ಈ ಅಧ್ಯಾಯದಲ್ಲಿ ಬ್ರಹ್ಮನು ಜಗತ್ ಸೃಷ್ಟಿಗೆ ಏಕೈಕ ಕಾರಣನೆಂದು ನಿರೂಪಿಸಲಾಗಿದೆ. ರಾಜ ಅಜಾತಶತ್ರು ಗಾರ್ಗ್ಯನಿಗೆ ಜಾಗೃತ್, ಸ್ವಪ್ನ,ಸುಷುಪ್ತಿ ಅವಸ್ಥೆಗಳನ್ನು ವಿವರಿಸಿ, ಸುಷುಪ್ತಿ ಅವಸ್ಥೆಯಿಂದ ಪರಮಾತ್ಮನು ಜೀವಾತ್ಮನಿಗಿಂತ ಬೇರೆಯವನೆಂಬ ಉಪದೇಶ ನೀಡುತ್ತಾನೆ.

ಈ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ ಮೂರ್ತಾಮೂರ್ತ ಬ್ರಹ್ಮದ ವಿಚಾರ ಪ್ರಸ್ತುತವಾಗಿದೆ. "ಅಥಃ ಅತಃ ಆದೇಶಃ ನೇತಿ ನೇತಿ" ಬ್ರಹ್ಮನ ಮಹಿಮೆ ಇಷ್ಟೇ ಎಂದು ಯಾರೂ ತಿಳಿಯ ಕೂಡದೆಂದು ನಿರೂಪಿಸಲಾಗಿದೆ.

ಈ ಎರಡನೆಯ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣ "ಮೈತ್ರೇಯೀ ಬ್ರಾಹ್ಮಣ"ಯಾಜ್ಞವಲ್ಕ್ಯರು ತಮ್ಮ ಇಬ್ಬರು ಪತ್ನಿಯರಾದ ಕಾತ್ಯಾಯಿನೀ ಮತ್ತು ಮೈತ್ರೇಯೀಯರಿಗೆ ತಾವು ವಾನಪ್ರಸ್ಥಾಶ್ರಮಕ್ಕೆ ಹೋಗುವುದಾಗಿಯೂ ಇಬ್ಬರಿಗೆ ತಮ್ಮ ಎಲ್ಲಾ ಆಸ್ತಿಯನ್ನು ಹಂಚಿಕೊಡುವುದಾಗಿ ತಿಳಿಸುತ್ತಾರೆ. ಆಗ ಮೈತ್ರೇಯಿ ಆ ವಿತ್ತದಿಂದ ತನಗೆ ಅಮೃತತ್ವ (ಮೋಕ್ಷ) ಸಿಗುವುದೇ ಎಂದು ಕೇಳುತ್ತಾಳೆ.ಆಗ ಯಾಜ್ಞವಲ್ಕ್ಯರು ವಿತ್ತದಿಂದ ಅಮೃತತತ್ವದ (ಮೋಕ್ಷ) ಆಸೆ ಎಂದಿಗೂ ಇಲ್ಲವೆಂದೂ, ವಿತ್ತದಿಂದ ಸುಖವಾಗಿ ಜೀವನವನ್ನು ಸಾಗಿಸಬಹುದಷ್ಟೇ ಎಂದು ತಿಳಿಸುತ್ತಾರೆ. ಆಗ ಮೈತ್ರೇಯಿಯು ಅಮೃತತತ್ವ ಸಿಗದ ವಿತ್ತ ತನಗೆ ಬೇಡವೆಂದು ಯಾಜ್ಞವಲ್ಕ್ಯರನ್ನು ಅಮೃತತತ್ವವನ್ನು ಪಡೆಯುವ ಮಾರ್ಗವನ್ನು ಉಪದೇಶಿಸಬೇಕೆಂದು ಪ್ರಾರ್ಥನೆ ಮಾಡುತ್ತಾಳೆ. ಆಗ ಯಾಜ್ಞವಲ್ಕ್ಯರು ಅವಳನ್ನು ಇಂದು ನನಗೆ ಬಹಳ ಪ್ರಿಯಳಾದೆ ಎಂದು ಹೇಳಿ ಅವಳನ್ನು ಹತ್ತಿರ ಕೂರಿಸಿಕೊಂಡು ಅವಳಿಗೆ "ಬ್ರಹ್ಮೋಪಾಸನೆ ಮೋಕ್ಷಕ್ಕೆ ಏಕೈಕ ಮಾರ್ಗ" ಎಂದು ಉಪದೇಶ ನೀಡುತ್ತಾರೆ. ಈ ಬ್ರಾಹ್ಮಣದಲ್ಲಿ ಪರಬ್ರಹ್ಮನು ಎಲ್ಲಾ ಜೀವಿಗಳಲ್ಲಿ ಅಂತರ್ಯಾಮಿಯಾಗಿ ಇರುವನೆಂದೂ ಮತ್ತು ಒಬ್ಬರು ಮತ್ತೊಬ್ಬರಿಗೆ ಪ್ರಿಯವಾಗುವುದು ಆ ಪರಬ್ರಹ್ಮನ ಇಚ್ಛೆಗೆ (ಸಂಕಲ್ಪಕ್ಕೆ) ಅಧೀನವಾಗಿರುವುದೆಂದು ಉಪದೇಶಿಸಿತ್ತಾರೆ. ಈ ಬ್ರಾಹ್ಮಣದಲ್ಲಿ ಎಲ್ಲಾ ಚೇತನ ಅಚೇತನಗಳು ಆ ಪರಬ್ರಹ್ಮನಿಗೆ ಶರೀರವೆಂದೂ "ಸರ್ವಂಯದಯಮಾತ್ಮಾ ಸರ್ವಸ್ಯ ಬ್ರಹ್ಮಾತ್ಮ ಕತ್ವ ಮೇವ ಸ್ವರೂಪಂ" ಎಂದು ಉಪದೇಶಿಸುತ್ತಾರೆ.ಆದುದರಿಂದ ಪರಬ್ರಹ್ಮನನ್ನು ತಿಳಿದರೆ ಅವನ ಶರೀರದಲ್ಲಿರುವುದೆಲ್ಲಾ ತಿಳಿದು ಬರುತ್ತದೆ.

ಮಧು ಬ್ರಾಹ್ಮಣ ಪರಬ್ರಹ್ಮನನ್ನು ತೇಜೋಮಯ ಮತ್ತು ಅಮೃತಮಯ ಪುರುಷನೆಂದು ನಿರೂಪಿಸುತ್ತದೆ.ಅವನು ಚೇತನ ಅಚೇತನಗಳಿಗಿಂತ ಬೇರೆಯಾಗಿದ್ದಾನೆ. ಅವನು ಎಲ್ಲಾ ಜೀವಿಗಳನ್ನು ಆಳುವವನು ಮತ್ತು ಎಲ್ಲರಿಗೂ ಸಾರ್ವಭೌಮ.

ಮೂರನೆಯ ಅಧ್ಯಾಯದಲ್ಲಿ ಮಧುಕಾಂಡದಲ್ಲಿ ಎಲ್ಲರಿಗೂ ಅಂತರ್ಯಾಮಿ ಎಂದು ವರ್ಣಿಸಿರುವ ಪರಬ್ರಹ್ಮನನ್ನು ಬೇರೆ ರೀತಿಯಾಗಿ ನಿರೂಪಿಸಿದ್ದಾರೆ. ಈ ಅಧ್ಯಾಯದಲ್ಲಿ ಯಾಜ್ಞವಲ್ಕ್ಯರು ಅಂತರ್ಯಾಮಿ ಅಥವಾ ಅಂತರಾತ್ಮನ ಸ್ವರೂಪವನ್ನು "ಸಾಕ್ಷಾತ್ ಅಪರೋಕ್ಷಾತ್ ಬ್ರಹ್ಮ" (ಅವನು ಪರಬ್ರಹ್ಮನೇ) ಎಂದು ನಿರೂಪಿಸುತ್ತಾರೆ. ಉಷಸ್ತ ಚಕ್ರಾಯಣ ಮತ್ತು ಕಹೋಳ ಯಾಜ್ಞವಲ್ಕ್ಯರಿಗೆ "ಸಾಕ್ಷಾತ್ ಅಪರೋಕ್ಷಾತ್ ಬ್ರಹ್ಮ" "ಆತ್ಮಾ ಸರ್ವಾಂತರಃ" ಎನ್ನುವ ಬಗ್ಗೆ ಒಂದೇ ರೀತಿಯ ಪ್ರಶ್ನೆಯನ್ನು ಕೇಳುತ್ತಾರೆ.ಆಗ ಯಾಜ್ಞವಲ್ಕ್ಯರು ಉಷಸ್ತನಿಗೆ ಅಂತರ್ಯಾಮಿಯಾಗಿರುವ ತತ್ವ ಎಲ್ಲರ ಒಳಗೂ ಅಂತರ್ಯಾಮಿಯಾಗಿರುವುದು"ಏತೇ ಆತ್ಮಾ ಸರ್ವಾಂತರಃ" ಎಂದು ಉತ್ತರಿಸುತ್ತಾರೆ.

ಹಸಿವು, ಬಾಯಾರಿಕೆ, ದುಃಖ ಭ್ರಮೆ, ಮುಪ್ಪು, ಮತ್ತು ಸಾವು ಇವುಗಳಿಂದ ದೂರವಾದ ಬ್ರಹ್ಮಸ್ವರೂಪವನ್ನು ಯಾಜ್ಞವಲ್ಕ್ಯರು ಸುಸ್ಪಷ್ಟವಾಗಿ ನಿರೂಪಿಸಿದ್ದಾರೆ.ಉದ್ಧಾಲಕರು ಯಾಜ್ಞವಲ್ಕ್ಯರನ್ನು ಅಂತರ್ಯಾಮಿ ಸ್ವರೂಪವನ್ನು ಕೇಳಿ ಅದನ್ನು ಯಾಜ್ಞವಲ್ಕ್ಯರಿಂದ ಸ್ಪಷ್ಟೀಕರಿಸಿದ್ದಾರೆ. ಯಾಜ್ಞವಲ್ಕ್ಯರು ಅಂತರ್ಯಾಮಿ ಸ್ವರೂಪವನ್ನು 'ಯಾರು ಎಲ್ಲಾ ಚೇತನ ಅಚೇತನರಲ್ಲಿ ವಾಸಿಸುತ್ತಿರುವನೋ, ಯಾರನ್ನು ಅವರ ಒಳಗೆ ಇದ್ದರೂ ಆ ಚೇತನ ಅಚೇತನರು ಶರೀರವಾಗಿದ್ದಾರೋ ಅವನು ಒಳಗಿಂದ ಎಲ್ಲರನ್ನೂ ಆಳುವವನು ಎಂದು ನಿರೂಪಿಸಿದ್ದಾರೆ. "ಅದೃಷ್ಟೋ ದೃಷ್ಟಾ, ಅಶ್ರುತೋ ಶ್ರುತಾ, ಅವಿಜ್ಞಾತೋ ವಿಜ್ಞಾತ ಎಂದು ನಿರೂಪಿಸಿದ್ದಾರೆ.

ಶರೀರ ಎನ್ನುವ ಪದ ಉಪನಿಷತ್ತಿನಲ್ಲಿದೆ. ಯಾವುದು ಆದೇಯವಾಗಿದೆಯೋ ನಿಯಾಮಿಸಲ್ಪಡುತ್ತಿದೆಯೋ ಒಳಗಿರುವ ಅಂತರ್ಯಾಮಿ ಅಥವಾ ಶರೀರಿಯಿಂದ ಉಪಯೋಗಿಸಿಕೊಳ್ಳ

ಲ್ಪಡುತ್ತಿದೆಯೋ ಅದು ಶರೀರ. ಉಪನಿಷತ್ತಿನಲ್ಲಿ ಹೇಳಲ್ಪಟ್ಟಿರುವ ಪರಮಪುರುಷನ ಅಂತರ್ಯಾಮಿ ತತ್ವ ಉಪನಿಷತ್ತಿನ ಒಂದು ಪ್ರಧಾನ ಕೊಡುಗೆಯಾಗಿದೆ.

ಗಾರ್ಗಿಬ್ರಾಹ್ಮಣದಲ್ಲಿ ಪರಮಪುರುಷನನ್ನು "ಅಕ್ಷರ" ಎಂದು ಹೇಳಲಾಗಿದೆ.ಯಾಜ್ಞವಲ್ಕ್ಯರು ಗಾರ್ಗಿಯ ಪ್ರಶ್ನೆಗೆ ಉತ್ತರಿಸುತ್ತಾ ಈ ಅಕ್ಷರನು ಯಾವುದೇ ದೋಷವಿಲ್ಲದ ಪರಿಪೂರ್ಣನೆಂದು ನಿರೂಪಿಸುತ್ತಾರೆ. ಈ ಅಕ್ಷರನು ಎಲ್ಲವನ್ನೂ ಆಳುವವನೆಂದು ತಿಳಿಸಿ ಈ ಅಕ್ಷರನನ್ನು ತಿಳಿಯದೆ ಈ ಲೋಕದಿಂದ ಹೋಗುವವರು ಪುನರ್ಜನ್ಮಕ್ಕೆ ಗುರಿಯಾಗುತ್ತಾರೆಂದು ಹೇಳಿದ್ದಾರೆ.ಯಾತ್ರಲ್ಯರು ಪರಬ್ರಹ್ಮನನ್ನು ವಿಜ್ಞಾನಮಯ, ಆನಂದಮಯ,ಕರ್ಮಗಳಿಗೆ ಫಲ ನೀಡುವ ಮತ್ತು ಉಪಾಸನೆಗಳಿಗೆ ಫಲನೀಡುವವನೆಂದು ಘೋಷಿಸಿದ್ದಾರೆ. (ವಿಜ್ಞಾನ ಆನಂದ ರೂಪಂ ಬ್ರಹ್ಮೈವ ಜಗನ್ಮೂಲಂ).

ನಾಲ್ಕನೆ ಅಧ್ಯಾಯದಲ್ಲಿ ಅತ್ಯಂತ ಪ್ರಸಿದ್ಧವಾದ ಜ್ಯೋತಿಬ್ರಾಹ್ಮಣ.ಯಾಜ್ಞವಲ್ಕ್ಯರ ಉಪದೇಶಗಳಲ್ಲಿ ಇದು ಅತ್ಯಂತ ವಿಸ್ತಾರವಾದುದು. ಇದರಲ್ಲಿ ನಿರೂಪಿಸಿರುವ ತತ್ವವು ಉಳಿದ ಎಲ್ಲಾ ಪ್ರಧಾನ ಉಪನಿಷತ್ತುಗಳಲ್ಲಿ ನಿರೂಪಿಸಿರುವ ತತ್ವವಾಗಿದೆ. ಬ್ರಹ್ಮಸೂತ್ರಗಳ ಪ್ರಕಾರ ಇದು ದಹರ ವಿದ್ಯೆಯಾಗಿದೆ. ಛಾಂದೋಗ್ಯೋಪನಿಷತ್ತಿನಲ್ಲಿ ಮೊದಲು ಪರಬ್ರಹ್ಮನ ಸ್ವರೂಪವನ್ನು ನಿರೂಪಿಸಿ ನಂತರ ಜೀವಾತ್ಮನ ಸ್ವರೂಪವನ್ನು ನಿರೂಪಿಸಲಾಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಮೊದಲು ಜೀವಾತ್ಮ ಸ್ವರೂಪವನ್ನು ನಿರೂಪಿಸಿ ಅನಂತರ ಪರಬ್ರಹ್ಮನ ಸ್ವರೂಪವನ್ನು ನಿರೂಪಿಸಲಾಗಿದೆ.ಯಾಜ್ಞವಲ್ಕ್ಯರು ಜನಕರಾಜನ ಆಸ್ಥಾನದಲ್ಲಿ ಜನಕನ ಆತ್ಮನ ಬಗ್ಗೆಯ ಪ್ರಶ್ನೆಗೆ ಉತ್ತರಿಸುತ್ತಾರೆ.

ಜೀವಾತ್ಮನು ಧರ್ಮ ಭೂತಜ್ಞಾನಕ್ಕಿಂತ ಬೇರೆ ಎಂದು ನಿರೂಪಿಸುತ್ತಾರೆ. ಜೀವಾತ್ಮನು ಜಾಗೃತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಅನುಭವಿಸುತ್ತಾನೆ. ಅವನು ಸುಷಪ್ತಿಯಲ್ಲಿ ಪರಮಾತ್ಮನೊಡನೆ ಸೇರುತ್ತಾನೆ. ಆ ಅವಸ್ಥೆಯಲ್ಲಿ ಪರಮಾತ್ಮನೊಡನೆ ಇರುವಾಗ ತನ್ನನ್ನಾಗಲೀ ಬೇರೆ ಯಾವುದೇ ವಸ್ತುವನ್ನಾಗಲೀ ತಿಳಿಯುವುದಿಲ್ಲ. ಇಲ್ಲಿ ಪರಮಾನಂದ ಸ್ವರೂಪನಾದ ಪರಮಾತ್ಮನನ್ನು ವರ್ಣಿಸಲಾಗಿದೆ ಮತ್ತು ನಮ್ಮ ಜೀವನದ ಪುರುಷಾರ್ಥ-ಆನಂದಮಯನಾದ ಪರಮ ಪುರುಷನನ್ನು ಸೇರಿ ಆನಂದ ಅನುಭವಿಸುವುದು.

ಈ ರೀತಿ ಜೀವಾತ್ಮನ ಸ್ವರೂಪವನ್ನು ನಿರೂಪಿಸಿ ಪರಮ ಪುರುಷನನ್ನು ಅತ್ಯಂತ ವೈಭವಯುತವಾಗಿ ಈ ರೀತಿ ವರ್ಣಿಸಿದೆ."ಸ ವಾ ಏಷ ಮಹಾನಜ ಆತ್ಮಾ ಯೋಯಂ ವಿಜ್ಞಾನಮಯಃ ಯ ಏಷಃ ಅಂತಹೃದಯ ಆಕಾಶಃ ತಸ್ಮಿನ್ ಶೇತೆ ಸರ್ವಸ್ಯ ವಶೀ,ಸರ್ವಸ್ಯೇಶಾನಃ ಸರ್ವಸ್ಯಾಧಿಪತಿಃ"।

ಈ ಪರಮಾತ್ಮನು ಜೀವಾತ್ಮರೊಳಗೆ ಅವರ ಅಂತರ್ಯಾಮಿಯಾಗಿ ವಾಸಿಸುತ್ತಿದ್ದಾನೆ. ಇದು ಪರಬ್ರಹ್ಮನೂ ಜೀವಾತ್ಮನೂ ಸಮಾನರಲ್ಲವೆಂದು ನಿರೂಪಿಸುತ್ತದೆ. ಪರಮಾತ್ಮನಿಗೆ ಅನೇಕ ಕಲ್ಯಾಣಗುಣಗಳಿವೆ. ಅವನು ಎಲ್ಲರನ್ನೂ ನಿಯಂತ್ರಿಸುವವನು (ಸರ್ವಸ್ಯ ವಶೀ) ಅವನು ಎಲ್ಲರಿಗೂ ರಾಜ (ಯಜಮಾನ), (ಸರ್ವಸ್ಯ ಈಶನಃ) ಎಲ್ಲರನ್ನೂ ಆಳುವವನು (ಸರ್ವಸ್ಯ ಅಧಿಪತಿಃ), ಸಾರ್ವಭೌಮ, (ಸರ್ವೇಶ್ವರಃ),ಎಲ್ಲರನ್ನೂ ರಕ್ಷಿಸುವವನು (ಭೂತಪಾಲಃ)ಈ ರೀತಿ ಅವನ ಕಲ್ಯಾಣ ಗುಣಗಳನ್ನು ನಿರೂಪಿಸಲಾಗಿದೆ. ಇಲ್ಲಿ ಉಪಾಸನೆಯ ಮಾರ್ಗವನ್ನು ಅಕಾಮಃ, ನಿಷ್ಕಾಮಃ, ಆಪ್ತಕಾಮಃ ಎಂದು ವಿವರಿಸಿದೆ.

ಯಾಜ್ಞವಲ್ಕ್ಯರು ಇಲ್ಲಿ ಬ್ರಹ್ಮೋಪಾಸನೆಯ ಮಾರ್ಗವನ್ನು "ತಮೇತೆ ವೇದಾನುವಚನೇನ ಬ್ರಾಹ್ಮಣಾ ವಿವಿದಿಶಂತಿ ಯಜ್ಞೇನ ದಾನೇನ ತಪಸಾ ಅನಾಶಕೇನ" ಇನ್ನೊಂದು ಮುಖ್ಯ ವಿಚಾರ ಬ್ರಹ್ಮ ಉಪಾಸಕನಿಗೆ ಹೇಳಿರುವುದು "ಏವಂವಿತ್ ಶಾಂತೋದಾಂತಃ ಉಪರತಃ - ತಿತಿಕ್ಷುಃ, ಸಮಾಹಿತೋಭೂತ್ವಾ ಆತ್ಮನ್ಯೇ ವಾತ್ಮಾನಂ ಪಶ್ಯೇತ್ ಸರ್ವಮಾತ್ಮಾನಂ ತಪಶ್ಯತಿ.

ಮೂರನೆಯ ಅಧ್ಯಾಯದಲ್ಲಿ ಜನಕರಾಜನ ಸಭೆಯಲ್ಲಿ ಯಾಜ್ಞವಲ್ಕ್ಯರಿಗೂ ಇತರ ಬ್ರಹ್ಮವಾದಿಗಳಿಗೂ ನಡೆದ ವಾಗ್ವಾದದ ಸುಂದರವಾದ ನಿರೂಪಣೆ ಇದೆ.

ಜನಕರಾಜನ ಅರಮನೆಯಲ್ಲಿ ಬ್ರಹ್ಮವಾದಿಗಳ ಸಭೆ ಸೇರಿತ್ತು. ರಾಜನು ಒಂದು ಸಾವಿರ ಹಸುಗಳಿಗೆ ಎರಡೆರಡು ಕೊಂಬುಗಳಿಗೂ ಹತ್ತು ಹತ್ತು ತೊಲ ಚಿನ್ನದ ಗಂಟೆಗಳನ್ನು ಕಟ್ಟಿ ಯಾರು ಅತಿ ದೊಡ್ಡ ಬ್ರಹ್ಮಜ್ಞಾನಿಯೋ ಅವರು ಈ ಹಸುಗಳನ್ನು ತೆಗೆದುಕೊಂಡು ಹೋಗಿ ಎನ್ನುತ್ತಾರೆ. ಯಾರಿಗೂ ಧೈರ್ಯವಾಗಲಿಲ್ಲ. ಯಾಜ್ಞವಲ್ಕ್ಯರು ತಮ್ಮ ಶಿಷ್ಯನನ್ನು "ಸಾಮಶ್ರಮ! ಹಸುಗಳನ್ನು ಆಶ್ರಮಕ್ಕೆ ಹೊಡೆದುಕೊಂಡು ಹೋಗು" ಎನ್ನುತ್ತಾರೆ. ಅವನು ಹಸುಗಳನ್ನು ಹೊಡೆದುಕೊಂಡು ಹೋದ ತಕ್ಷಣ ಎಲ್ಲರೂ ಯಾಜ್ಞವಲ್ಕ್ಯರನ್ನು ಆಕ್ಷೇಪಿಸುತ್ತಾರೆ. ನೀವು ಎಲ್ಲರಿಗಿಂತ ದೊಡ್ಡ ಬ್ರಹ್ಮ ಜ್ಞಾನಿಯೋ ? ಎನ್ನುತ್ತಾರೆ. ಆಗ ಯಾಜ್ಞವಲ್ಕ್ಯರು

ಅತ್ಯಂತ ವಿನಯದಿಂದ ಖಂಡಿತ ಇಲ್ಲ ಆದರೆ ನನಗೆ ಆಶ್ರಮಕ್ಕೆ ಹಸುಗಳು ಬೇಕಾಗಿದ್ದುವು ತೆಗೆದುಕೊಂಡೆ ಎನ್ನುತ್ತಾರೆ. ಎಲ್ಲರೂ ಯಾಜ್ಞವಲ್ಕ್ಯರಿಗೆ ಪ್ರಶ್ನೆಗಳ ಸುರಿಮಳೆ ಸುರಿಸುತ್ತಾರೆ. ಎಲ್ಲ ವನ್ನೂ ಸಮರ್ಪಕವಾಗಿ ಉತ್ತರಿಸುತ್ತಾ ಬರುತ್ತಾರೆ. ಕೊನೆ ಯಲ್ಲಿ ಗಾರ್ಗಿ ಎಂಬ ಬ್ರಹ್ಮವಾದಿನಿ ಉಳಿದವರಿಗೆ ನಾನು ಯಾಜ್ಞವಲ್ಕ್ಯರನ್ನು ಎರಡು ಪ್ರಶ್ನೆಗಳು ಕೇಳುತ್ತೇನೆ ಆ ಪ್ರಶ್ನೆಗಳಿಗೆ ಅವರು ಉತ್ತರಿಸಿದರೆ ನೀವು ಯಾರು ಅವರನ್ನು ಗೆಲ್ಲಲಾರಿರಿ. ಎಲ್ಲರೂ ಅವರಿಗೆ ನಮಸ್ಕರಿಸಿ ಹೊರಡಬೇಕು ಎನ್ನುತ್ತಾಳೆ. ಯಾಜ್ಞವಲ್ಕ್ಯರು ಯಾವ ಸಂದೇಹವಿಲ್ಲದೆ ಪೃಚ್ಛ (ಕೇಳು) ಎಂದರು. ಮೊದಲಿಗೆ" ಈ ಲೋಕವೆಲ್ಲಾ ಯಾವುದರಲ್ಲಿ ಓತಪ್ರೊತವಾಗಿದೆ"? ಎಂದಳು. ಆಗ ಯಾಜ್ಞವಲ್ಕ್ಯರು - ನೋಡು ಗಾರ್ಗಿ, ಕೆಳಗಿರುವುದು ಮೇಲಿರುವುದು ಮಧ್ಯದಲ್ಲಿ ರುವುದು ಎಲ್ಲವೂ "ಆಕಾಶೇ ತದೋತಂ ಚ ಪ್ರೋತಂ" (ಆಕಾಶದಲ್ಲಿ ಓತಪ್ರೋತವಾಗಿದೆ.) ಎಂದರು. ಗಾರ್ಗಿ ಸರಿ ಎಂದು ಒಪ್ಪಿಕೊಂಡು "ನಮಸ್ತೇ ಅಸ್ತು ಯಾಜ್ಞವಲ್ಕ್ಯ" ಎಂದಳು. ಇನ್ನೊಂದು, ಪ್ರಶ್ನೆ ಆಕಾಶ ಎಂದು ಬದಿತ್ತಲ್ಲ ಅದಕ್ಕೆ ಯಾವುದು ಆಧಾರ? ಎಂದಳು. ಯಾಜ್ಞವಲ್ಕ್ಯರು "ಅಕ್ಷರ" "ನಕ್ಷರತಿ ಇತಿ ಅಕ್ಷರಃ" ಎಲ್ಲದಕ್ಕೂ ಆಧಾರವಾಗಿರುವುದು ನಾಶವಾಗದೆ ಇರುವುದು ಸತ್ಯವಾದುದು "ಅಕ್ಷರ " ಎಂದು ಜಗತ್ಕಾರಣ ನಾದ ಪರಬ್ರಹ್ಮ ಬ್ರಹ್ಮನನ್ನು ಹೇಳಿದರು.

ನಾಲ್ಕನೆಯ ಅಧ್ಯಾಯದಲ್ಲಿ ಯಾಜ್ಞವಲ್ಕ್ಯರು ಜನಕ ರಾಜನಿಗೆ ಮಾಡಿದ ತತ್ವಜ್ಞಾನದ ಉಪದೇಶವಿದೆ. ಇದನ್ನು "ಮುನಿಕಾಂಡ" ಎನ್ನುತ್ತಾರೆ. ಈ ಭಾಗ ಉಪನಿಷತ್ತುಗಳಿಗೆ ಕಿರೀಟ ಪ್ರಾಯವಾಗಿದೆ.

ಪ್ರಣವೋಪಾಸನೆಯ ವಿಚಾರ ಐದನೆಯ ಅಧ್ಯಾಯದ ಆರಂಭದಲ್ಲಿದೆ. ಎರಡನೆಯ ಬ್ರಾಹ್ಮಣದಲ್ಲಿ ದಯೆ, ದಾನ, ದಮ ಇವುಗಳ ಕುರಿತು ಅನೇಕ ರಸಬದ್ಧ ಅಖ್ಯಾನಗಳಿವೆ. ಸೃಷ್ಟಿ ವಿಷಯವಾಗಿ, ನೀತಿ ವಿಷಯವಾಗಿ ಅನೇಕ ವಿಚಾರ ಗಳು ಈ ಅಧ್ಯಾಯದಲ್ಲಿ ಪ್ರಸ್ತುತವಾಗಿದೆ.

ಆರನೆಯ ಅಧ್ಯಾಯದಲ್ಲಿ ಪ್ರಾಣವೇ ಜ್ಯೇಷ್ಠ ಎಂಬ ವಿಷಯವು ಒಂದು ಆಖ್ಯಾನದ ಮೂಲಕ ನಿರೂಪಿತವಾಗಿದೆ. ಈ ಅಧ್ಯಾಯದ ಎರಡನೆಯ ಬ್ರಾಹ್ಮಣದಲ್ಲಿ ಜೈವಲಿಯಿಂದ ಗೌತಮರು ಪಡೆದುಕೊಂಡ ಪಂಚಾಗ್ನಿ ವಿದ್ಯೆಯ ಉಪದೇಶದ ನಿರೂಪಣೆಯಿದೆ. ಈ ಉಪನಿಷತ್ತಿನಲ್ಲಿ ಉಪನಿಷದಾ ಚಾರ್ಯರುಗಳ ವಂಶಕ್ರಮದ ವಿಸ್ತಾರವಾದ ನಿರೂಪಣೆ ಇದೆ.

**ಈ ಉಪನಿಷತ್ತಿನ ಸಾರ**

೧)ಎಲ್ಲಾ ವಸ್ತುಗಳಿಗಿಂತ ಪರಮಾತ್ಮವಸ್ತು ಶ್ರೇಷ್ಠವಾದು ದೆಂದು ಆ ಪರಮಾತ್ಮನನ್ನು ತಿಳಿಯಬೇಕು ಮತ್ತು ಉಪಾಸನೆ ಮಾಡಬೇಕು.

೨) ಜ್ಞಾನಾನ್ವೇಷಣೇಯಲ್ಲಿ ವಿಚಾರ ಪರನು ತತ್ಪರನಾಗ ಬೇಕು.

೩) ನಮಗೆ ತಿಳಿಯದೇ ಇರುವ ವಿಚಾರಗಳನ್ನು ತಿಳಿ ದವರ ಬಳಿ ಸಾಗಿ ಶಿಷ್ಯರಾಗಿ ತಿಳಿದುಕೊಳ್ಳಬೇಕು.

೪) ಬ್ರಹ್ಮಜ್ಞಾನವನ್ನು ಎಂದೂ ಪರಿಭವಿಸಕೂಡದು.

೫) ಮಾನವರಿಗೆ ನೈತಿಕ ಮತ್ತು ಧಾರ್ಮಿಕ ಗುಣಗಳ ಅಭ್ಯಾಸ ಅತ್ಯಂತ ಅವಶ್ಯಕವಾದುದು.




# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ಹೈದ್ರಾಬಾದ ಕರ್ನಾಟಕದ ದಾಸ ಸಾಹಿತ್ಯ

ದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ತವನಿಧಿಗಳಲ್ಲೊಂದು. ನೂರಾರು ಜನ ಹರಿದಾಸರು, ಸಹಸ್ರಾರು ಕೃತಿಗಳು ಇದರ ಆಸ್ತಿ. ಸಾಹಿತ್ಯದೊಂದಿಗೆ ಸಂಗೀತ ಇದರ ಇನ್ನೊಂದು ವೈಶಿಷ್ಟ್ಯ. ನವವಿಧ ಭಕ್ತಿ, ಪಂಚಭಾವಗಳು, ಸಪ್ತತಾಳಗಳು, ೩೨ ರಾಗಗಳು,ಬೆಸಸಂಖ್ಯಾ ನುಡಿಗಳು ಇದರ ಕೆಲವು ಗುಣ ಲಕ್ಷಣಗಳು. ಕವಿವಾಣಿಯೊಂದನ್ನು ಉಲ್ಲೇಖಿಸಿ ಹೇಳುವುದಾದರೆ ಜೈನರ ಕಾವ್ಯದ, ಶರಣರ ವಚನದ, ದಾಸರ ಹಾಡಿನ ಈ ನಾಡು." ಎಂದರೆ ಈ ನಾಡಿನ ಪ್ರಸಿದ್ಧವಾದ ಈ ಮೇಲಿನ ಮೂರು ಪರಂಪರೆಗಳು ಜನಿಸಿ ಜನಜನಿತವಾದದ್ದು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿಯೇ. ಜೈನರ ಕಾವ್ಯ ಎಂದರೆ ಗುಲಬರ್ಗಾ ಜಿಲ್ಲೆಯ ಮಾನ್ಯಖೇಟ, ಶರಣರ ವಚನ ಎಂದರೆ ಬೀದರ ಜಿಲ್ಲೆಯ ಬಸವಕಲ್ಯಾಣ ದಾಸರ ಹಾಡು ಎಂದರೆ ಅವಿಭಜಿತ ರಾಯಚೂರು ಜಿಲ್ಲೆ. ಹರಿದಾಸ ಸಾಹಿತ್ಯದ ಮೊದಲನೇ ಘಟ್ಟದ ಪುರಂದರದಾಸರು ಹಾಗೂ ಕನಕದಾಸರನ್ನು ಹೊರತುಪಡಿಸಿ ಉಳಿದೆಲ್ಲ ದ್ವಿತೀಯ ಘಟ್ಟದ ಹರಿದಾಸ ಕಾರ್ಯಕ್ಷೇತ್ರ ಹೈದ್ರಾಬಾದ್ ಕರ್ನಾಟಕ ಪ್ರದೇಶವೇ ಆಗಿದೆ. ಇದಕ್ಕೆ ಕಾರಣ ಪ್ರಥಮ ಘಟ್ಟಕ್ಕೆ ವ್ಯಾಸರಾಯ ಸ್ವಾಮಿಗಳಂತೆ ದ್ವೀತೀಯ ಘಟ್ಟದಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳು ಎನ್ನುವುದು ಪ್ರಮುಖವಾದ ವಿಷಯ. ನೈಜಾಮ್‌ನ ಆಳ್ವಿಕೆ, ಉರ್ದು ಭಾಷೆಯ ಪ್ರಭಾವದಂತಹ ವಿಪರೀತ ಪರಿಸ್ಥಿತಿಯಲ್ಲಿ ಹುಟ್ಟಿದ ಅಪರಿಮಿತವಾದ ಕನ್ನಡ ಪೌರಾಣಿಕ ಸಂಪತ್ತೇ ಹರಿದಾಸ ಸಾಹಿತ್ಯ. ದ್ವಿತೀಯ ಘಟ್ಟದಲ್ಲಿ ಬರುವ ಪ್ರಮುಖರೆಂದರೆ ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಶ್ರೀ ಜಗನ್ನಾಥದಾಸರು, ಶ್ರೀ ಪ್ರಾಣೇಶದಾಸರು, ಶ್ರೀ ಶೇಷದಾಸರು, ಶ್ರೀ ಮೋಹನದಾಸರು, ಶ್ರೀ ಮಹಿಪತಿದಾಸರು,ಶ್ರೀ ಗೋವಿಂದದಾಸರು, ಶ್ರೀ ಶ್ಯಾಮಸುಂದರದಾಸರು,ಗಲಗಲಿ ಅವ್ವನವರು, ಹೆಳವನಕಟ್ಟಿ ಗಿರಿಯಮ್ಮ ಮತ್ತು ಹರಪನಗಳ್ಳಿ ಭೀಮವ್ವ ಮೊದಲಾದವರು.

ಹೈದ್ರಾಬಾದ ಕರ್ನಾಟಕದ ಪ್ರಮುಖ ಹರಿದಾಸರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಅವಿಭಜಿತ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಸುರಪುರಿನ ಆನಂದದಾಸರು, ಹೆನ್ನರಂಗವಿಠ್ಠಲದಾಸರು, ಶ್ರೀನಿವಾಸದಾಸರು, ಶ್ರೀ ಗೋಪತಿದಾಸರು, ಶ್ರೀ ಟೊಂಕದಾಸರು, ಶ್ರೀ ಗಿರಿಧರದಾಸರು, ದಾಸಾಚಾರ್ಯರು, ಗಿರಿರಾಯಾಚಾರ್ಯರು, ಮೊದಲಾದವರು.

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚೀಕಲಪರವಿಯಲ್ಲಿ ಇರುವ ಶ್ರೀ ವಿಜಯದಾಸರ ಕಟ್ಟೆ ಅತ್ಯಂತ ಜಾಗೃತ ಸ್ಥಳವಾಗಿದೆ. ಇವರು ಪುರಂದರದಾಸರ ಅಂಶಸಂಭೂತರೆಂದೇ ಪ್ರತೀತಿ ಇದೆ. ಇವರು ಕೀರ್ತನೆ, ಸುಳಾದಿ,ಉಗಾಭೋಗ ಮೊದಲಾದವುಗಳನ್ನು ರಚಿಸಿದ್ದಲ್ಲದೇ ಇವರಿಗೆ ಸುಳಾದಿ ದಾಸರೆಂದೇ ಬಿರುದು. ಇವರ ಕಾಲ ಸುಮಾರು ಕ್ರಿ.ಶ. ೧೬೮೨ ರಿಂದ ೧೭೭೩ ಎಂದು ಈಗಾಗಲೇ ದಾಖಲಾಗಿದೆ. ಇವರ ಅಂಕಿತನಾಮ ವಿಜಯವಿಠ್ಠಲ. ಇವರ ಪವಮಾನ ಪವಮಾನ ಜಗದ ಪ್ರಾಣ ಎಂಬ ಕೀರ್ತನೆ ತುಂಬಾ ಪ್ರಸಿದ್ಧವಾಗಿದೆ.

ಗಲಗಲಿ ಅವ್ವನವರು ಕ್ರಿ.ಶ. ೧೬೯೫ ರ ಅಸುಪಾಸಿನಲ್ಲಿ ಬದುಕಿದ್ದರೆಂದು ತಿಳಿದು ಬರುತ್ತದೆ. ಇವರು ಪ್ರಥಮ ಮಹಿಳಾ ದಾಸರೆಂದು ಪ್ರತೀತಿ. ಇವರು ರಮೇಶ, ರಮೇಯರಸ ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಭೋಗಾಪುರ ಇವರ ತವರು ಮನೆ. ಮುಯ್ಯಾ ಒಯ್ದ ಹಾಗೂ ಮುಯ್ಯಾ ತಿರುಗಿಸಿದ ಹಾಡುಗಳು, ಕೋಲು ಹಾಡುಗಳು ಹೀಗೆ ಒಟ್ಟು ೨೬೬ ಹಾಡುಗಳು ರಚಿಸಿದಂತೆ ತಿಳಿದುಬರುತ್ತದೆ.

ಶ್ರೀ ಗೋಪಾಲದಾಸರ ಹೆಸರು ಭಕ್ತಿಯಲ್ಲಿ ಭಾಗಣ ಎಂದೇ ಪ್ರಸಿದ್ಧಿ ಇವರು ಕ್ರಿ.ಶ. ೧೭೨೨ ರಿಂದ ೧೭೬೨ ರ ವರೆಗೆ ಬದುಕಿದ್ದು ದೇವದುರ್ಗ ತಾಲ್ಲೂಕಿನ ಮೊಸರುಕಲ್ಲಿನವರು ಎಂದು ತಿಳಿದುಬರುತ್ತದೆ. ಇವರು ವಿಜಯದಾಸರ ಶಿಷ್ಯರು, ಇವರು ಹಲವಾರು ಕೀರ್ತಿನೆಗಳನ್ನು ರಚಿಸಿದ್ದೇ ಅಲ್ಲದೇ ಪವಾಡಗಳನ್ನು ಮೆರೆದಿದ್ದಾರೆ. ಜ್ಞಾನ,ಭಕ್ತಿ, ವೈರಾಗ್ಯಧುರೀಣರಾದ ಇವರು ವೈರಾಗ್ಯದ ವ್ಯಾಖ್ಯೆಯನ್ನು ಹೇಳುತ್ತ "ಸ್ವಯೋಗ್ಯತೆಯ ಆಯತದಲ್ಲಿ ಅಪ್ಪುದುದನ್ನು ನೋಯದೇ ಉಣ್ಣುವುದೇ ನ್ಯಾಯದ ವೈರಾಗ್ಯ."ಎಂದರೆ ಆ ಕಾಲದ ಡಾಂಭಿಕ ವೈರಾಗ್ಯವನ್ನು ವ್ಯಂಗ್ಯವಾಗಿ ಟೀಕಿಸುತ್ತಾರೆ.

ದ್ವಿತೀಯ ಘಟ್ಟದ ಹರಿದಾಸರಲ್ಲಿ ಅತ್ಯಂತ ಪ್ರಮುಖರು ಹಾಗೂ ಪ್ರಭಾವಿಗಳು ಎಂದರೆ, ಜಗನ್ನಾಥದಾಸರು. ಇವರ ಆಧ್ಯಾತ್ಮಿಕ ಕಾವ್ಯ ಹರಿಕಥಾಮೃತಸಾರವು ೩೨ ಸಂಧಿಗಳುಳ್ಳ ಸುಮಾರು ಸಹಸ್ರ ಪದ್ಯಗಳ ಭಾಮಿನಿಷಟ್ಪದಿ ಕಾವ್ಯ ಇದು ಮುಂದಿನ ಹರಿದಾಸರಿಗಷ್ಟೇ ಅಲ್ಲದೇ ಸಮಸ್ತ ದ್ವೈತ ಪರಂಪರೆಗೆ ಒಂದು ಕನ್ನಡ ಸೈದ್ಧಾಂತಿಕ ಭಕ್ತಿ ಪರ ಕೃತಿಯೂ ಅಗಿದೆ. ಕ್ರಿ.ಶ. ೧೭೨೮ ರಿಂದ ೧೮೦೯ ರ ವರೆಗೆ ಇದ್ದ ಇವರು ಮಾನ್ವಿಯವರು. ಮಾನ್ವಿ ಬಸ್ ನಿಲ್ದಾಣದಿಂದ ಕೇವಲ ಒಂದು ಕಿ.ಮೀ ದೂರದಲ್ಲಿ ಇವರ ಮನೆ, ಮೀಟಿದ ತಂಬೂರಿ, ಪೂಜಿಸಿದ ಪ್ರಾಣದೇವರ ಪ್ರತಿಮೆ ನೋಡಲು ಸಿಗುತ್ತದೆ.ಅವರ ಮನೆಯ ಸುತ್ತಲಿನ ಒಳಭಾಗದ ಗೋಡೆಗಳ ಮೇಲೆ ಹರಿಕಥಾಮೃತಸಾರದ ಪದ್ಯಗಳನ್ನು ಕೊರೆಸಲಾಗಿದೆ. ಜಗನ್ನಾಥವಿಠ್ಠಲ ಇವರ ಅಂಕಿತ, ಇವರು ಕೀರ್ತನೆಗಳು ಹಾಗೂ ತತ್ವ ಸುವಾಲಿಗಳನ್ನು ರಚಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಬರುವ ಹರಪನಹಳ್ಳಿ ಭೀಮವ್ವ ಮತ್ತೊಬ್ಬ ಮಹಿಳಾ ಹರಿದಾಸರು. ಇವರು ಕ್ರಿ.ಶ. ೧೮೨೩ ರಿಂದ ೧೯೦೩ ರ ವರೆಗೆ ಬದುಕಿದ್ದ ೧೪೦ ಸಣ್ಣ ಹಾಡುಗಳನ್ನು ರಚಿಸಿದ್ದಾರೆ. ಒಟ್ಟಿನಲ್ಲಿ ಹೈದ್ರಾಬಾದ್ ಕರ್ನಾಟಕ ಎಂದರೆ ಹೈದ್ರಾಬಾದ್ ನಿಜಾಮನ ಆಳ್ವಿಕೆ ಒಳಪಟ್ಟ ಪ್ರದೇಶವೆಂದು ಪರಿಗಣಿಸಿದರೂ ಬಳ್ಳಾರಿಯನ್ನು ಸೇರಿಸಿಕೊಳ್ಳಬಹುದು. ಹರಿದಾಸ ಸಾಹಿತ್ಯದ ಮೂಲ ಶ್ರೋತವೆಂದರೆ ಭಕ್ತಿ, ಭಕ್ತಿಯ ಪ್ರಕಟನೆಗಾಗಿ ಈ ಯುಗದಲ್ಲಿ ಕೇಳಿ ಬಂದ ವಾಕ್ಯವೆಂದರೆ "ದೇವರೆಂದರೆ ತಿರುಪತಿಯ ತಿಮ್ಮಪ್ಪ, ಗುರುವೆಂದರೆ ಮಂಚಾಲೆಯ ರಾಘಪ್ಪ".

ಈ ಎಲ್ಲ ಹರಿದಾಸರ ಕೀರ್ತನೆ ಹಾಗೂ ಸಾಹಿತ್ಯವನ್ನು ಮೊಟ್ಟಮೊದಲು ಸಂಪಾದಿಸಿ, ಪ್ರಕಟಿಸಿದ ಕೀರ್ತಿ ಹೈದ್ರಾಬಾದ್ ಕರ್ನಾಟಕದ ಲಿಂಗಸೂಗೂರಿನ ಗೋರೇಬಾಳ ಹಣಮಂತ ರಾಯರಿಗೆ ಸಲ್ಲುತ್ತದೆ. ತದನಂತರ ಅದನ್ನು ಮುಂದೆ ಉಡುಪಿಯ ಪಾವಂಜಿ ಗುರುರಾಯರು, ಬೆಂಗಳೂರಿನ ಸುಬೋಧ ರಾಮ ರಾಯರು ಪ್ರಕಟಣೆ ಮತ್ತು ಪ್ರಸಾರ ಮಾಡಿದರು. ಇಂದಿಗೂ ಲಿಂಗಸೂಗೂರಿನಲ್ಲಿ ವರದೇಂದ್ರ ಹರಿದಾಸ ಮಂಡಲವೆಂಬ ದಾಸ ಕೇಂದ್ರ ಇದೆ. ಗೋರೆಬಾಳ ಹಣಮಂತ ರಾಯರ ಮಗ ದಿ.ಶ್ರೀನಿವಾಸ ದಾಸರು ಮನೆಯನ್ನೇ ಅಂಚೆ ಕಛೇರಿಯನ್ನಾಗಿಸಿ ಬೇರ ಬೇರೆ ಊರುಗಳಿಗೆ ದೇಶಾದ್ಯಂತ ಸುಮಾರು ೨೦೦ ಪುಸ್ತಕಗಳನ್ನು ಮುದ್ರಿಸಿ ರವಾನಿಸಿದ ಕೀರ್ತಿ ಹೊಂದಿದ್ದಾರೆ.

ಇದೇ ಭಾಗದವರಾದ ಪ್ರೊ : ವಸಂತ ಕುಷ್ಟಗಿ, ಶ್ರೀ ಗೋರೇಬಾಳ ಹಣಮಂತರಾಯರ ಗರಡಿಯಲ್ಲಿ ಬೆಳೆದು ಈ ಭಾಗದ ಹರಿದಾಸ ಸಾಹಿತ್ಯಕ್ಕೆ ಒಂದು ವಿಶಿಷ್ಟ ದಾಖಲಾತಿಯ ಸ್ಥಾನಮಾನವನ್ನು ನೀಡಿದರು. ಇಂದಿನ ದಿನಗಳಲ್ಲಿ ಟಿ.ಟಿ.ಡಿ. ಮಂತ್ರಾಲಯ ಮಠ, ಶ್ರೀ ಪಾದರಾಜ ಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕ್ಯಾಸೆಟ ಹಾಗೂ ಸಿ.ಡಿ. ತಯಾರಿಸುವ ಸಂಸ್ಥೆಗಳು, ಹಲವಾರು ಜನ ಗಾಯಕರು, ಸಂಗೀತಗಾರರು, ಆಕಾಶವಾಣಿ, ದೂರದರ್ಶನ, ರಂಗಭೂಮಿ, ಚಿತ್ರಂಗ ಹೀಗೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ಹಾಗೂ ಸಾರಿಗೆ ಸಂಪರ್ಕದ ಸೌಲಭ್ಯದಿಂದ ಹರಿದಾಸ ಸಾಹಿತ್ಯ, ಹರಿದಾಸರ ತಾಣಗಳು ಮತ್ತು ಹರಿದಾಸ ಪರಂಪರೆ ಸಾಕಷ್ಟು ಬೆಳೆದಿದೆ. ಮನುಷ್ಯನಿಗೆ ಅಧಿಕಾರ, ಅಂತಸ್ತು , ಹಣ, ರೂಪ, ಯೌವನ, ಇದಾವುದೂ ಕೊಡದೇ ಇರುವ ಸುಖ ಶಾಂತಿಯನ್ನು ಈ ಸಾಹಿತ್ಯ ಕೊಡುತ್ತಿದೆ. ಸಾಲ ಮಾಡಬೇಡ, ಸಾಲದೆನಬೇಡ, ನಾಳೆ ಇಡಬೇಡ ಎಂಬ ತತ್ವದ ಆಧಾರದ ಮೇಲೆ ಹುಟ್ಟಿದ ಸಾಹಿತ್ಯ ಇಂದು ಮುಂದುವರೆದು ಭಕ್ತಿ ಇಲ್ಲದ ಬಾಳು, ಬ್ರೇಕ್ ಇಲ್ಲದ ಕಾರು ಎಂಬ ನಾಣ್ಣುಡಿಗೆ ಬಂದು ನಿಂತಿದೆ. ಒಬ್ಬ ವ್ಯಕ್ತಿ ತಮ್ಮ ಸ್ವರೂಪ, ಪ್ರವೃತ್ತಿ, ಮತ್ತು ಯೋಗ್ಯತೆಗೆ ಅನುಸಾರವಾಗಿ ಬೆಳೆಯುತ್ತಾನೆ. ಅದೇ ನಿಜವಾದ ಬೆಳವಣಿಗೆ, ಈ ಪರಂಪರೆ ೨೦ ನೇ ಶತಮಾನದಲ್ಲಿಯೂ ಮುಂದುವರೆದು ಇಂದಿಗೂ ಅವಿಚ್ಛಿನ್ನವಾಗಿ ನಡೆದು ಬಂದಿದೆ.

ಹಲವಾರು ಜನ ಆಧುನಿಕ ಹರಿದಾಸರು ಕೀರ್ತನೆ ಸುಳಾದಿಗಳನ್ನು ಬರೆದು ತಮ್ಮ ಭಕ್ತಿ ಕುಸುಮಗಳನ್ನು ಸಮರ್ಪಿಸಿದ್ದಾರೆ. ಡಾ|| ಜಯಲಕ್ಷ್ಮೀ ಮಂಗಳಮೂರ್ತಿ ಅವರು ಸುಮಾರು ೮೪ ಜನ ಹೈದ್ರಾಬಾದ್ ಕರ್ನಾಟಕದ ಆಧುನಿಕ ಹರಿದಾಸರನ್ನು ಗುರುತಿಸಿ ಸಂಶೋಧಿಸಿ ದಾಖಲಿಸಿದ್ದಾರೆ. ಭದ್ರಗಿರಿ ಅಚ್ಯುತದಾಸರು, ಶಿವಮೊಗ್ಗದ ಶ್ರೀನಿವಾಸದಾಸರು ಮೊದಲಾದವರ ಕೀರ್ತನೆಗಳಿಗೆ ಸಮಾಜದಲ್ಲಿ ತುಂಬಾ ಬೇಡಿಕೆ ಇದೆ. ಡಾ|| ಅರಳುಮಲ್ಲಿಗೆ ಪಾರ್ಥಸಾರಥಿಯವರು ಅರಬ್ ಹಾಗೂ ಯೂರೋಪ್ ರಾಷ್ಟ್ರಗಳಲ್ಲಿಯೂ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ಸಂದರ್ಭದಲ್ಲಿ ದಾಸ ಸಾಹಿತ್ಯದ ಮೇಲೆ ಉಪನ್ಯಾಸ ಹಾಗೂ ಕಲಾವಿದರಿಂದ ದಾಸವಾಣಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಶ್ರೀ ವಿದ್ಯಾಭೂಷಣರು, ಶ್ರೀ ಪುತ್ತೂರು ನರಸಿಂಹ ನಾಯಕ್ ಇವರು ದಾಸ ಸಾಹಿತ್ಯದ ಕೀರ್ತನೆಗಳನ್ನು ಕ್ಯಾಸೆಟ್ ಮುಖಾಂತರ ಮನೆ ಮನೆಗೆ ಮುಟ್ಟಿಸಿದ್ದರು. ಇತ್ತೀಚಿಗೆ ನಮ್ಮ ಭಾಗದವರೇ ಆದ ರಾಯಚೂರಿನ ಶ್ರೀ ಶೇಷಗಿರಿದಾಸ ಅವರು ದಾಸ ಸಾಹಿತ್ಯವನ್ನು ವಿಶ್ವದಾದ್ಯಂತ ತಮ್ಮ ಕಂಠಶ್ರೀ ಇಂದ ಮನೆಮಾತಾಗಿಸಿದ್ದಾರೆ.

ಅದರಂತೆ ಹಲವಾರು ಜನ ಹರಿದಾಸ ಸಾಹಿತ್ಯ ವಿದ್ವಾಂಸರೂ ಈ ಭಾಗದಿಂದ ಮೂಡಿ ಬಂದಿದ್ದಾರೆ. ಅವರಲ್ಲಿ ಪ್ರಮುಖರೆಂದರೆ. ಡಾ|| ಸ್ವಾಮಿರಾವಕುಲಕರ್ಣಿ, ಡಾ|| ಸುಮನ ಯಜುರ್ವೇದಿ, ಡಾ|| ಮಾನಕರಿ ಶ್ರೀನಿವಾಸಾಚಾರ್ಯ, ಡಾ|| ಶೀಲಾದಾಸ,ಡಾ|| ರಮಾ ಕಲ್ಲೂರಕರ್,ಡಾ|| ರಾಜಶ್ರೀ ಕಲ್ಲೂರಕರ್, ಡಾ|| ಮಧುಮತಿ ದೇಶಪಾಂಡೆ, ಶ್ರೀ ಪವನಕುಮಾರ ಗಂಗಾವತಿ, ಮೊದಲಾದವರು. ಒಟ್ಟಿನಲ್ಲಿ ಹೈದ್ರಾಬಾದ್ ಕರ್ನಾಟಕವು ಹರಿದಾಸ ಸಾಹಿತ್ಯದ ತವರು, ಅದರ ಕೇಂದ್ರ ಬಿಂದು ರಾಯಚೂರು ಜಿಲ್ಲೆ. ಅದರಲ್ಲೂ ಮಾನ್ವಿಗೆ ತುಂಬಾ ವೈಶಿಷ್ಟ್ಯ ಸ್ಥಾನವಿದೆ. ವಿಜಯದಾಸರು ಮತ್ತು ಜಗನ್ನಾಥ ದಾಸರನ್ನು ಕೊಟ್ಟ ಕೀರ್ತಿ ಮಾನ್ವಿಗೆ ಸಲ್ಲುತ್ತದೆ ಟಿಟಿಡಿ ಭಜನಾ ಮಂಡಳಿಗಳು ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ಇದನ್ನು ತುಂಬಾ ಶ್ರೀಮಂತಗೊಳಿಸುತ್ತಿವೆ.

ಮೈಸೂರು ವಿಶ್ವವಿದ್ಯಾಲಯವು ಡಾ||ಜಿ. ವರದರಾಜ ರಾವ್ ನೇತೃತ್ವದಲ್ಲಿ ಪ್ರಾರಂಭಿಸಿದ ದಾಸ ಸಾಹಿತ್ಯದ ಸಂಪಾದನಾ ಮತ್ತು ಪ್ರಕಟನಾ ಕಾರ್ಯ ಡಾ|| ಟಿ. ಎನ್ ನಾಗರತ್ನ ಅವರಿಂದ ಮುಂದುವರೆಯುತ್ತಿದೆ. ಅದರಂತೆ ಡಾ|| ಕೆ. ಎಮ್. ಕೃಷ್ಣರಾವ್ ಅವರು ಅರ್ಧ ಶತಮಾನದಲ್ಲಿ ಮಾಡಿದ ದಾಸ ಸಾಹಿತ್ಯ ಸಂಶೋಧನೆಯನ್ನು ಕಳೆದ ಮೂರು ದಶಕಗಳಿಂದ ಅವರ ಮಗ ಡಾ|| ಕೆ. ಹಂಪಿ ಕನ್ನಡ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ ಹಾಗೂ ಕೆಲ ಸಂಶೋಧನಾ ಮತ್ತು ಪ್ರಕಟಣಾ ಸಂಸ್ಥೆಗಳು ತುಂಬಾ ಶ್ಲಾಘನೀಯವಾದ ಕಾರ್ಯವನ್ನು ಮಾಡಿವೆ. ಇಂದಿಗೂ ಸಭೆ, ಸಮಾರಂಭ, ಭಜನೆ, ಜಾತ್ರೆ, ನವರಾತ್ರಿ, ಅಧಿಕಮಾಸ ಮೊದಲಾದ ಸಂದರ್ಭಗಳಲ್ಲಿ ಆಯಾ ಸ್ಥಳಗಳ ರಾಘವೇಂದ್ರ ಸ್ವಾಮಿಗಳವರ ಮಠ ಹಾಗೂ ಇತರೆ ಸಂಸ್ಥಗಳ ಆಶ್ರಯ ಪಡೆದು ಈ ಪರಂಪರೆ ಹೈದರಾಬಾದ್ ಕರ್ನಾಟಕದಲ್ಲಿ ಮುಂದುವರೆಯುತ್ತಿದೆ. ದಾಸವಾಣಿಯೇ ಜನವಾಣಿಯಾಗಿದೆ.

# ಗುರು ವಂದನಂ ಸಮರ್ಪಯಾಮಿ !

– ವೆಂಕಟರಾಘವನ್ .ಎಸ್.

ಹಿಂದೂ ಧರ್ಮದಲ್ಲಿ ತಾಯಿ, ತಂದೆ ಗುರು ಮತ್ತು ದೈವ ಎಂಬುವ ಗೌರವ ಸಂಪ್ರದಾಯವಿದೆ. ಮಾನವನಾಗಿ ಭುವಿಗೆ ಬರುವುದು ತಾಯಿ ಕೊಟ್ಟ ಜನ್ಮ, ತಾಯಿ ಮಗುವಿಗೆ ಮೊದಲ ಗುರು ಮತ್ತು ದೈವ ಸಮಾನ. ವಂಶವ ಬೆಳಗಲು ಮಗುವಿಗೆ ಪ್ರಾಣ ಕೊಟ್ಟು ಸಂಸಾರದಲ್ಲಿ ಸಂಘದಲ್ಲಿ ಸ್ಥಾನ ನೀಡುವ ತಂದೆ ಎರಡನೆಯ ಗುರುವು ಮತ್ತು ಪಿತೃದೇವರಾಗುವರು. ಪುಂಡರೀಕ ತನ್ನ ತಂದೆ ತಾಯಿ ಸೇವೆಯಲ್ಲಿ ಜೀವನ ಸಲ್ಲಿಸಿ ದೇವರನ್ನು ತಂದೆ ತಾಯಿಯಲ್ಲಿ ಕಂಡು ಹಗಲಿರುಳು ಸೇವೆ ಮಾಡಿ ಹರಿಯನ್ನು ಸಂತೋಷಪಡಿಸಿರುವ ಕಥೆ ಪುಂಡರೀಕ ಚರಿತ್ರೆಯಲ್ಲಿ ಕಾಣಬಹುದು. "ಪುಂಡರೀಕ ವರದ ಗೋವಿಂದ" ಎಂದು ಶ್ರೀ ಹರಿಯನ್ನು ನಮಸ್ಕರಿಸುವುದು, ಶ್ರೀ ಹರಿಯ ಕೃಪೆಗೆ ಪುಂಡರೀಕ ಪಾತ್ರರಾಗಿರುವುದು ಗಮನಿಸಬಹುದು. ತೈತ್ತಿರೀಯ ಉಪನಿಷತ್ ವರ್ಣಿಸಿದಂತೆ ಮಾತೃದೇವೋಭವ ಪಿತೃ ದೇವೋಭವ ಎಂದು ತಂದೆ ತಾಯಿಗಳನ್ನು ಮೊದಲ ದೇವರಾಗಿ ಆರಾಧಿಸಬೇಕು. ವಿದ್ಯೆ ಕಲಿಯಲು ಪ್ರವೀಣರಾಗಲು ಗುರುವಿನ ಮಾರ್ಗದರ್ಶನ ಅತ್ಯಗತ್ಯ.ವಿದ್ಯೆಯಿಂದ ಜ್ಞಾನ ಗುರುವಿನ ಮಾರ್ಗದರ್ಶನದಲ್ಲಿ ಧರ್ಮದ ದಾರಿ, ಭಕ್ತಿಯ ಪ್ರೇರಣೆಯಿಂದ ಭಗವಂತನ ಸೇವೆ ಮಾಡಿ ಕೊನೆಗೆ ಮುಕ್ತಿ ಪಡೆಯುವರು. "ಗುರೂಬ್ರಹ್ಮ ಗ್ರುರೂರ್ವಿಷ್ಣುಃ ಗುರೂರ್ದೇವೋ ಮಹೇಶ್ವರಃ ಗುರೂಃಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ಎನ್ನುವಂತೆ ಗುರು ಬ್ರಹ್ಮ ಸ್ವರೂಪ ಗುರು ವಿಷ್ಣು ಸ್ವರೂಪ ಗುರು ರುದ್ರ ದೇವರ ಸಮಾನ ಮತ್ತು ಗುರು ಸಾಕ್ಷಾತ್ ಪರಬ್ರಹ್ಮನೆಂದು ಶ್ಲೋಕ. ಗುರುವನ್ನು ಕಂಡರೆ ತ್ರಿಮೂರ್ತಿಗಳ ಕಂಡಂತೆ. ಗುರುವಿನ ಆಶೀರ್ವಾದವಿದ್ದರೆ ತ್ರಿಮೂರ್ತಿಗಳ ಆಶೀರ್ವಾದವಿದ್ದಂತೆ ಗುರುವಿನ ಮಾರ್ಗದರ್ಶನ ಅತ್ಯಗತ್ಯ . ಬ್ರಹ್ಮನಂತೆ ಜ್ಞಾನವ ಕೊಡುತ್ತಾ, ವಿಷ್ಣುವಿನಂತೆ ರಕ್ಷಣೆ ಮಾಡುತ್ತ, ಶಿವನಂತೆ ಅಜ್ಞಾನವನ್ನು ಕಳೆದು, ಮಾನವತಾ ಭಾವನೆ, ಸದ್ಗುಣ ಸಂಪನ್ನವನು ಹೊಂದಲು ದಾರಿ ತೋರುವರು ಗುರುಗಳು, ಗುರುಗಳು ಒಳ್ಳೆಯ ಗುಣಗಳ ಅಳವಡಿಕೆಯ ಬಗ್ಗೆ ಕಲಿಸಿ, ಜೀವನ ವಿಧಾನದ ಮಾರ್ಗದರ್ಶನ ಮಾಡುವರು. "ಗು ಕಾರೋ ಅಂಧಕಾರಸ್ಯ, ರುಕಾರೋತನ್ನಿರೋಧಕಃ ಗು ಅಂದರೆ ಕತ್ತಲು "ರು" ಅಂದರೆ ಕಳೆಯುವವರು. ಗುರುಗಳು ಅಜ್ಞಾನದ ಕತ್ತಲೆಯನ್ನು ಓಡಿಸಿ, ಜ್ಞಾನ ಜ್ಯೋತಿಯನ್ನು ಬೆಳಗುವವರು. ಗುರುಗಳು ಭಗವತ್ ಸಮಾನ!



## ವೇದವ್ಯಾಸರು

ಅಷಾಢ ಶುದ್ಧ ಪೂರ್ಣಿಮ ದಿನ ಶ್ರೀ ವ್ಯಾಸರ ಜನನ ವಾಯಿತು. ಶ್ರೀ ವ್ಯಾಸರ ತಂದೆ ತಾಯಿ ಪರಾಶರ ಮುನಿ ಮತ್ತು ಸತ್ಯವತಿ ದೇವಿ. ಜನ್ಮ ಯಮುನಾ ನದಿಯ ಒಂದು ದ್ವೀಪದಲ್ಲಿ, ವ್ಯಾಸರು ವೇದವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿದ್ದರಿಂದ

ಅವರಿಗೆ ವೇದವ್ಯಾಸ ಎಂದೂ ಕಪ್ಪುವರ್ಣದವರಾಗಿ ಯಮುನಾ ನದಿ ದ್ವೀಪದಲ್ಲಿ ಹುಟ್ಟಿದುದರಿಂದ ಕೃಷ್ಣದ್ವೈಪಾಯನ ಬದರಿಕಾಶ್ರಮದಲ್ಲಿ ನೆಲಸಿದುದರಿಂದ ಬಾದರಾಯಣ ಎಂದೂ ತಾಯಿ ಸತ್ಯವತಿಗೆ ವಾಸವಿ ಎಂಬ ಹೆಸರಿದ್ದು ವಾಸವಿಯ ಮಗನಾದ್ದರಿಂದ ವಾಸವೇಯ ಎಂಬ ಹೆಸರೂ ಇದೆ. "ಬದರ್ಯಾಮ್ ಅಯನಮ್ ಅಸ್ಯ ಇತಿ ಬಾದರಾಯಣಃ". ಬದರೀ ಕ್ಷೇತ್ರದಲ್ಲಿ ವಾಸಸ್ಥಾನವೂ ಇರುವು ದರಿಂದ ಬಾದರಾಯಣರು. ಶ್ರೀ ವ್ಯಾಸರು ಬಾಲ್ಯದಲ್ಲೇ ತಪಸ್ಸಿಗೆ ಕಾಡಿಗೆ ಹೋಗಲು ತಮ್ಮ ಇಚ್ಛೆಯನ್ನು ತಂದೆ ತಾಯಿಗಳಿಗೆ ತಿಳಿಸಿದರು. ಶ್ರೀ ವ್ಯಾಸರ ತಂದೆ ತಾಯಿ ತಪಸ್ಸಿಗೆ ಹೋಗುವುದಕ್ಕೆ ಒಪ್ಪುವುದಿಲ್ಲ. ಶ್ರೀ ವ್ಯಾಸರು ತಂದೆ ತಾಯಿ ನೆನೆದಾಗ ಅವರ ಬಳಿ ಬರುವ ಆಶ್ವಾಸನೆ ನೀಡಿದರು. ಶ್ರೀ ವ್ಯಾಸರು ಬಾಲ್ಯದಲ್ಲೇ ತಪಸ್ಸನ್ನು ಆಚರಿಸುತ್ತಾ ಬದರಿಕಾಶ್ರಮದಲ್ಲಿ ದೊಡ್ಡವರಾಗಿ ವ್ಯಾಸ ಮಹರ್ಷಿಗಳಾದರು.

ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃಪೌತ್ರಮಕಲ್ಮಷಂ।

ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಂ॥

ವಸಿಷ್ಠ ಋಷಿಗಳ ಮರಿಮಗ, ಶಕ್ತಿ ಋಷಿಗಳ ಮೊಮ್ಮಗ, ಪರಾಶರ ಋಷಿಗಳ ತನಯ ಮತ್ತು ಶುಕ ಋಷಿಗಳ ತಂದೆಯಾಗಿರುವರೋ ಅಂತಹ ತಪೋನಿಧಿ ವ್ಯಾಸ ಮಹರ್ಷಿಗಳಿಗೆ ನಾನು ನಮಸ್ಕರಿಸುತ್ತೇನೆ।

ಪುರಾಣಗಳಲ್ಲಿ ಇವರನ್ನು ವಿಷ್ಣುವಿನ ಒಂದು ಅವತಾರವೆಂದೇ ಪರಿಗಣಿಸಲಾಗಿದೆ.

ವ್ಯಾಸಾಯ ವಿಷ್ಣು ರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮ ನಿಧಯೇ ವಾಸಿಷ್ಠಾಯ ನಮೋ ನಮಃ॥

ವಿಷ್ಣುರೂಪದ ವ್ಯಾಸರು ಅಥವಾ ವ್ಯಾಸರೂಪದಲ್ಲಿರುವ ವಿಷ್ಣುವಿಗೆ (ಭಗವಾನ್ ವೇದವ್ಯಾಸ ಋಷಿಗಳು ಪ್ರತ್ಯಕ್ಷ ವಿಷ್ಣು ಸ್ವರೂಪ) ನಾನು ನಮಸ್ಕಾರ ಮಾಡುತ್ತೇನೆ. ವಸಿಷ್ಠರ ವಂಶಸ್ಥರಾದ ಬ್ರಹ್ಮನಿಧಿ ವ್ಯಾಸರಿಗೆ ನನ್ನ ನಮಾಸ್ಕಾರಗಳು!

ಪಾರಾಶರ್ಯಂ ಪರಮಪುರುಷಂ ವಿಶ್ವದೇವೈ ಕಯೋನಿಂ
ವಿದ್ಯಾವಂತಂ ವಿಪುಲಮತಿದಂ ವೇದವೇದಾಙ್ಗವೇದ್ಯಮ್ ।
ಶಶ್ವಚ್ಛಾತಾಂ ಶಮಿತವಿಷಯಂ ಶುದ್ಧತೇಜೋ ವಿಶಾಲಂ
ವೇದವ್ಯಾಸಂ ವಿಗತಶಮಲಂ ಸರ್ವದಾಹಂ ನಮಾಮಿ ॥

ಪರಾಶರ ಮುನಿಗಳ ಪುತ್ರ ಪರಮ ಪುರುಷ, ವಿಶ್ವ ಮತ್ತು ದೇವರುಗಳ ಜ್ಞಾನದ ಉತ್ಪತ್ತಿಸ್ಥಾನ,ವಿದ್ಯೆ ಮತ್ತು ವಿಫುಲ ಬುದ್ಧಿಯನ್ನು ಹೊಂದಿರುವ ವೇದ ಮತ್ತು ವೇದಾಂಗಗಳನ್ನು ತಿಳಿದಿರುವ, ಚಿರಂಜೀವಿ, ಶಾಂತ ಮೂರ್ತಿ ಹಾಗೂ ವಿಷಯಗಳ ಮೇಲೆ ವಿಜಯವನ್ನು ಹೊಂದಿರುವ, ಶುದ್ಧ ತೇಜೋಮಯ ಪ್ರಕಾಶಿತರಾದ, ಜ್ಞಾನವಂತರಾಗಿರುವ ವೇದವ್ಯಾಸರಿಗೆ ನಾನು ಸದಾ ಸರ್ವದಾ ಶರಣಾಗಿದ್ದೇನೆ. ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ "ಮುನೀನಾಮ್ಅಪ್ಯಹಂ ವ್ಯಾಸಃ" ಮುನಿಗಳಲ್ಲಿ ನಾನು ವ್ಯಾಸ ಎಂದು ನುಡಿದಿದ್ದಾರೆ.

### ವೇದವಿಭಜನೆ

ಹಿಂದೂ ಸಂಸ್ಕೃತಿಯ ಮೂಲ ಸಾಹಿತ್ಯಗಳೆಂದರೇ ವೇದಗಳು ಉಪನಿಷತ್ತುಗಳು, ಬ್ರಾಹ್ಮಣಗಳು, ಸ್ಮೃತಿಗಳು ಬ್ರಹ್ಮ ಸೂತ್ರಗಳು, ಭಗವದ್ಗೀತೆ, ರಾಮಾಯಣ, ಮಹಾಭಾರತ ಮಹಾಕಾವ್ಯ ಹದಿನೆಂಟು ಪುರಾಣಗಳು, ಭಾಷ್ಯಗಳು ಮುಂತಾದವು. ಇವೆಲ್ಲಾ ಸಂಸ್ಕೃತ ಭಾಷಾ ಸಾಹಿತ್ಯಗಳಾಗಿವೆ.ಸನಾತನ ಧರ್ಮದ ಮೂಲ ಆಧಾರ ವೇದಗಳು. ಇಹಲೋಕದಲ್ಲಿಯ ಅಭಿವೃದ್ಧಿ ಸಮುನ್ನತಿಗಳಿಗೆ ಹಾಗೂ ಪರದಲ್ಲಿಯ ನಿಶ್ರೇಯಸ್ಸಿಗೆ ಸಾಧನವಾಗುವುದು ಧರ್ಮ, ವಿದ್ ಎಂಬ ಧಾತುವಿನಿಂದ ವೇದ ಎಂಬ ಪದ ಬಂದಿದೆ - ವಿದ್ ಎಂದರೆ ಜ್ಞಾನ, ತಿಳುವಳಿಕೆ ಎನ್ನುವ ಅರ್ಥ.ವೇದಗಳಲ್ಲಿ ಅಪಾರವಾದ ಜ್ಞಾನಬೀಜರೂಪದ ಮಂತ್ರಗಳಲ್ಲಿ ನಿಕ್ಷಿಪ್ತವಾಗಿದೆ. ವೇದವೆಂದರೆ ಶಾಶ್ವತ ಸ್ವ, ಅಪೂರ್ವ ಜ್ಞಾನಪ್ರದ ಮತ್ತು ಜ್ಞಾನ ಸಂಪದ, ಹಿರಣ್ಯಗರ್ಭ ಸೃಷ್ಟಿಗಾಗಿ ನಾನಾ ವಿಧವಾಗಿ ತಪಸ್ಸು ಮಾಡುತ್ತಿದ್ದರು. ಆಗ ಅವರ ಹೃದಯದಿಂದ ಆಕಾರ, ಉಕಾರ, ಮಕಾರ ರೂಪವಾದ ಓಂಕಾರ ಸೃಷ್ಟಿ ಆಯಿತು. ಓಂಕಾರದಿಂದ ಅಕ್ಷರ ಸಮಾಮ್ನಾಯ ಆವಿರ್ಭವಿಸಿತು. ತದನಂತರ ಸಕಲ ವೇದ ರಾಶಿಯ ಸಾಕ್ಷಾತ್ಕಾರವಾಯಿತು. ವೇದಗಳೆಲ್ಲ ಪ್ರವೃತ್ತಿ, ನಿವೃತ್ತಿ ಧರ್ಮದ ಬೋಧನೆಯ ಸಾಧನ, ಜ್ಞಾನನಿಧಿ. ವೇದ ಎಂದರೆ ಜ್ಞಾನ ಅಥವಾ ವಿದ್ಯೆ ಎಂದು ಅರ್ಥ ಹೇಳುವರು. ವಿದ್ಯೆ ಎಂದಾಗ ಪರಾ ವಿದ್ಯೆ ಅಪರಾ ವಿದ್ಯೆ ಎಂದು ಎರಡು ವಿಂಗಡಗಳಿವೆ. ಪರಾ ವಿದ್ಯೆಯನ್ನು ಜ್ಞಾನಕಾಂಡವೆಂದು, ಅಪರಾವಿದ್ಯೆಯನ್ನು ಕರ್ಮ ಕಾಂಡವೆಂದು ತಿಳಿಸಲಾಗಿದೆ. ತದನಂತರ ಗುರುಶಿಷ್ಯ ಪರಂಪರೆಯಿಂದ ಜ್ಞಾನ ಸಾಗರ ಮುಂದೆ ಹರಿಯಿತು. ಮೊಟ್ಟ ಮೊದಲು ವೇದಾರ್ಥಗಳನ್ನು ತಿಳಿಸಿರುವ ಮಹಾನುಭಾವ ಶ್ರೀ ಸಾಯಣಾಚಾರ್ಯರು. ಆಚಾರ್ಯರು ವೇದ ಶಬ್ದಕೆ ತಮ್ಮ ತೈತ್ತಿರೀಯ ಸಂಹಿತಾ ಭಾಷ್ಯದಲ್ಲಿ ವಿವರಿಸಿದ್ದಾರೆ!

ಇಷ್ಟಪ್ರಾಪ್ತ್ಯನಿಷ್ಠ ಪರಿಹಾರಯೋ ರಲೌಕಿಕಂ

ಉಪಾಯಂ ಯೋಗ್ರಂಥೋ ವೇದಯತಿ ಸವೇದಃ।

ಅಲೌಕಿಕಪದೇನ ಪ್ರತ್ಯಕ್ಷಾನುಮಾನೇ ವ್ಯಾವರ್ತ್ಯೇ ತೇ ॥

ವೇದಗಳಿಗೆ ನಿಗಮ, ಶ್ರುತಿ, ಮತ್ತು ಆಮ್ನಾಯ ಎನ್ನುವ ಹೆಸರೂ ಇವೆ. ಅಭಿಮತವಾದ ಅಥವಾ ಇಷ್ಟವಾದ ಪ್ರಾಪ್ತಿ ಸಂಪಾದಿಸಲು ಅನಭಿಮತವಾದ ಪರಿಹಾರ ಸಾಧಿಸಲು ಅಲೌಕಿಕ ಉಪಾಯ ಬೋಧಿಸುವ ಗ್ರಂಥವೇ ವೇದ! ಮೊದಲು ಶೃತಿ, ಸ್ಮೃತಿಗಳಿಂದ ಗುರುಶಿಷ್ಯರಿಗೆ ಹರಿದು ಬಂದ ಈ ಜ್ಞಾನಸುಧೆ ನಂತರದಲ್ಲಿ ಸಂಸ್ಕೃತ ಸಾಹಿತ್ಯವಾಗಿ ದೇವನಾಗರಿ ಲಿಪಿಯಲ್ಲಿ ಸಂಪನ್ನಗೊಂಡಿತು.

ಅಖಂಡ ವೇದವನ್ನು ಒಗ್ಗೂಡಿಸಿ ಅದನ್ನು ನಾಲ್ಕು ವಿಭಾಗವಾಗಿ ವಿಂಗಡಿಸಿ ವ್ಯವಸ್ಥಿತವಾಗಿ ಸಂರಕ್ಷಿಸಿದ ಕೀರ್ತಿ

ಶ್ರೀ ವೇದವ್ಯಾಸರಿಗೆ ಸಲ್ಲುತ್ತದೆ. ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವಣ ನಾಲ್ಕು ವೇದಗಳು, ಶ್ರೀ ವೇದವ್ಯಾಸರು ತಮ್ಮ ಶಿಷ್ಯರಾದ ಪೈಲ, ವೈಶಂಪಾಯ, ಜೈಮಿನಿ ಮತ್ತು ಸುಮಂತರಿಗೆ ಒಂದೊಂದು ವೇದ ಅಧ್ಯಯನ ಮಾಡಲು ನಿಯಮಿಸಿದರು.

ಅನಾದಿ ಕಾಲದಿಂದ ನಿರ್ಧಾರಿತವಾದ ಗ್ರಂಥ ವೇದ. ಗುರುವುನಿಂದ ಶಿಷ್ಯರು ಕೇಳುವ ದಿವ್ಯವಾಣಿಯನ್ನು ಶ್ರುತಿ ಮತ್ತು ಆವೃತ್ತಿಯಿಂದ ಅಧ್ಯಯನ ಮಾಡುವುದನ್ನು ಆಮ್ನಾಯ ಎಂದು ಹೇಳುವರು. ವೇದದಲ್ಲಿ ಮಂತ್ರ, ಬ್ರಾಹ್ಮಣ, ಅರಣ್ಯಕ ಮತ್ತು ಉಪ ನಿಷತ್ ಭಾಗಗಳು ಇರುವವು. ಮಂತ್ರ ಭಾಗವನ್ನು ವಿವರಣೆ ಕೊಡುವುದನ್ನು ಬ್ರಾಹ್ಮಣಗಳು ಎನ್ನುವರು. ಉಪಾಸನೆ ಬಗ್ಗೆ ತಿಳಿಸುವ ಭಾಗವನ್ನು ಅರಣ್ಯಕ ಎನ್ನುವರು. ತುದಿ ಭಾಗವನ್ನು ವೇದಾಂತ ಅಥವಾ ಉಪನಿಷತ್ ಎಂದು ಕರೆಯುವರು.

### ಅಷ್ಟಾದಶ ಪುರಾಣಗಳು

ಪುರಾ ವಿಷಯಾನ್ ನಯತೀತಿ ಪುರಾಣಂ! ಪೂರ್ವ ಸಂಪ್ರದಾಯವಾದ ಧರ್ಮಾದಿ ವಿಷಯಗಳನ್ನು ತಿಳಿಸುವುದು ಪುರಾಣ. ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬ್ರುಂಹ ಯೇತ್ ! ಇತಿಹಾಸ ವೇದ ಧರ್ಮಗಳನ್ನು ತಿಳಿಸಿ ವಿಸ್ತರಿಸುವ ಗ್ರಂಥಗಳು ಪುರಾಣಗಳು. ಪುರಾಣಗಳು ತತ್ವನಿರೂಪಣೆ ಮತ್ತು ಇತಿಹಾಸ ಕಥನ ಎರಡನ್ನು ಮಾಡುತ್ತವೆ. ಕಥಾ ರೂಪದಲ್ಲಿ ನಿರೂಪಿತವಾಗಿರುವುದರಿಂದ ಹೆಚ್ಚು ಜನಪ್ರಿಯವಾಗಿವೆ.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನು ಚರಿತಂ ಚೇತಿ ಪುರಾಣಂ ಪಂಚಲಕ್ಷಣಂ ॥

ಆದಿ ಸೃಷ್ಟಿ ಬ್ರಹ್ಮದೇವರಿಂದ ತದನಂತರ ನಡೆದ ಸೃಷ್ಟಿ ರಾಜ, ಋಷಿ, ವಂಶಗಳ ವಿವರ, ಸ್ವಾಯಂಭುವ ಚತುರ್ದಶ ಮನ್ವಂತರಗಳು ಸೇರಿದ ಐದು ಲಕ್ಷಣಗಳನ್ನು ಹೊಂದಿದ ಗ್ರಂಥ ಪುರಾಣ. ವೇದವ್ಯಾಸರು ಅಷ್ಟಾದಶ (ಹದಿನೆಂಟು) ಪುರಾಣ ಗಳನ್ನು ರಚಿಸಿದ್ದಾರೆ. ಬ್ರಹ್ಮಪುರಾಣ ವಿಷ್ಣುಪುರಾಣ, ಪದ್ಮ ಪುರಾಣ, ವಾಯುಪುರಾಣ, ಭಾಗವತಪುರಾಣ, ನಾರ ದೀಯಪುರಾಣ, ಮಾರ್ಕಂಡೇಯ ಪುರಾಣ, ಅಗ್ನಿ ಪುರಾಣ, ಭವಿಷ್ಯಪುರಾಣ, ಬ್ರಹ್ಮವೈವರ್ತಪುರಾಣ, ಲಿಂಗಪುರಾಣ, ವರಾಹಪುರಾಣ, ಸ್ಕಂದಪುರಾಣ, ವಾಮನಪುರಾಣ, ಕೂರ್ಮಪುರಾಣ, ಮತ್ಸ್ಯಪುರಾಣ, ಗರುಡ ಪುರಾಣ ಮತ್ತು ಬ್ರಹ್ಮಾಂಡಪುರಾಣ.

### ಮಹಾಭಾರತ ರಚನೆ

ವೇದಗಳಲ್ಲಿ ಪ್ರತಿಪಾದಿತವಾದ ತತ್ವಗಳನ್ನು ಪಂಡಿತರು ಮಾತ್ರ ಅರಿತುಕೊಳ್ಳಲು ಸಾಧ್ಯ. ಪಾಮರರಾದ ಲೋಕದ ಸಾಮಾನ್ಯ ಜನರಿಗೆ ಇವುಗಳನ್ನು ತಿಳಿದು ತಮ್ಮ ಆತ್ಮೋನ್ನತಿ ಯನ್ನು ಸಾಧಿಸಿಕೊಳ್ಳುವುದು ಶಕ್ಯವಾಗಲಾರದು. ಆದ್ದರಿಂದಲೇ ಇತಿಹಾಸ ಪುರಾಣ ಪುಣ್ಯಕಥೆಗಳ ಮೂಲಕ ಉದಾಹರಣ, ದೃಷ್ಟಾಂತಗಳ ನೆರವಿನಿಂದ ವೇದಾರ್ಥಗಳನ್ನು ವಿಸ್ತರಿಸಿ ಹೇಳ ಬೇಕು ಎಂಬುದು ಪ್ರಾಜ್ಞರ ಹೃದ್ಗತ. ಜನತೆಗೆ ಯತೋ ಧರ್ಮಃ ತತೂ ಜಯಃ ಎಂಬ ನೀತಿಯನ್ನು ಮನವರಿಕೆ ಮಾಡಿಕೊಡ ಬೇಕೆಂಬುದು ವ್ಯಾಸರ ಅಭಿಮತ. ಈ ಉಭಯ ಸದಾಶಯಗಳ ಪೂರ್ತಿಗಾಗಿ ಮಹರ್ಷಿ ವೇದವ್ಯಾಸರು ರಚಿಸಿದ ಮಹಾಕಾವ್ಯ ಪಂಚಮವೇದವೆಂದು ಪ್ರಸಿದ್ಧವಾಗಿದೆ ಮಹಾಭಾರತ ಗ್ರಂಥ. ಮಹರ್ಷಿ ವೇದವ್ಯಾಸರು ಮಹಾಭಾರತವನ್ನು ಬರೆಯಲು ಗಣಪತಿಯನ್ನು ಆಶ್ರಯಿಸಿದರು. ನಿಲ್ಲಿಸದೆ ಹೇಳಿದರೆ ಬರೆಯುವೆ ಎಂದಾಗ ವ್ಯಾಸರು ಹೇಳುತ್ತಾ ನಿಲ್ಲಿಸದೆ ಪೂರ್ಣ ಭಾರತವನ್ನು ಗಣಪತಿ ಸುನಾಯಾಸವಾಗಿ ಬರೆದರು. ಘಂಟವ ಹಿಡಿದು ವೇಗದಿ ಬರೆಯುವದರಲ್ಲಿ ಗಣನಾಥರದೇ ಅಗ್ರಸ್ಥಾನ. ವಾಸು ದೇವ ಶ್ರೀ ಕೃಷ್ಣನ ಮಹಿಮೆ, ಕೌರವ ಪಾಂಡವರ ಜೀವನ, ಧರ್ಮರಕ್ಷಣೆಯ ಹೊಣೆ ಹೊತ್ತ ಶ್ರೀ ಕೃಷ್ಣ ಪರಮಾತ್ಮನ ಲೀಲೆ ಮತ್ತು ಧರ್ಮವೇ ಗೆಲ್ಲುವುದು (ಧರ್ಮೋರಕ್ಷತಿ ರಕ್ಷಿತಃ) ಎನ್ನುವ ಸೂಚನೆ ಗ್ರಂಥದಲ್ಲಿ ಸೂಕ್ತವಾಗಿ ರಚಿಸಿದ್ದಾರೆ. ಮಹಾಭಾರತ ಸಾಧಕವಾದ ಜ್ಞಾನ ಭಕ್ತಿ, ಕರ್ಮ ಯೋಗಗಳನ್ನೂ ಪ್ರತಿ ಪಾದಿಸುವ ಐದು ಮುಖ್ಯ ರತ್ನಗಳನ್ನು ಹೊಂದಿದೆ. ಭಗವದ್ಗೀತೆ, ವಿಷ್ಣು ಸಹಸ್ರನಾಮ, ಭೀಷ್ಮಸ್ವರಾಜ, ಅನುಸ್ಮೃತಿ ಮತ್ತು ಗಜೇಂದ್ರ ಮೋಕ್ಷ ಐದು ರತ್ನಗಳು.

ನಮೋಸ್ತು ತೇ ವ್ಯಾಸ ವಿಶಾಲಬುದ್ಧೇ ಫುಲ್ಲಾರವಿಂದಾಯತಪತ್ರನೇತ್ರ ।
ಯೇನ ತ್ವಯಾ ಭಾರತತೈಲಪೂರ್ಣಃ ಪ್ರಜ್ವಾಲಿತೋ ಜ್ಞಾನಮಯಪ್ರದೀಪಃ॥

ಮಹಾಭಾರತರೂಪದತೈಲದಿಂದ ತುಂಬಿರುವ ಜ್ಞಾನ ಮಯ ದೀಪವನ್ನು ಪ್ರಜ್ವಲಿಸುತ್ತಿರುವ ವಿಶಾಲ ಬುದ್ಧಿಯನ್ನು ಹೊಂದಿರುವ ವ್ಯಾಸ ಮಹರ್ಷಿಗಳಿಗೆ ನನ್ನ ನಮಸ್ಕಾರಗಳು.

### ಬ್ರಹ್ಮ ಸೂತ್ರಗಳು

ಭಗವಂತನ ಮಹಿಮೆ ಮತ್ತು ಮಹತ್ವವನ್ನು ಅರಿಯಲು ವೇದಸಾರವನ್ನು ತಿಳಿದುಕೊಳ್ಳಲು ಅತ್ಯಗತ್ಯ. ಶ್ರೀಮನ್ನಾರಾ ಯಣ ವೇದವ್ಯಾಸರ ಅವತಾರದಲ್ಲಿ ವೈದಿಕ ಜ್ಞಾನವನ್ನು ಸೂತ್ರ ಗಳ ರೂಪದಲ್ಲಿ ಸಂಕ್ಷಿಪ್ತಗೊಳಿಸಿದ್ದಾರೆ. ಸೂತ್ರ ಎಂದರೆ ನಿಯಮ. ಈ ನಿಯಮಗಳ ಒಂದು ಅಥವಾ ಎರಡು ಪದಗಳಲ್ಲಿ ಗಾಢವಾದ ಜ್ಞಾನವು ಅಡಗಿರುತ್ತದೆ. ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಯನ್ನು ಸೇರಿಸಿ ಪ್ರಸ್ಥಾನ ತ್ರಯಗಳೆಂದು ಹೇಳುವರು. ಬ್ರಹ್ಮಸೂತ್ರಗಳನ್ನು ರಚಿಸಿದವರು ಶ್ರೀ ವ್ಯಾಸ ಮಹರ್ಷಿ. ಇದನ್ನು ವೇದಾಂತ ಸೂತ್ರಗಳೆಂದೂ ಕರೆಯುತ್ತಾರೆ. ಸೂತ್ರವೆಂದರೆ ಸಾರವತ್ತಾದ ವಿಷಯವನ್ನು ಸಂದೇಹ ಬಾರದೇ ಕಡಿಮೆ ಅಕ್ಷರಗಳಲ್ಲಿ ತಿಳಿಸುವುದು. ಉಪನಿಷತ್ತುಗಳಲ್ಲಿ ಹೇಳಿ ರುವ ಪರಮತತ್ವಕ್ಕೆ 'ಬ್ರಹ್ಮ' ಎಂಬ ಹೆಸರಿರುವುದರಿಂದ ಅದೇ ವಿಷಯವನ್ನು ಹೇಳುವ ವೇದಾಂತ ಸೂತ್ರಗಳನ್ನು ಬ್ರಹ್ಮ ಸೂತ್ರವೆಂಬ ಹೆಸರಿನಿಂದಲೂ ಕರೆಯುತ್ತಾರೆ. ಈ ಸೂತ್ರವು

ಉಪನಿಷತ್ತುಗಳ ತತ್ವಗಳು ಮತ್ತು ಆಧ್ಯಾತ್ಮದ ಕಲ್ಪನೆಗಳನ್ನು ಶಿಸ್ತು ಬದ್ಧವಾಗಿ ಮತ್ತು ಸಂಕ್ಷಿಪ್ತವಾಗಿ ತಿಳಿಸುತ್ತದೆ. ಬ್ರಹ್ಮ ಸೂತ್ರಗಳನ್ನು ವೇದಾಂತ ಸೂತ್ರಗಳೆಂದೂ ವೇದಾಂತ ಮೀಮಾಂಸೆ ಎಂದೂ, ಶಾರೀರಿಕ ಮೀಮಾಂಸೆ ಎಂದೂ ವೇದಾಂತ ದರ್ಶನವೆಂದೂ ಕರೆಯುತ್ತಾರೆ. ಈ ವೇದಾಂತ ಸೂತ್ರಗಳು-'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಮೊದಲನೆಯ ಸೂತ್ರದಿಂದ ಶುಭಾರಂಭ ಆಗುವುವು. ಅಥ ಎಂದರೆ ಈಗ, ಅಥಃ ಎಂದರೆ ಇದಾದ ನಂತರ, ಬ್ರಹ್ಮ ಎಂದರೆ ಪರಮಸತ್ಯ , ಜಿಜ್ಞಾಸ ಎಂದರೆ ಪ್ರಶ್ನಿಸಿಕೊಳ್ಳಬೇಕು. ಮನುಷ್ಯ ಜನ್ಮದಲ್ಲಿ ವ್ಯಕ್ತಿಯೊಬ್ಬನು ತನ್ನ ಅಸ್ತಿತ್ವ ಮತ್ತು ಭಗವಂತನ ಬಗ್ಗೆ ತಿಳಿದುಕೊಳ್ಳಬೇಕು ಎಂಬುದು ಇದರ ಅರ್ಥವಾಗಿದೆ. ನಷ್ವರ ಕಾಯ ನಂಬದಿರಯ್ಯ! ಈಶ್ವರನೆಂದೂ ಮರೆಯದಿರಯ್ಯ! ಅಶಾಶ್ವತವಾದ ಈ ಶರೀರವನ್ನು ನಂಬದಿರು. ಸರ್ವ ಕಾಲದಲ್ಲೂ ಶಾಶ್ವತ ಭಗವಂತ. ಭಗವಂತನ ಬಗ್ಗೆ ತಿಳಿದುಕೊಳ್ಳಬೇಕು ಎನ್ನುವ ಸೂಚನೆ!

### ಶ್ರೀ ವ್ಯಾಸ ಮಹರ್ಷಿಗಳ ಬೋಧನೆ

ಶ್ರೀ ವ್ಯಾಸರು ಶಿಷ್ಯರಿಗೆ ಶಾಸ್ತ್ರ,ಧರ್ಮ, ವೇದ ಮುಂತಾದ ಬೋಧನೆ ಮಾಡುತ್ತಲಿದ್ದರು. ಇದರಲ್ಲಿ ಒಂದು ಮುಖ್ಯ ಅಂಶ ಭಗವಂತನ ಐದು ಆವಾಸ ಸ್ಥಾನಗಳು, ಐದು ಧರ್ಮಗಳ ವ್ಯಾಖಾನ ಮಾಡಿ ತಿಳಿಸಿದರು. ಈ ಐದರಲ್ಲಿ ಒಂದನ್ನಾದರೂ ಅನುಷ್ಠಾನ ಮಾಡಿದರೆ ಮನುಷ್ಯನು ಸತ್ಕೀರ್ತಿ, ಸ್ವರ್ಗ ಹಾಗೂ ಮೋಕ್ಷವನ್ನು ಪಡೆಯಬಲ್ಲನು ಎಂದು ನುಡಿದರು.

### ತಂದೆ ತಾಯಿ ಸೇವೆ

ತಂದೆ ತಾಯಿಯ ಸೇವೆ ಮಾಡುವ ಮನುಷ್ಯನಿಗೆ ನೂರಾರು ಯಜ್ಞ ಹಾಗೂ ತೀರ್ಥಯಾತ್ರೆ ಮಾಡಿದ ಫಲ ಸಿಗುವುದು. ಸೇವೆ ಮತ್ತು ಸದ್ಗುಣಗಳಿಂದ ತಂದೆ ತಾಯಿ ಸಂತುಷ್ಟರಾದರೆ, ಆ ಪುತ್ರನಿಗೆ ಅನುದಿನ ಗಂಗಾ ಸ್ನಾನ ಮಾಡಿದ ಫಲ.ಮಾತೆಯು ಸರ್ವತೀರ್ಥಮಯಿ ಮತ್ತು ಪಿತಾ ಸಂಪೂರ್ಣ ದೇವತೆಗಳ ಸ್ವರೂಪರಾಗಿದ್ದರೆ. ಶ್ರೀ ರಾಮಚಂದ್ರ ಪ್ರಭು ಪಿತೃ ಭಕ್ತಿ, ಮಾತೃ ಭಕ್ತಿ, ಗೌರವ ಮರ್ಯಾದೆಯ ಗುಣನಿಧಿ, ಸದ್ಗುಣಸಾಂದ್ರ ಶ್ರೀ ರಾಮಚಂದ್ರಪ್ರಭು. ಮಾನವನ ಜೀವನಕೆ ಶ್ರೀ ರಾಮಚಂದ್ರ ಪ್ರಭು ಆದರ್ಶ ದೇವರು. ಪುಂಡರೀಕ ತನ್ನ ತಂದೆ ತಾಯಿಯ ಸೇವೆ ಮಾಡಿ ಶ್ರೀ ಹರಿಯನ್ನು ಮೆಚ್ಚಿಸಿದ.ಗಣಪತಿ ತಂದೆ ತಾಯಿಗಳಾದ ಪಾರ್ವತಿ ಪರಮೇಶ್ವರರಿಗೆ ಪ್ರದಕ್ಷಿಣೆ ಮಾಡಿ ಭೂ ಪ್ರದಕ್ಷಿಣೆ ಫಲ ಪಡೆದರು.

### ಪತಿ ಸೇವೆ

ಮದುವೆಯನಂತರ ಪತ್ನಿಗೆ ಪತಿಯೇ ಸರ್ವಸ್ವ, ಪತಿ ಸೇವೆ ಮಾಡುವುದರಿಂದ ಸಕಲ ಪುಣ್ಯ ಲಭ್ಯವಾಗುವುದು. ಇಲ್ಲಿ ರಾಮಾಯಣವನ್ನು ಸ್ಮರಿಸಬಹುದು. ಜನಕ ಮಹಾರಾಜರ ಪುತ್ರಿ ಜಾನಕಿ. ಸಕಲ ಐಶ್ವರ್ಯ ಭೋಗ ಭಾಗ್ಯದಿಂದ ಬೆಳೆದವರು, ಪಿತೃ ವಾಕ್ಯ ಪರಿಪಾಲನೆಗಾಗಿ ಅರಣ್ಯಕೆ ತೆರಳಿದಾಗ ಸೀತಾ ಮಾತೆ ಶ್ರೀರಾಮಚಂದ್ರ ಪ್ರಭುವಿನ ಜೊತೆ ಅರಣ್ಯಕ್ಕೆ ತೆರಳಿದರು. ಸದಾ ಶ್ರೀ ರಾಮಚಂದ್ರಪ್ರಭುವಿನ ಸೇವೆ ಮಾಡುತ್ತಿದ್ದರು. ಜಗನ್ಮಾತ ಸೀತಾದೇವಿ ಜಗತ್ಪಿತ ಶ್ರೀ ರಾಮಚಂದ್ರಪ್ರಭು ಮಾನವಾಳಿಗೆ ಸದಾ ಆದರ್ಶ.

### ಎಲ್ಲರಲ್ಲಿ ಸಮಾನತೆಯ ಭಾವನೆ

ಜಗತ್ತೆಲ್ಲ ಭಗವಂತನ ಸೃಷ್ಟಿ. ಸಕಲ ಪ್ರಾಣಿ, ಪಕ್ಷಿ, ಜೀವ ರಾಶಿ ಭಗವಂತನ ಸೃಷ್ಟಿ.ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡಬೇಕು.

### ಮಿತ್ರ ದ್ರೋಹ ಮಾಡಬಾರದು

ಮೈತ್ರಿ ಬಂಧ ಒಂದು ಅನ್ಯೋನ್ಯವಾದ ಪವಿತ್ರ ಬಂಧ. ನಂಬಿದ ಮಿತ್ರರನ್ನು ಮೋಸ ಮಾಡಬಾರದು ದಾನ ಕರ್ಣ ತನ್ನ ಮೈತ್ರಿ ಬಂಧ ಮತ್ತು ಮಾಡಿದ ಪ್ರತಿಜ್ಞೆಗಾಗಿ ಕೊನೆ ಉಸಿರು ಇರುವವರೆಗೂ ಮಿತ್ರನ ಯೋಗ ಕ್ಷೇಮಕ್ಕಾಗಿ ಮೀಸಲಿಟ್ಟರು. ಮೈತ್ರಿ ಬಂಧಕ್ಕೆ ಕರ್ಣರು ಆದರ್ಶ.

### ಪರಮಾತ್ಮ ಶ್ರೀ ಕೃಷ್ಣನ ಭಜಿಸುವುದು

ಕಲಿಯುಗದಲ್ಲಿ ಮಾಡಿದ ಚಿಕ್ಕ ದಾನ, ಭಗವಂತನ ಸೇವೆ, ಹರಿನಾಮ ಸ್ಮರಣೆ ಧರ್ಮ ಕಾರ್ಯಗಳು ಅತ್ಯಂತ ಅಕ್ಷಯ ಫಲದಾಯಕ. ವೇದ ವ್ಯಾಸರು ಕಲಿಸ್ಸಾದುಃ ಎಂದು ಹೇಳಿದ್ದಾರೆ. ತಿಲದಷ್ಟು ಸತ್ಸಾಧನೆ ಪರ್ವತದಷ್ಟು ಫಲ ನೀಡುವುದು. ಹರಿನಾಮಸ್ಮರಣೆ ಮುಕ್ತಿ ದಾಯಕ. ಶ್ರೀ ರಾಮ ಚಂದ್ರಪ್ರಭು ಶಬರಿ ಭಕ್ತಿಗೆ ಮೆಚ್ಚಿ ತನ್ನ ಭಕ್ತಿಯ ಸಾಧನೆಗಳನ್ನು ವರ್ಣಿಸಿದರು.ಮೊದಲನೆಯ ಸಾಧನೆ ಸತ್ಸಂಗ. ಶ್ರೀ ಹರಿಯ ಅವತಾರ ಕರ್ಮಗಳ ಕಥೆ ಕೀರ್ತನೆ ಎರಡನೆಯ ಸಾಧನೆ ಶ್ರೀ ಹರಿಯ ಗುಣಗಾನ ಮಾಡುವುದು ಮೂರನೆಯ ಸಾಧನೆ, ಗೀತಾ, ಉಪನಿಷತ್ ವ್ಯಾಖ್ಯೆ ಮಾಡುವುದು ನಾಲ್ಕನೆಯ ಸಾಧನೆ. ನಿಷ್ಕಪಟವಾಗಿ ತಮ್ಮ ಗುರುಗಳ ಸೇವೆ ಮಾಡುವುದು ಐದನೆಯ ಸಾಧನೆ, ಪವಿತ್ರ ಸ್ವಭಾವ ಯಮ ನಿಯಮಾದಿಗಳ ಪಾಲನೆ ಮತ್ತು ಶ್ರೀ ಹರಿಯ ಪೂಜೆಯಲ್ಲಿ ಭಕ್ತಿ ಇರುವುದು ಆರನೆಯ ಸಾಧನೆ,ಶ್ರೀ ಹರಿಯ ಸಾಂಗೋಪಾಂಗ ಉಪಾಸನೆ ಮಾಡುವುದು ಏಳನೇ ಸಾಧನೆ, ಶ್ರೀ ಹರಿಯ ಭಕ್ತರನ್ನು ಗೌರವಿಸುವುದು ಸಮಸ್ತ ಪ್ರಾಣಿಗಳಲ್ಲಿ ಶ್ರೀ ಹರಿಯ ಭಾವನೆ ಇಡುವುದು ಎಂಟನೆಯ ಸಾಧನೆ. ತತ್ವ ವಿಚಾರ ಮಾಡುವುದು ಒಂಭತ್ತನೆಯ ಸಾಧನೆ.

### ಗುರುಸೇವೆಯ ಫಲ

ಧೌಮ್ಯ ಋಷಿ ಗುರುಕುಲದಲ್ಲಿ ವಿದ್ಯಾರ್ಥಿ ಗಳು ಗುರು ಸೇವೆ ಮಾಡುತ ವಿದ್ಯೆ ಕಲೆಯುತ್ತಿದ್ದರು. ಶಿಷ್ಯರಲ್ಲಿ ಉಪಮನ್ಯು ಎನ್ನುವ ಶಿಷ್ಯ ಒಬ್ಬರಾಗಿದ್ದರು. ಶಿಷ್ಯರು ಭಿಕ್ಷಾಟನೆ ಮಾಡಿ ಬಂದ

ಫಲವನ್ನು ಗುರುಗಳಿಗೆ ಸಮರ್ಪಿಸಬೇಕು. ಇದು ಗುರುಕುಲದ ನಿಯಮವಾಗಿತ್ತು. ಒಂದು ದಿನ ಉಪಮನ್ಯು ಭಿಕ್ಷಾಟನೆ ನಂತರ ಗುರುಗಳಿಗೆ ಸಮರ್ಪಿಸಿ,ಪ್ರಸಾದ ಬಯಸುತ್ತ ನಿಂತರು. ಗುರುಗಳು ಶಿಷ್ಯರನ್ನು ಪರೀಕ್ಷಿಸಲು ಭೋಜನ ಕೊಟ್ಟಿಲ್ಲ ಉಪಮನ್ಯು ಉಪವಾಸವಿದ್ದು. ಮಾರನೇ ದಿನವೂ ಭೋಜನ ಇಲ್ಲದಿರೆ ಹಸುವಿನ ಹಾಲು ಕುಡಿದರು. ಗುರುಗಳು ಕೇಳಿದಾಗ ಹಸಿವು ತಾಳದೆ ಹಾಲನ್ನು ಕುಡಿದೆ ಎಂದರು. ಹೀಗೆ ಅನುದಿನ ಉಪವಾಸ ಮಾಡುತ್ತ ಶಕ್ತಿ ಇಲ್ಲದೆ ಬಳಲುತ್ತಿದ್ದರು. ಗುರುಗಳಿಗೆ ಇದು ಶಿಷ್ಯನ ಪರೀಕ್ಷೆ ಅಷ್ಟೇ! ಅನುನಿತ್ಯ ಯೋಗಕ್ಷೇಮ ನೋಡುತ್ತಲೇ ಇದ್ದರು. ಎಂದಿನಂತೆ ಶಿಷ್ಯರಾದ ಉಪಮನ್ಯು ಗೋಸೇವೆ ಮಾಡುತ್ತಾ ಕಾಡಿಗೆ ಹೋದರು. ಹಸಿವು ತಾಳದೆ ಶಕ್ತಿಯಿಲ್ಲದಾಗಿ ದೃಷ್ಟಿ ಮಂದವಾಯಿತು. ಕಣ್ಣು ಕಾಣಿಸದೆ ದಾರಿ ಹುಡುಕುತಾ ಬಾವಿಯಲ್ಲಿ ಬಿದ್ದರು.ಸಾಯಂಕಾಲ ಎಲ್ಲ ಶಿಷ್ಯರೂ ಬಂದರು ಉಪಮನ್ಯು ಆಶ್ರಮಕ್ಕೆ ಬರಲಿಲ್ಲ. ಗುರುಗಳು ಎಲ್ಲ ಶಿಷ್ಯರೊಡಗೂಡಿ ಕಾಡಿಗೆ ತೆರಳಿದರು. ಮಗು ಉಪಮನ್ಯು ಎಂದು ಗುರು ಕೂಗುತ್ತಾ ಅರಣ್ಯ ಪ್ರವೇಶಿಸಿದರು. ಭಾವಿಯಿಂದ ಉಪಮನ್ಯು ಗುರುದೇವ ನಾನು ಇಲ್ಲಿದ್ದೇನೆ ಎಂದು ಕೂಗಿದರು. ಗುರುಗಳು ದೇವತೆ ಅಶ್ವಿನಿಯನ್ನು ಪ್ರಾರ್ಥಿಸಲು ಹೇಳಿದರು. ಉಪಮನ್ಯು ಗುರುವಿಗೆ ನಮಸ್ಕರಿಸಿ ಸ್ತೋತ್ರ ಪಾಠ ಮಾಡಿದರು. ಅಶ್ವಿನಿ ಕುಮಾರ ದೇವತೆ ಪ್ರಕಟವಾದರು. ಅಶ್ವಿನಿ ದೇವತೆ ಉಪಮನ್ಯುವಿಗೆ ಸಿಹಿ ಪ್ರಸಾದ ಕೊಟ್ಟು ಸ್ವೀಕರಿಸಲು ಹೇಳಿದರು. ಉಪಮನ್ಯು ಪ್ರಸಾದವನ್ನು ಗುರುಗಳಿಗೆ ಸಮರ್ಪಿಸದೆ ಸ್ವೀಕರಿಸುವುದಿಲ್ಲ ಎಂದು ಹೇಳಿದರು. ಸಂತುಷ್ಟರಾದ ಅಶ್ವಿನಿ ದೇವತೆ ಉಪಮನ್ಯುವನ್ನು ಬಾವಿಯಿಂದ ಹೊರಗೆ ತಂದರು. ಕಣ್ಣು ಮುಂದಿನಂತೆ ಕಾಣಲು ಆನಂದದಿಂದ ಗುರುಗಳಿಗೆ ನಮಸ್ಕಾರ ಮಾಡಿಕೊಂಡರು. ಅಶ್ವಿನಿದೇವತೆಯನ್ನು ನಮಸ್ಕರಿಸಿದರು. ಧೌಮ್ಯ ಋಷಿ ಉಪಮನ್ಯುವನ್ನು ಆಶೀರ್ವದಿಸಿದರು. ಗುರು ಭಕ್ತಿ, ವಿಶ್ವಾಸ, ಗುರುವಂದನೆ ಮಾಡುವ ಮೂಲಕ ಉಪಮನ್ಯು ಕಷ್ಟದಿಂದ ಪಾರಾದರು. ಸರ್ವವೇದ,ಧರ್ಮಶಾಸ್ತ್ರ,ಗುರುಗಳ ಅನುಗ್ರಹದಿಂದ ಪ್ರಾಪ್ತಿ ಆಯಿತು.ಗುರು ಭಕ್ತಿ ಗುರುಸೇವೆ ಮಾಡುವಾಗ ಗುರುಗಳ ಆಶೀರ್ವಾದಿಂದ ಎಲ್ಲ ಕಷ್ಟಗಳೂ ಪಾರಾಗುವವು.

### ಗುರುಪೂರ್ಣಿಮೆ ಆಚರಣೆ

ಅಷಾಢ ಶುದ್ಧ ಪೂರ್ಣಿಮ ತಿಥಿಯನ್ನು ಗುರುಪೂರ್ಣಿಮೆ ಅಥವಾ ವ್ಯಾಸ ಪೂರ್ಣಿಮ ಎಂದು ಕರೆಯುವರು. ಜ್ಞಾನವನ್ನು ಪಡೆಯಲು ತಮ್ಮ ಆಧ್ಯಾತ್ಮಿಕ ಗುರುಗಳನ್ನು ಇಂದಿನ ದಿನ ಸ್ಮರಿಸಿ,ಆರಾಧಿಸಿ, ತಮ್ಮ ಕೃತಜ್ಞತೆಯನ್ನು ಸಲ್ಲಿಸುವ ದಿನ. ಮನಸ್ಸು ಶುದ್ಧವಾಗಿ ಗುರುಗಳ ಆಶೀರ್ವಾದದಿಂದ ಜ್ಞಾನ ವೈರಾಗ್ಯ ಸನ್ಮಾರ್ಗದ ಕಡೆ ನಡೆದು ಹೋಗುವುದು. ನಮಗೆ ವಿದ್ಯೆಯನ್ನು ನೀಡಿ ಬಾಳಿಗೆ ಬೆಳಕನ್ನು ನೀಡಿದ ಎಲ್ಲ ಗುರು ಪರಂಪರೆಯನ್ನು ಸ್ಮರಿಸಿ ಗೌರವಿಸುವ ದಿನವೇ ಗುರು ಪೂರ್ಣಿಮೆ. ಪಾಠ ಹೇಳಿಕೊಟ್ಟು ಬದುಕಿನ ಮಾರ್ಗ ತೋರಿದವರಿಗೆ ನಮ್ಮ ಕೃತಜ್ಞತೆ ಅರ್ಪಿಸಲು ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಗುರು ಪೂರ್ಣಿಮೆಯಂದು ಸಮಸ್ತ ಗುರು ಪರಂಪರೆಯೇ ಪೂಜಿಸಲ್ಪಡುತ್ತದೆ ಜೈನ, ಬೌದ್ಧ, ಮುಂತಾದ ಎಲ್ಲ ಪಂಥದವರೂ ಗುರು ಪೂರ್ಣಿಮೆಯನ್ನು ಆಚರಿಸುವರು. ಸಿದ್ಧಾರ್ಥ ಬುದ್ಧನಾಗಿ ಮೊದಲ ಧರ್ಮ ಪ್ರವಚನವನ್ನೂ ನೀಡಿದ ದಿನವೇ ಆಷಾಢಹುಣ್ಣಿಮೆ.ಶ್ರೀ ಪುರಂದರದಾಸರು ಕೀರ್ತನೆಯಲ್ಲಿ ಗುರುವಿನ ಗುಲಾಮನಾಗುವ ತನಕ ದೊರೆಯ ದಣ್ಣ ಮುಕುತಿ ಪರಿ ಪರಿ ಶಾಸ್ತ್ರವನೋದಿದರೇನು ವ್ಯರ್ಥ ವಾಯ್ತು ಭಕುತಿ"ಎಂಬ ಮಾತಿದೆ. ಶ್ರೀ ಶಂಕರಾಚಾರ್ಯರು ಗುರ್ವಷ್ಟಕಮ್ ಸ್ತೋತ್ರದಲ್ಲಿ ಗುರುಭಕ್ತಿ ಇಲ್ಲದೆ ಎಷ್ಟು ಶಾಸ್ತ್ರ ಪರಿಜ್ಞಾನ ವಿದ್ದರೇನು ಉಪಯೋಗ? ಗುರು ಭಕ್ತಿ ಇರಬೇಕು ಎಂದು ವರ್ಣಿಸಿದ್ದಾರೆ.

ಷಡಂಗಾದಿ ವೇದೋ ಮುಖೇ ಶಾಸ್ತ್ರ ವಿದ್ಯಾ
ಕವಿತ್ವಾದಿ ಗದ್ಯಂ ಸುಪದ್ಯಂ ಕರೋತಿ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿ ಪದ್ಮೇ ತತಃ
ಕಿಮ್ ತತಃ ಕಿಮ್ ತತಃ ಕಿಮ್ ತತಃ ಕಿಮ್॥

ಮನುಷ್ಯ ಷಡಂಗ ಶಾಸ್ತ್ರಗಳನ್ನು ಕಂಠಸ್ಥ ಮಾಡಿರಲಿ, ರಮಣೀಯವಾಗಿ ಕಾವ್ಯವನ್ನು ರಚಿಸುವ ಸಾಮರ್ಥ್ಯವನ್ನೂ ಹೊಂದಿರಲಿ. ಅದರೂ ಮನುಷ್ಯನ ಮನಸ್ಸು ಗುರುಗಳ ಚರಣದಲ್ಲಿ ಆಸಕ್ತವಾಗಿರದಿದ್ದರೆ, ಇವುಗಳಿಂದೇನು ಪ್ರಯೋಜನ? ಪ್ರತಿಯೊಬ್ಬರ ಜೀವನದಲ್ಲೂ ಗುರುವಿಗೆ ಅತ್ಯಂತ ಪ್ರಮುಖ ಸ್ಥಾನ ಇರುತ್ತದೆ. ನಮ್ಮನ್ನು ತಿದ್ದಿ, ಉತ್ತಮ ದಾರಿಯಲ್ಲಿ ಸಾಗಲು ಮಾರ್ಗದರ್ಶನ ನೀಡುವ ಗುರು ಪ್ರತಿಯೊಬ್ಬರಿಗೂ ಬಹಳ ಮುಖ್ಯ. ಆ ಗುರುವನ್ನು ಗುರು ಆರಾಧಿಸುವ ದಿನವೇ ಗುರು ಪೂರ್ಣಿಮೆ, ಈ ದಿನವನ್ನು ಜೀವನದ ವಿವಿಧ ಹಂತಗಳಲ್ಲಿ ಮಾರ್ಗದರ್ಶನ ನೀಡಿದ ಗುರುಗಳಿಗೆ ಅರ್ಪಿಸಲಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಗುರುವಿಗೆ ಧನ್ಯವಾದ ಅರ್ಪಿಸುತ್ತಾರೆ. ಆದಿ ಗುರುಗಳಾದ ಶ್ರೀ ವೇದವ್ಯಾಸರನ್ನು ನಮಿಸಿ, ತಮ್ಮ ಗುರುಗಳಿಗೆ ಗೌರವ ವಂದನೆ ಸಲ್ಲಿಸಿ ಪೂಜೆ ಮಾಡುವರು. ಗುರುಕುಲದಲ್ಲಿ ತಮ್ಮ ಗುರುಗಳ ಪಾದ ನಮನ ಮಾಡಿ ವಿದ್ಯಾರ್ಥಿ ಅಥವಾ ಶಿಷ್ಯರು ತಮ್ಮ ವಿದ್ಯೆಯನ್ನು ಪ್ರದರ್ಶಿಸುವ ಆಚಾರವೂ ಇದೆ. ಇಂದಿನ ದಿನ ಗುರುಸೇವೆ, ಗುರುಪಾದ ನಮಸ್ಕಾರ, ಸ್ಮರಣೆ ಮಾಡಿ ಗುರುಗಳ ಆಶೀರ್ವಾದ ಪಡೆಯೋಣ.ಗುರುವಂದನೆ ಸಮರ್ಪಿಸಿ ಧನ್ಯ ರಾಗೋಣ! ಗುರುಗಳ ಆಶೀರ್ವಾದ ಎಲ್ಲರ ಮೇಲಿರಲಿ!

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್॥

**ಗುರು ವಂದನಂ ಸಮರ್ಪಯಾಮಿ।**



# ಪಾಠ -6 ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್

| | |
|---|---|
| ठ् + ठ = ठ्ठ | ಠ್ + ಠ = ಠ್ಠ |
| ठ् + य = ठ्य | ಠ್ + ಯ = ಠ್ಯ |
| ठ् + र = ठ्र | ಠ್ + ರ = ಠ್ರ |
| ठ् + व = ठ्व | ಠ್ + ವ = ಠ್ವ |
| ड् + ग = ड्ग | ಡ್ + ಗ = ಡ್ಗ |
| ड् + ज = ड्ज | ಡ್ + ಜ = ಡ್ಜ |
| ड् + ड = ड्ड | ಡ್ + ಡ = ಡ್ಡ |
| ड् + ढ = ड्ढ | ಡ್ + ಢ = ಡ್ಢ |
| ड् + ब = ड्ब | ಡ್ + ಬ = ಡ್ಬ |
| ड् + भ = ड्भ | ಡ್ + ಭ = ಡ್ಭ |
| ड् + म = ड्म | ಡ್ + ಮ = ಡ್ಮ |
| ड् + य = ड्य | ಡ್ +ಯ = ಡ್ಯ |
| ड् + र = ड्र | ಡ್ + ರ = ಡ್ರ |
| ड् + व = ड्व | ಡ್ + ವ = ಡ್ವ |
| ढ् + ढ = ढ्ढ | ಡ್ +ಢ = ಡ್ಢ |
| ढ् + म = ढ्म | ಢ್ + ಮ = ಢ್ಮ |
| ढ् + य = ढ्य | ಢ್ + ಯ = ಢ್ಯ |
| ढ् + र = ढ्र | ಢ್ + ರ = ಢ್ರ |
| ढ् + व = ढ्व | ಢ್ + ವ = ಢ್ವ |
| ण् + ट = ण्ट | ಣ್ + ಟ = ಣ್ಟ |
| ण् + ठ = ण्ठ | ಣ್ + ಠ = ಣ್ಠ |
| ण् + ड = ण्ड | ಣ್ + ಡ = ಣ್ಡ |
| ण् + ढ = ण्ढ | ಣ್ +ಡ = ಣ್ಡ |
| ण् + ण = ण्ण | ಣ್ +ಣ = ಣ್ಣ |
| ण् + म = ण्म | ಣ್ + ಮ = ಣ್ಮ |
| ण् + य = ण्य | ಣ್ + ಯ = ಣ್ಯ |
| ण् + व = ण्व | ಣ್ + ವ = ಣ್ವ |
| त् + क = त्क | ತ್ + ಕ = ತ್ಕ |
| त् + ख = त्ख | ತ್ + ಖ = ತ್ಖ |
| त् + त = त्त | ತ್ + ತ = ತ್ತ |
| त् + थ = त्थ | ತ್ + ಥ = ತ್ಥ |
| त् + न = त्न | ತ್ + ನ = ತ್ನ |
| त् + प = त्प | ತ್ + ಪ = ತ್ಪ |
| त् + फ = त्फ | ತ್ + ಫ = ತ್ಫ |
| त् + म = त्म | ತ್+ ಮ = ತ್ಮ |
| त् + य = त्य | ತ್ + ಯ = ತ್ಯ |
| त् + र = त्र | ತ್ + ರ = ತ್ರ |
| त् + व = त्व | ತ್ +ವ = ತ್ವ |
| त् + स = त्स | ತ್ + ಸ = ತ್ಸ |
| थ् + न = थ्न | ಥ್ + ನ = ಥ್ನ |
| थ् + य = थ्य | ಥ್ + ಯ = ಥ್ಯ |
| थ् + र = थ्र | ಥ್ + ರ = ಥ್ರ |
| थ् + व = थ्व | ಥ್ + ವ = ಥ್ವ |
| द् + ग = द्ग | ದ್ + ಗ = ದ್ಗ |
| द् + घ = द्घ | ದ್ + ಘ = ದ್ಘ |
| द् + द = द्द | ದ್ + ದ = ದ್ದ |
| द् + ध = द्ध | ದ್ +ಧ = ದ್ಧ |
| द् + भ = द्भ | ದ್ + ಭ = ದ್ಭ |
| द् + म = द्म | ದ್ + ಮ = ದ್ಮ |
| द् + य = द्य | ದ್ + ಯ = ದ್ಯ |
| द् + र = द्र | ದ್ + ರ = ದ್ರ |
| द् + व = द्व | ದ್ +ವ = ದ್ವ |

# ಜಗತ್ ಸೃಷ್ಟಿ ಗರುಡಮಹಿಮೆ

ಶ್ರೀಮತಿ. ಡಾ॥ ಸಿ.ಎಸ್. ಊರ್ಮಿಳಾ
9840836940

ಶ್ರಿಯಃ ಪತಿಯಾದ ಮಹಾವಿಷ್ಣುವಿಗೆ ಗುರುತರವಾದ ಮೂರು ಜವಾಬ್ದಾರಿಯಿದೆ ಎಂದು ತಾನೇ ಗೀತೆಯಲ್ಲಿ ಹೇಳಿಕೊಂಡಿದ್ದಾನೆ. ಅದಾವುದೆಂದರೆ 1. ಶಿಷ್ಟಪರಿಪಾಲನೆ 2. ದುಷ್ಟನಿಗ್ರಹ 3. ಧರ್ಮಸಂಸ್ಥಾಪನೆ.

ಈ ಮೂರು ಪ್ರಮುಖವಾದ ಕಾರ್ಯವನ್ನು ನಿರ್ವಹಿಸಲು ಕೆಲವೊಮ್ಮೆ ತಾನೇ ಪೂರ್ಣಾವತಾರ (ರಾಮಕೃಷ್ಣ) ಪಡೆದು ಈ ಭುವಿಗೆ ಒಂದು ರಕ್ಷಿಸುತ್ತಾನೆ ಮತ್ತೆ ಕೆಲವೊಮ್ಮೆ (ಬಲರಾಮ) ಆದಿಶೇಷ. ಸುದರ್ಶನ ಚಕ್ರಮುಂತಾದ ಅಂಶಗಳಿಂದ ಜನಿಸಿ ಜಗದ್ರಕ್ಷಣ ಕಾರ್ಯವನ್ನು ನಿರ್ವಹಿಸುತ್ತಾನೆ. ಈ ಮಹತ್ತರವಾದ ಕಾರ್ಯದಲ್ಲಿ ಸೂರ್ಯ ಚಂದ್ರಾದಿಗ್ರಹಗಳು, ಪೃಥ್ವಿ, ವಾಯು, ನೀರು ಮುಂತಾದ ಪಂಚಭೂತಗಳು ಪರಮಾತ್ಮನಿಗೆ ಅಧೀನನಾಗಿ ಅವನ ಕಟ್ಟಳೆಯಂತೆ ನಡೆದುಕೊಳ್ಳುತ್ತದೆ. ಇದರ ಬಗ್ಗೆ ಶ್ರುತಿಯು ಹೀಗೆ ವಿವರಿಸುತ್ತದೆ."ಭೀಷಾಸ್ಮಾದ್ವಾತಃ ಪವನೇ ಭೀಷೋದೇತೀ ಸೂರ್ಯಃ ಭೀಷಾಸ್ಮಾದಗ್ನಿಶ್ಚೆಂದ್ರಶ್ಚ". ಮೃತ್ಯುರ್ಧಾವತಿ ಪಂಚಮ ಇತಿ" ಅಂದರೆ ಸ್ವಾಮಿಯ ಭಯದಿಂದ ಗಾಳಿಯೂ ಸೂರ್ಯನೂ, ಮೃತ್ಯು ದೇವತೆಯಾದ ಯಮನೂ ತಮ್ಮ ತಮ್ಮ ಕೆಲಸಗಳಲ್ಲಿ ಜಾಗರೂಕರಾಗಿಯೇ ಇರುತ್ತಾರೆಂದು ವಿವರಿಸುತ್ತದೆ. ದೇವತೆಗಳು ಸ್ವಾಮಿಗೆ ಭಯಪಡುವಂತೆ ಸ್ವಾಮಿಯ ಭಕ್ತರಿಗೂ ಹೆದರುತ್ತಾರೆ. ಅಷ್ಟೇ ಅಲ್ಲದೆ ಭಗವಂತನು ಪರ,ವ್ಯೂಹ,ವಿಭವ, ಹಾರ್ದ, ಅರ್ಚಾ ಎಂಬುದಾಗಿ ಐದು ಪ್ರಧಾನವಾದ ಅವತಾರಗಳನ್ನು ಎತ್ತಿ ಜಗದ್ರಕ್ಷಣೆಯನ್ನು ಮಾಡಿರುವನು.

**ಪರ**

ಎಂದರೆ ಅಪ್ರಾಕೃತ ವೈಕುಂಠ ಲೋಕದಲ್ಲಿ ದಿವ್ಯ ಮಂಗಳ ವಿಗ್ರಹವಾಗಿ ಪರಮಾತ್ಮ ಭುಜಂಗಶಯನಾಗಿ ಲಕ್ಷ್ಮೀ ಸಹಿತ ಜಗದ್ರಕ್ಷಣೆ ಕಾರ್ಯ ನಿರ್ವಹಿಸುತ್ತಾನೆ. ಇದು ಬ್ರಹ್ಮಾದಿ ದೇವತೆಗಳ ಮತ್ತು ಯೋಗಿ ಶ್ರೇಷ್ಠರ ವ್ಯಾಪ್ತಿಗೂ ಮನಸ್ಸಿಗೂ ಅಗೋಚರವಾದುದು.

**ವ್ಯೂಹ**

ಇದು ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ ಎಂಬುದು ನಾಲ್ಕು ವಿಧವಾಗಿ ಜಗದ್ವ್ಯಾಪಾರ ನಿರ್ವಾಹಕ್ಕಾಗಿಯೇ ನಡೆಯಿತು.

**ವಿಭವ**

ಈ ವಿಭವಾವತಾರದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಭಗವಂತ ದಶಾವತಾರ ಮಾಡಿ ಅಂದರೆ ಮತ್ಸ್ಯ, ಕೂರ್ಮ, ವರಾಹ ನೃಸಿಂಹ ವಾಮನ, ರಾಮ, ಪರಶುರಾಮ, ಬಲರಾಮ, ಕೃಷ್ಣ, ಕಲ್ಕಿ - ಎಂದು ಹತ್ತು ಅವತಾರಗಳನ್ನು ಕಳೆದನು.

**ಹಾರ್ದ**

ಪರಮಾತ್ಮ ಎಲ್ಲರ ಹೃದಯ ಕಮಲದಲ್ಲಿ ಬಂದು ನೆಲಸಿರುವನು ಎಂಬ ನಂಬಿಕೆ ಇಂದಿಗೂ ನಮ್ಮೆಲ್ಲರಲ್ಲಿ ಇದೆ.

**ಅರ್ಚಾ**

ಭಗವಂತ ಶ್ರೀರಂಗ, ಕಾಂಚಿ ಮುಂತಾದ ದಿವ್ಯ ದೇಶಗಳಲ್ಲಿ ಅರ್ಚಾ ರೂಪದಿಂದ ಧರೆಗೆ ದಿಗ್ವಿಜಯ ಮಾಡಿರುವನೆಂಬ ಅಚಲವಾದ ನಂಬಿಕೆ. ಭಗವಂತನ ಸಾನ್ನಿಧ್ಯ ವಿರುವ



ಆಲಯವನ್ನು ದೂರದಿಂದಲೇ ಅಂದರೆ ದೂರದ ಗೋಪುರವನ್ನು ನೋಡಿದರೇನೆ ನಮ್ಮೆಲ್ಲ ಪಾಪಗಳು ನಾಶವಾಗುತ್ತದೆ ಎಂಬ ನಂಬಿಕೆ ಇಂದಿಗೂ ಜನರಲ್ಲಿದೆ. "ಗೋಪುರ ದರ್ಶನಂ ಪಾಪ ವಿನಾಶನಂ' ಎಂಬ ಹೇಳಿಕೆಯನ್ನು ಇಲ್ಲಿ ಸ್ಮರಿಸಬಹುದು.

ಈ ಹಿಂದೆಯೇ ಹೇಳಿದಂತೆ ಭಗವಂತ ತನ್ನ ಭಕ್ತರ ಬಗ್ಗೆ ಸದಾಕಾಳಜಿಯನ್ನು ವಹಿಸುತ್ತಾನೆ. ಸೃಷ್ಟಿ ಕಾರ್ಯ ದಲ್ಲಿಯೂ ಲೀಲಾಮಯನಾದ ಮಹಾವಿಷ್ಣುವು ತನ್ನದೇ ಆದ ಕೌಶಲ್ಯವನ್ನು ತೋರಿಸುತ್ತಾನೆ. ಸೃಷ್ಟಿಕರ್ತಾ ಬ್ರಹ್ಮ, ಸ್ಥಿತಿಕರ್ತಾ ವಿಷ್ಣು, ಲಯಕರ್ತಾ ಶಿವನೆಂದೂ ನಮ್ಮಲ್ಲಿ ಪ್ರಸಿದ್ಧವಾಗಿದ್ದರೂ "ಸ್ವಯಂ ವಿಶ್ವೇಶ್ವರೋ ಹರಿಃ ಬ್ರಹ್ಮ ಭೂತ್ವಾ (ವಿ.ಪು.1-4-4) ಬ್ರಹ್ಮ ರೂಪಧರಃ ಶೇತೇ ಭಗವಾನಾದಿ ಕೃತ್ ಹರಿಃ (ವಿ.ಪುರಾಣ 6.4.4) ಎಂದು ಬ್ರಹ್ಮ, ಶಿವ ಇವರೂ ಸಹ ಪರಬ್ರಹ್ಮದ ಸಗುಣ ಮೂರ್ತಿಗಳೇ ಆದ್ದರಿಂದ ಈ ತ್ರಿಮೂರ್ತಿಗಳೂ ಸಮಾನ ರೆಂದೂ, ಅಭಿನ್ನರೆಂದು ವಿಷ್ಣು ಪುರಾಣವು ತಿಳಿಸುತ್ತದೆ.ಜಗತ್ತನ್ನು ಸೃಜಿಸಬೇಕೆಂದು ಪರಮಾತ್ಮನು ರಜೋಗುಣಯುಕ್ತನಾಗಿ ಬ್ರಹ್ಮ ರೂಪವನ್ನು ಧರಿಸಿದಾಗ ಅವಿದ್ಯೆಹುಟ್ಟಿತು. ಈ ಮಹತ್ತಿನ ಸೃಷ್ಟಿ ಯನ್ನು ಪ್ರಪ್ರಥಮವಾದ ಸೃಷ್ಟಿಯೆಂದು ಪರಿಗಣಿಸಲಾಗಿದೆ. ಆದರಿಂದ ಅಹಂಕಾರವೂ ಸೇರಿ ಪಂಚತನ್ಮಾತ್ರೆಗಳು ಸೃಷ್ಟಿ ಯಾಯಿತು. ನಂತರ ಮರಬಳ್ಳಿ ಮುಂತಾದ ಸ್ಥಾವರಗಳನ್ನು ಸೃಷ್ಟಿಸಿದನು.ನಂತರ ಕ್ರಿಮಿಕೀಟಾದಿಗಳ ಸೃಷ್ಟಿಯಾಯಿತು. ನಂತರ ದೇವತೆಗಳ ಸೃಷ್ಟಿ. ಕಡೆಯಲ್ಲಿ ಹುಟ್ಟಿದವರು ಮನುಷ್ಯರು (ವಿ.ಪು. ಶ್ಲೋ. 1-5- 79 ರಿಂದ 23 ನೇ) ಎಂದು ಹೇಳಲಾಗಿದೆ.

ಈ ಸೃಷ್ಟಿ ಕಾರ್ಯದಲ್ಲಿಯೂ ಲೀಲಾ ವಿಭೂತಿಯಾದ ಶ್ರೀಮನ್ನಾರಾಯಣನ ಆಟ ನಮಗೆ ಚೆನ್ನಾಗಿ ತಿಳಿಯುತ್ತದೆ. ಈ ಸೃಷ್ಟಿಯಲ್ಲಿ ಎಲ್ಲವನ್ನೂ ಸಾತ್ವಿಕರನ್ನಾಗಿ ಸೃಷ್ಟಿಸಿದರೆ ಸ್ವಾರಸ್ಯ ವಿರುವುದಿಲ್ಲ ಎಂದು ಬಗೆದು ದುರ್ಜನರನ್ನೂ ರಜೋಗುಣ, ತಮೋಗುಣಗಳನ್ನು ಪಡೆದ ಅಸುರಗುಣವನ್ನು ಸೃಷ್ಟಿಸಿದ. ಆ ಅಸುರರಲ್ಲಿಯೂ ಅಂದರೆ ರಾಕ್ಷಸರ ನಡುವೆಯೇ ವಿಭೀಷಣ ಪ್ರಹ್ಲಾದ ಮುಂತಾದ ಸ್ವಾತಿಕ ಗುಣಗಳುಳ್ಳ ಪಾತ್ರಗಳನ್ನು ಸೃಷ್ಟಿ ಸಿದ. ಅಷ್ಟೇ ಏಕೆ ಜಗನ್ನಾಟಕ ಸೂತ್ರಧಾರಿಯಾದ ಶ್ರೀ ಮನ್ನಾರಾ ಯಣನು ಆದಿಶೇಷನನ್ನು ತನ್ನ ಹಾಸಿಗೆಯಾಗಿ ಬಳಸಿದ ಗರುಡನನ್ನೇ ತನ್ನ ವಾಹನವನ್ನಾಗಿ ಬಳಸಿದ. ಹಾವು ಗರುಡ ಪಕ್ಷಿ ಇವೆರಡೂ ಬದ್ಧ ದ್ವೇಷಿಯಾಗಿದ್ದರೂ. ಪರಸ್ಪರ ಸಹಾಯಕ ರಾಗಿರಬೇಕೆಂದು ಸೃಷ್ಟಿಸಿದನೋ ಎಂಬಂತಹ ಸಂದೇಹ ನಮಗೆ ಉಂಟಾಗುತ್ತದೆ. ಈ ಪ್ರಪಂಚದಲ್ಲಿ ಸುಖವಾಗಲಿ, ದುಃಖವಾಗಲಿ ಶಾಶ್ವತವಲ್ಲ ಎಂಬ ಸಂದೇಶದೊಂದಿಗೆ ಪರಸ್ಪರ ಸಹಯೋಗ ಸಹಕಾರದೊಂದಿಗೆ ಬಾಳುವೆ ನಡೆಸಬೇಕೆಂಬ ಮಾರ್ಗವನ್ನು ಸೂಚಿಸಿದ್ದಾನೆ ಎಂಬುದು ನಮಗೆ ಭಾಸವಾಗು ತ್ತದೆ. ಪ್ರೇಮ ಸೌಹಾರ್ದತೆಯೇ ಈ ಜಗತ್ತಿಗೆ ಆಧಾರ, ಸತ್ಯ, ಅಹಿಂಸಾ ಮಾರ್ಗದಲ್ಲಿಯೇ ನಾವು ಎಂದೆಂದಿಗೂ ನಡೆಯ ಬೇಕು ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಪ್ರಸ್ತುತ ಪಕ್ಷಿರಾಜ ನೆನಿಸಿದ ಗರುಡ ಪಕ್ಷಿಯ ವಿಷಯವಾಗಿ ನಾವು ತಿಳಿದು ಕೊಳ್ಳೋಣ.

ನಮ್ಮ ದೇಶದ ಅನೇಕ ವೈಷ್ಣವ ದೇವಾಲಯಗಳಲ್ಲಿ ಬ್ರಹ್ಮೋತ್ಸವ ಎಂದು ವರ್ಷಕ್ಕೊಮ್ಮೆ ಆಚರಿಸಲಾಗುತ್ತದೆ. ಇದು ಹತ್ತು ದಿನಗಳು ನಡೆಯುವ ಅತಿ ಸಂಭ್ರಮವಾದ ಹಬ್ಬ. ಈ ಹತ್ತು ದಿನಗಳಲ್ಲಿ ಬೆಳಗ್ಗೆ ಮತ್ತು ರಾತ್ರಿಯಲ್ಲಿ ಹಂಸವಾಹನ, ಅಶ್ವವಾಹನ ಸೂರ್ಯಪ್ರಭವಾಹನ, ಚಂದ್ರಪ್ರಭವಾಹನ ಮುಂತಾದ ಉತ್ಸವಗಳು ನಡೆಯುತ್ತದೆ. ಅವುಗಳಲ್ಲಿ ಗರುಡೋ ತ್ಸವಕ್ಕಂತೂ ಜನರುಕಿಕ್ಕಿರಿದು ತುಂಬಿರುತ್ತಾರೆ ಎಂಬುದನ್ನು ನಾವು ಗಮನಿಸಬಹುದು. ಹಾಗದರೆ ಗರುಡನಿಗೆ ಅಷ್ಟೊಂದು ಪ್ರಾಮುಖ್ಯತೆ ಏಕೆ? ಎಂಬ ಪ್ರಶ್ನೆ ನಮ್ಮಲ್ಲಿ ಸಹಜವಾಗಿ ಹುಟ್ಟು ತ್ತದೆ. ನಿಜ ಗರುಡಪಕ್ಷಿಯು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ.

ಗರುಡನ ತಂದೆಯ ಹೆಸರು ಕಶ್ಯಪ ತಾಯಿ ವಿನುತ ಎಂಬುವರು ಜ್ಞಾನದ ಸಂಕೇತ ಗರುಡ ಒಮ್ಮೆ ಅವನು ದೇವ ಲೋಕದಿಂದ ಅಮೃತವನ್ನು ತಂದನೆಂದು ಪುರಾಣಕಥೆಗಳು ನಮಗೆ ತಿಳಿಸುತ್ತವೆ. ಗರುಡ ಭಕ್ತಿ ಮತ್ತು ಅವನ ಪ್ರತಾಪಕ್ಕೆ ಮೆಚ್ಚಿ ಮಹಾವಿಷ್ಣುವು ತನ್ನ ವಾಹನವನ್ನಾಗಿ ಮಾಡಿ ಕೊಂಡನು. ಅಷ್ಟೇ ಅಲ್ಲ ಮಹಾವಿಷ್ಣುವಿಗೆ ತಾನು ಇಹ ಲೋಕ ದಲ್ಲಿ ಆಗಲಿ, ವೈಕುಂಠ ಲೋಕದಲ್ಲಾಗಲಿ ತಾನೇ ಕಣ್ಣಾವಲಾಗಿ ಇರುತ್ತೇನೆ. ಎಂದು ಗರುಡನು ಮಹಾವಿಷ್ಣುವಿನಲ್ಲಿ ಪ್ರಾರ್ಥಿ ಸಿದನು. ಅದರಂತೆಯೇ ಇಂದಿಗೂ ನಾವು ಶ್ರೀ ವೈಷ್ಣವ ದೇವಾ ಲಯಗಳಲ್ಲಿ ಗರುಡಗಂಭವನ್ನು (ಧ್ವಜಸ್ತಂಭ) ಗರುಡನು ದೇವರ ಮುಂದೆ ಅಂಜಲಿಬದ್ಧವಾಗಿ ಕುಳಿತಿರುವುದನ್ನು, ಅಥವಾ ನಿಂತಿರುವುದನ್ನು ನಾವು ಇಂದಿಗೂ ಕಾಣಬಹುದು. ವೈಷ್ಣವ ದೇವಾಲಯದಲ್ಲಿ ಪ್ರಾಕಾರದ ಗೋಡೆಯ ಮೇಲೆ ಅತ್ತ ಇತ್ತ



ಗರುಡ ಪ್ರತಿಮೆಯಿರುವುದನ್ನು ಗಮನಿಸೋಣ ಬ್ರಹ್ಮ ರಥೋತ್ಸವದ ಕಾಲದಲ್ಲಿ ಗರುಡಪಟ ಗರುಡಧ್ವಜವನ್ನು ಏರಿಸುವ ಸಂಪ್ರದಾಯ ಇಂದಿಗೂ ಇದೆ. ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ ಮತ್ತು ಅನೇಕ ಪುರಾಣಗಳಲ್ಲಿ ನಾವು ಗರುಡನು ಮಾಡಿದ ಸಾಹಸ ಕೃತ್ಯಗಳನ್ನು ಗಮನಿಸ ಬಹುದು. ಉದಾ:ಶ್ರೀರಾಮಾಯಣದಲ್ಲಿ ಜಟಾಯುವು ಸೀತೆಯನ್ನು ಕದ್ದು ತಂದ ರಾವಣನನ್ನು ಎದುರಿಸಿ, ಕೊನೆಗೆ ರಾಮ ಬರುವ ವರೆಗೂ ತನ್ನ ಉಸಿರನ್ನು ಹಿಡಿದುಕೊಂಡು ನಂತರ ರಾಮ ಬಂದೊಡನೆ ಸೀತಾ ವೃತ್ತಾಂತವನ್ನು ತಿಳಿಸಿದುದು. ಅತ್ಯಂತ ರೋಚಕವಾದ ಪ್ರಸಂಗವಾಗಿದೆ. ನಂತರ ಜಟಾಯುವಿನ ಸಹೋದರನಾದ ಸಂಪಾತಿಯು ಯುದ್ಧಪ್ರಸಂಗದ ಸರ್ಪಾಸ್ತ್ರ (ನಾಗಾಸ್ತ್ರ) ದಿಂದ ಬಂಧಿತರಾದ ರಾಮಲಕ್ಷ್ಮಣರನ್ನು ಬಿಡಿಸಿದ್ದು ಇವೆಲ್ಲ ಗರುಡನ ಸಾಹಸಕ್ಕೆ ಉದಾಹರಣೆಯಾಗಿದೆ. ನರಕಾಸುರ ಸಂಹಾರದಲ್ಲಿಯೂ ಮತ್ತು ಗಜೇಂದ್ರಮೋಕ್ಷ ಸಂದರ್ಭದಲ್ಲಿ ಗರುಡನು ಶ್ರೀಕೃಷ್ಣನಿಗೆ ನೆರವಾದುದನ್ನು ನಾವು ತಿಳಿದಿದ್ದೇವೆ.

ನಮ್ಮ ದೇಶವು ಆಧ್ಯಾತ್ಮಿಕ ಜಗತ್ತಿನಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಮೆರೆದಿದೆ. ಅಷ್ಟೇ ಅಲ್ಲದೆ ಅನೇಕ ಐತಿಹ್ಯಗಳಿಂದ ಕೂಡಿದ ಪುಣ್ಯ ಭೂಮಿ ನಮ್ಮದಾಗಿದೆ. ಅದರಲ್ಲಿ ಕೆಲವು ಉದಾಹರಣೆಗಳನ್ನು ನಾವು ನೋಡೋಣ. ನಮ್ಮ ದೇಶದ ತಮಿಳುನಾಡು ಪ್ರಾಂತ್ಯದ ಕುಂಭಕೋಣಂ ಎಂಬ ನಗರದಲ್ಲಿ ಮಂಜುಳವಲ್ಲಿ ತಾಯರ್ ಸಮೇತ ನರೈಯಾರ್ ನಿನ್ರ ನಂಬಿ ಎಂಬ ದೇವಾಲಯವಿದೆ ತಿರುನರೈಯೂರ್ ಎಂದೂ ಕರೆಯುವುದುಂಟು ಈ ದೇವಾಲಯದಲ್ಲಿ ಗರುಡದೇವರಿಗೆ ಪ್ರತ್ಯೇಕವಾದ ಗುಡಿಯಿದೆ. ಈ ಗರುಡ ದೇವರನ್ನು ಬೃಹತ್ತಾದ ಶಿಲೆಯಿಂದ ಕತ್ತಲಾಗಿದೆ. ಇಲ್ಲಿ ಪ್ರತಿ ವರ್ಷವು ಬ್ರಹ್ಮೋತ್ಸವವನ್ನು ಆಚರಿಸಲಾಗುತ್ತದೆ. ಇದರಲ್ಲಿ ಆಶ್ಚರ್ಯವೇನೆಂದರೆ ಗರ್ಭಗುಡಿಯಿಂದ ಕಲ್ಲು ಗರುಡನನ್ನು ಎತ್ತಿಕೊಂಡು ತರುವಾಗ ನಾಲ್ಕು ಜನ ಮಾತ್ರ ಹೊತ್ತು ತರುತ್ತಾರೆ ಹೊರಗಡೆ ಒಂದೊಡನೆ ಅದು ಭಾರವಾಗಿ ಹದಿನಾರುಮಂದಿ ಗರುಡನ ಅಡ್ಡೆಯನ್ನು ಹೊರುತ್ತಾರೆ. ದೇವಾಲಯದಿಂದ ಹೊರಕ್ಕೆ (ಅಂದರೆ ಹೊರ ರಸ್ತೆಗೆ) ಬರಬರುತ್ತಿರುವ ಹಾಗೆ ಗರುಡನ ಭಾರ ಜಾಸ್ತಿಯಾಗುತ್ತಾ ಹೋಗುತ್ತದೆ. ಹೀಗಾಗಿ ಅರವತ್ತು ನಾಲ್ಕು ಜನ ಗರುಡನನ್ನು ಹೊರ ಬೇಕಾಗಿ ಬರುತ್ತದೆ. ಇದರ ಐತಿಹ್ಯವನ್ನು ಇಂದಿಗೂ ಯಾರೂ ಊಹಿಸಲು ಸಾಧ್ಯವಿಲ್ಲವಾಗಿದೆ. ಈ ಅದ್ಭುತ ಪ್ರಸಂಗವನ್ನು ನೋಡಲು ಇಂದಿಗೂ ಸಾವಿರಾರು ಜನರು ಬಂದು ನೆರೆಯುತ್ತಾರೆ.

ತಮಿಳುನಾಡಿನ ಕಾಂಚೀಪುರಂ ಹಾಗೂ ತಿರುನಾಂಗೂರ್‌ನಲ್ಲಿ ನಡೆಯುವ ಗರುಡೋತ್ಸವವು ಜಗತ್ಪ್ರಸಿದ್ಧವಾಗಿದೆ. ಈ ದಿವ್ಯ ಕ್ಷೇತ್ರಗಳಲ್ಲಿ ಭಕ್ತರು ಬಂದು ದರ್ಶನ ಭಾಗ್ಯವನ್ನು ಪಡೆಯುತ್ತಾರೆ.

ಕರ್ನಾಟಕದಲ್ಲಿಯೂ ಬೇಲೂರು ಬಿಂಡಿಂಗನವಿಲೆ ಮುಂತಾದ ಸ್ಥಳಗಳಲ್ಲಿ ಗರುಡೋತ್ಸವವು ಬಹು ವಿಜೃಂಭಣೆಯಿಂದ ನಡೆಯುತ್ತದೆ. ತಿರುಪತಿ ತಿರುಮಲೆಯ ಪರ್ವತ ಶ್ರೇಣಿಯನ್ನು ಗರುಡಾದ್ರಿಯೆಂದು ಹೇಳುತ್ತಾರೆ. ಕರ್ನಾಟಕದಲ್ಲಿರುವ ಮೇಲುಕೋಟೆಯ (ಮಂಡ್ಯಜಿಲ್ಲೆ) ವೈರಮುಡಿ ಜಗತ್ಪ್ರಸಿದ್ಧವಾಗಿದೆ. ಇಲ್ಲಿ ಚೆಲುವನಾರಾಯಣ ಸ್ವಾಮಿಗೆ ಹಾಕುವ ವಜ್ರದ ಕಿರೀಟವನ್ನು ಪಾತಾಳಲೋಕದಲ್ಲಿದ್ದ ವಿರೋಚನನಿಂದ ಗರುಡನ ಅಪ್ಪಣೆ ಪಡೆದು ಇಲ್ಲಿ ರಾಮಪ್ರಿಯ ಉತ್ಸವ ಮೂರ್ತಿಗೆ ಹಾಕಿದನೆಂದು ಪೌರಾಣಿಕ ಸಂಗತಿಗಳು ತಿಳಿಸುತ್ತದೆ. ಇಂದಿಗೂ

ಮೇಲುಕೋಟೆಯಲ್ಲಿ ನಡೆಯುವ ವೈರಮುಡಿ ಉತ್ಸವವನ್ನು ನೋಡಲು ಲಕ್ಷಾಂತರ ಭಕ್ತರು ದರ್ಶನ ಮಾಡುತ್ತಾರೆ. ಉತ್ತರ ಭಾರತದಲ್ಲಿಯೂ ಬೃಂದಾವನದ ಗರುಡ ಗೋವಿಂದ ದೇವಾಲಯದಲ್ಲಿ ಕೃಷ್ಣ ಮತ್ತು ಗರುಡನಿಗೆ ಪ್ರತ್ಯೇಕ ಗುಡಿಗಳಿವೆ. ಮತ್ತೊಂದು ಅಚ್ಚರಿಯ ಸಂಗತಿ ಎಂದರೆ ಪೂರಿ ಜಗನ್ನಾಥನ ದೇವಾಲಯದ ಮೇಲೆ ಅಂದರೆ ಆಕಾಶದಲ್ಲಿ ಯಾವುದೇ ಪಕ್ಷಿಗಳಾಗಲಿ ವಿಮಾನ ಗಳಾಗಲಿ ಸಂಚರಿಸು ವುದಿಲ್ಲ ಅಲ್ಲಿ ಗರುಡ ಸ್ಥಂಭ ಮಾತ್ರ ಇದೆ. ಪೂರಿಜಗನ್ನಾಥನ ದೇವಾಲಯದ ರಥೋತ್ಸವವು ಜಗತ್ ಪ್ರಸಿದ್ಧವಾದುದು. ಇಲ್ಲಿ ಪ್ರತಿ ವರ್ಷವೂ ಹೊಸ ಹೊಸದಾಗಿ ನಿರ್ಮಾಣಗೊಂಡ ರಥದಲ್ಲಿಯೇ ಜಗನ್ನಾಥನು ವಿಜೃಂಭಿಸು ತ್ತಾನೆ. ಎಂಬುದೇ ವಿಶೇಷತೆ ಆಂಧ್ರಪ್ರದೇಶದ ಅಹೋಬಿಲ ದಲ್ಲಿಯೂ ತಕ್ಷ್ಯಾದ್ರಿಯೆಂಬ (ಇಲ್ಲಿ ಗರುಡನಿಗೆ ನೃಸಿಂಹನು ದರ್ಶನ ನೀಡಿದ) ಪರ್ವತ ಶ್ರೇಣಿಇದೆ.

ಗರುಡನ ಮಹಿಮೆಯು ಭಾರತದೇಶದಲ್ಲಿ ಮಾತ್ರವಲ್ಲದೆ ನೇಪಾಳ ಇಂಡೋನೇಷಿಯಾ ಥಾಯ್‌ಲ್ಯಾಂಡ್ ಮುಂತಾದ ಹೊರ ರಾಷ್ಟ್ರಗಳಲ್ಲಿಯೂ ಕಂಡು ಬರುತ್ತದೆ. ನೇಪಾಳದಲ್ಲಿ ಸ್ವಯಂ ವಿಷ್ಣು ಪರಮಾತ್ಮನೇ ಬಂದು (ತ್ರಿವೇಣಿ 33007 , ನೇಪಾಳ)ರಾಜೇಂದ್ರ ಮೋಕ್ಷದ ಪ್ರಸಂಗವನ್ನು ಅಭಿನಯಿಸಿ ದನೆಂಬ ನಂಬಿಕೆ ಇಂದಿಗೂ ಪ್ರಚಲಿತವಾಗಿದೆ. ಅಷ್ಟೇ ಅಲ್ಲದೆ ನೇಪಾಳದ ಭಾಗ್‌ಮತಿ ನದಿಯ ನಡುವೆ ವಾಸುಕಿವೆಂಬ ಸರ್ಪವು ಗರುಡನಿಂದ ಸಂರಕ್ಷಿಸಲ್ಪಟ್ಟಿತು ಎಂದು ಪುರಾಣ ಗಳಲ್ಲಿ ಹೇಳಲ್ಪಟ್ಟಿದೆ. ಪಶುಪತಿಗಾಗಿ ದೇವಾಲಯದ ಬಳಿ ಇರುವ ಸ್ಥಳ ವನ್ನು ಇಂದಿಗೂ ವಾಸುಕಿ ಕ್ಷೇತ್ರ (ಭಾಸುಕಿ ಕ್ಷೇತ್ರ) ಎಂದು ಕರೆಯುತ್ತಾರೆ.

ಇಂಡೋನೇಷಿಯಾದಲ್ಲಿ 'ಗರುಡ ಪಂಕಶಿಲಾ' ಎಂಬುದೇ ರಾಷ್ಟ್ರದ ಚಿನ್ಹೆಯಾಗಿದೆ. ಈ ದೇಶದ ಸರ್ಕಾರದ ಚಿನ್ಹೆಯೇ ಗರುಡ ಪಕ್ಷಿಯದ್ದಾಗಿದೆ. ಇಲ್ಲಿನ ವೈಮಾನಿಕ, ನೌಕಾ, ಹಾಗೂ ರಕ್ಷಣಾ ಸಿಬ್ಬಂದಿಯವರ ಚಿನ್ಹೆಯು ಗರುಡನ ಪ್ರತಿಮೆಯದೇ ಆಗಿದೆ.

ಥಾಯಲ್ಯಾಂಡ್‌ನಲ್ಲಿಯೂ ಗರುಡಪಕ್ಷಿಯೇ ದೇಶದ ಚಿನ್ಹೆಯಾಗಿದೆ. ಸುಮಾರು ಸಾವಿರಾರು ವರ್ಷಗಳಿಂದಲೂ ಥಾಯಲ್ಯಾಂಡ್ ಸರ್ಕಾರವು ಗರುಡನನ್ನೇ ರಾಷ್ಟ್ರದ ಚಿನ್ಹೆ ಯಾಗಿ ಬಳುಸುತ್ತಿದೆ.

ಈಗ ಗರುಡನ ಬಗ್ಗೆ ಸಂಸ್ಕೃತಿದಲ್ಲಿರುವ ಶ್ಲೋಕವನ್ನು ನಾವು ಕಲಿಯೋಣ. ಇತರರಿಗೂ ಕಲಿಸೋಣ.

**ಶ್ಲೋಕ:**

ಅಮೃತ ಕಲಶ ಹಸ್ತಂ ಕಾಂತಿ ಸಂಪೂರ್ಣ ಗಾತ್ರಂ
ಸಕಲ ವಿಭುದ ವಂಧ್ಯಂ ವೇದ ಶಾಸ್ತ್ರೈರ ಚಿಂತ್ಯಮ್
ಕನಕರುಚಿತ ಪಕ್ಷಿಃ ದಿವ್ಯ ಮಾನಾದಕೋಲಮ್
ಸಕಲ ವಿಷ ವಿನಾಶಂ ಚಿಂತಯೇತ್ ಪಕ್ಷಿರಾಜಃ

ಕುಂಕುಮಾಂಕಿತ ವರ್ಣಾಯ ಕುಂದೇದು ಧವಳಾಯಚ
ವಿಷ್ಣುವಾಹನ ನಮಸ್ತುಭ್ಯಂ ಪಕ್ಷಿರಾಜಾಯತೇ ನಮಃ
ನಮಃ ಪನ್ನಗನಾಡ್ಡಾಯ ವೈಕುಂಠವಶವರ್ತಿನೇ
ಶ್ರುತಿ ಸಿಂಧು ಸುಧೋತ್ಪಾದ ಮಂದರಾಯ ಗರುತ್ಮತೇ

ಗರುಡನ ಪ್ರತಿಮೆಗಳಲ್ಲಿ ಗರುಡನು ಎಂಟು ಸರ್ಪ ಗಳನ್ನೇ ತನ್ನ ಆಭರಣವನ್ನಾಗಿ ಮಾಡಿಕೊಂಡಿರುವುದನ್ನು ನಾವು ಕಾಣಬಹುದು. ಅವುಯಾವುವೆಂದರೆ - ಕಿರೀಟದಲ್ಲಿರುವ ಸರ್ಪವನ್ನು ಅನಂತ

ಧರಿಸುವ ಜನಿವಾರ - ವಾಸುಕಿ

ಸೊಂಟದ ಸುತ್ತ - ತಕ್ಷಕ

ಕಂಠಾಭರಣ - ಕಾರ್ಕೋಟಕ

ಕರ್ಣಾಭರಣ (ಕಿವಿ) - ಪದ್ಮ ಮತ್ತು ಮಹಾಪದ್ಮ

ತೊಡೆಗಳಲ್ಲಿ - ಶಂಕಪಾಲ ಮತ್ತು ಕುಳಿತಾ

ಗರುಡನಿಗೆ ವಿವಿಧ ಹೆಸರುಗಳಿವೆ.

ಸುವರ್ಣ, ವೈನತೇಯ ಕಾಶ್ಯಪನಂದನ , ಪಕ್ಷಿರಾಜ, ತಾರ್ಕ್ಷ್ಯ,ಖಗರಾಜ, ಗರುತ್ಮಾನ್, ವೇದಾತ್ಮ, ವಿಹಗೇಶ್ವರ, ವೇದ ಸ್ವರೂಪಿ.

**ಶ್ರೀ ಕೃಷ್ಣಾರ್ಪಣಮಸ್ತು**



# ಶಾರೀರಿಕ ತಪಸ್ಸೇ ವಿಜಯದ ಪ್ರಥಮ ಮೆಟ್ಟಿಲು


ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್

9821914642

ಅನುವಾದ : ಡಿ.ಎಸ್.ಭೂಮಿಕ


ಈ ಜಗತ್ತಿನಲ್ಲಿ ಏನು ಸಾಧಿಸಬೇಕಾದರೂ ಮನುಷ್ಯನಿಗೆ ತಪೋಬಲವಿರಲೇಬೇಕು. ಅಸುರರು ಸಹ ಈ ಜಗತ್ತನ್ನಾಳುವ ಪ್ರಕ್ರಿಯೆಲ್ಲಿ ತೀವ್ರವಾದ ತಪಸ್ಸನ್ನಾಚರಿಸಿ ಅಪೂರ್ವವಾದ ಬಲಸಂಪನ್ನರಾದರೆಂದು ನಾವು ಪುರಾಣಗಳಿಂದ ಕೇಳಿ ತಿಳಿದಿದ್ದೇವೆ. ಅಸಲಿನಲ್ಲಿ ಈ ಜಗತ್ತು ಸೃಷ್ಟಿಸಲ್ಪಡುತ್ತಿರುವಾಗ ಮೊಟ್ಟ ಮೊದಲು ಕೇಳಿ ಬಂದ ಶಬ್ದ “ತಪ” ಎಂದು ನಾವು ಗುರುತಿಸಿಕೊಳ್ಳಬೇಕಾಗುತ್ತದೆ. ನಾರಾಯಣನ ನಾಭಿ ಮಂಡಲದಿಂದ ಉದ್ಭವಿಸಿದ ಬ್ರಹ್ಮದೇವನು ತನ್ನ ಕಾರ್ಯವೇನೆಂದು ತಿಳಿಯದೇ ಹೋಗಲು “ತಪ” ಎಂಬ ಶಬ್ದವು ಎರಡು ಬಾರಿ ಕೇಳಿಸಿದೆ. ಅದನ್ನು ಕೇಳಿದ ಬ್ರಹ್ಮದೇವನು ತಪಸ್ಸಿನಲ್ಲಿ ಪೂರ್ತಿಯಾಗಿ ಮುಳುಗಿ ನಂತರ ಸೃಷ್ಟಿ ಕಾರ್ಯವನ್ನು ಅದ್ಭುತ ರೀತಿಯಲ್ಲಿ ಮಾಡಿದ್ದಾನೆ. ಆದರೆ ಮನುಷ್ಯರು ದಾನವರು ಮಾಡಿದಂಥ ಘೋರ ತಪವನ್ನು ಮಾಡುವ ಅಗತ್ಯವಿಲ್ಲ. ಅವರು ಮೊಟ್ಟ ಮೊದಲು ಉತ್ತಮ ರೀತಿಯಲ್ಲಿ ಮೂರು ಬಗೆಯ ತಪಸ್ಸುಗಳನ್ನು ಆಚರಿಸಿ,ತಪೋ ಬಲವನ್ನು ಹೊಂದಿ ವಿಜಯವನ್ನು ಸಾಧಿಸಬಹುದೆಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ತಿಳಿಸಿದ್ದಾನೆ. ಶ್ರದ್ಧಾವಂತರಾದವರು. ಪ್ರಮುಖವಾಗಿ ಯುವ ಜನರು ಈ ವಿಷಯವನ್ನು ಗಮನಿಸಿ ಗೀತಾಚಾರ್ಯರು ಹೇಳಿದ ಮೂರು ವಿಧದ ತಪಸ್ಸುಗಳೇನ್ನೆನುವುದನ್ನು ತಿಳಿದುಕೊಳ್ಳುವುದು ಒಳಿತು.

ವಿಜಯದೆಡೆಗೆ ಸಾಗುವ ಹಾದಿಯಲ್ಲಿ ಇಡುವ ಪ್ರತಿ ಹೆಜ್ಜೆಯು ಶಾರೀರಿಕ ತಪೋಬಲದಿಂದ ಉಂಟಾಗುತ್ತದೆ. “ದೇವದೇವನನ್ನು ಬ್ರಾಹ್ಮಣರನ್ನು, ಗುರುವನ್ನು, ತಂದೆ ತಾಯಿಂದಿರಂತಹ ಹಿರಿಯರನ್ನು ಪೂಜಿಸುವುದು, ಶುಚಿಯಾಗಿರುವುದು, ಸರಳತೆಯು, ಬ್ರಹ್ಮಚರ್ಯವು ಅಹಿಂಸೆಯೆಂಬುವುವು ಈ ಶಾರೀರಿಕ ತಪಸ್ಸಿನಲ್ಲಿರುತ್ತವೆ ಎಂದು ಭಗವದ್ಗೀತೆ (17.14) ಹೇಳುತ್ತದೆ. ಪ್ರತಿ ಮನುಷ್ಯನು ಈ ತಪಸ್ಸನ್ನು ಪ್ರತಿನಿತ್ಯ ಮಾಡಬೇಕು. ಯುವಕರು ಆಗಾಗ ಇವುಗಳನ್ನು ಮಾಡುತ್ತಿರುವುದು ನಮಗೆ ಕಂಡು ಬರುತ್ತದೆ. ಉದಾಹರಣೆಗೆ ಭಗವಂತನಿಗೆ ನಮಿಸುವುದು. ತಾಯ್ತಂದೆಯರಿಗೆ ನಮಿಸುವುದು, ಮುಖ್ಯವಾಗಿ ಪರೀಕ್ಷೆಯ ವೇಳೆಯಲ್ಲಿ ಯುವಕರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹಾಗೆಯೇ ಹುಟ್ಟಿದ ದಿನ. ಹಬ್ಬ ಹರಿದಿನಗಳೊಂದೇ ಅಲ್ಲದೇ ಪರೀಕ್ಷೆಯಲ್ಲಿ ಉತ್ತಮವಾದ ರ‍್ಯಾಂಕನ್ನು ಪಡೆದು ದಿನ ಅಂತಹ ಸಂದರ್ಭಗಳಲ್ಲಿ ಸರ್ವೇ ಸಾಮಾನ್ಯವಾಗಿ ತಾಯ್ತಂದೆಯರ ಮೇಲೆ ಗೌರವವುಂಟಾಗುತ್ತದೆ. ಆದರೆ ಗೀತಾಚಾರ್ಯರ ಅನುಸಾರ ಭಗವಂತನು ಬ್ರಾಹ್ಮಣರ, ಗುರುಗಳ, ತಾಯ್ತಂದೆಯಂತಹ ಹಿರಿಯರನ್ನು ನಿತ್ಯವೂ ಪೂಜಿಸಬೇಕು. ಅವರನ್ನು ಭಕ್ತಿಯುತವಾಗಿ ನಮಸ್ಕರಿಸಬೇಕು - ಇದೇ ಶಾರೀರಿಕ ತಪಸ್ಸಿನ ಒಂದು ಭಾಗವು. ತಾಯ್ತಂದೆಯರಿಗೆ ನಮಸ್ಕರಿಸುತ್ತಲೇ ಅವರ ಬಾಯಿಂದ, ಹೃದಯದಿಂದ ಆಶೀರ್ವಾದವು ಲಭಿಸುತ್ತದೆ. ಪ್ರತಿನಿತ್ಯ ಹಿರಿಯರಿಗೆ ತಪ್ಪದೇ ನಮಸ್ಕರಿಸಬೇಕು. ಯಾರು ಈ ಕಾರ್ಯವನ್ನು ಒಂದು ತಿಂಗಳವರೆಗೆ ತಪ್ಪದೇ ನೆರವೇರಿಸುತ್ತಾರೋ ಅವರಿಗೆ ಗೀತಾಚಾರ್ಯರ ಮಹಿಮೆಯು ತಪ್ಪದೇ ತಿಳಿಯುತ್ತದೆ. ಗುಡಿಯಲ್ಲಿನ ಬ್ರಾಹ್ಮಣರಿಗೆ ನಮಿಸಿದರೆ ಸಿಗುವುದು ಆಶೀರ್ವಾದವೇ ಅಲ್ಲವೇ?

ಇದಲ್ಲದೇ ಶುಚಿ ಮತ್ತು ಸರಳತೆಗಳೂ ಸಹಾ ಶಾರೀರಿಕ ತಪಸ್ಸೆಂದೇ ಹೇಳಲ್ಪಟ್ಟಿದೆ. “ಶುಚಿ’ ಎನ್ನುವುದು ಬಾಹ್ಯ ಮತ್ತು ಆಂತರಿಕ ಶುದ್ಧಿಯನ್ನು ಸೂಚಿಸುತ್ತದೆ. ದಿನಕ್ಕೆರಡು ಬಾರಿ ಸ್ನಾನ ಮಾಡುವುದು ಬಾಹ್ಯ ಶುಚಿತ್ವವನ್ನು ತೋರಿದರೆ, ಪ್ರತಿನಿತ್ಯ ಕನಿಷ್ಟ 15 ನಿಮಿಷಗಳ ಕಾಲ ಭಗವದ್ಧ್ಯಾನದಲ್ಲಿ ಕಳೆದರೆ ಅದು ಆಂತರಿಕ ಶುದ್ಧಿಯ ಪ್ರತೀಕವಾಗುತ್ತದೆ. ಮೃದು ಸ್ವಭಾವವನ್ನು ಹೊಂದಿರುವುದು, ನೆಮ್ಮದಿಯಿಂದಿರುವುದು. ಸರಳತೆಯ ಎರಡು ಮುಖಗಳು. ಬ್ರಹ್ಮಚರ್ಯವೂ ಸಹಾ ಶಾರೀರಿಕ ತಪಸ್ಸೇ, ಇಂದಿಗೂ ವ್ರತ ನೇಮಗಳನ್ನಾಚರಿಸುವವರು ಈ ಬ್ರಹ್ಮಚರ್ಯವನ್ನು ಆಚರಿಸುವುದು ಕಂಡು ಬರುತ್ತದೆ. ಇದೇ ಗೀತೆ ಸಾರುವ ಸೂತ್ರ. ಯುವಕರು ಇವುಗಳನ್ನು ಪಾಲಿಸಿ ನಿರ್ಮಲ ಮನವನ್ನು ಹೊಂದಬೇಕು. ಹಾಗೆಯೇ ಅಹಿಂಸೆಯನ್ನು ಪಾಲಿಸಬೇಕು. ಮಾಂಸ ಭಕ್ಷಣೆ ಮಾಡದಿರುವುದೇ ಅಹಿಂಸೆಯ ಪಾಲನೆಯಾಗುತ್ತದೆ.

ಶಾಖಾಹಾರದ ದ್ವಾರ ಮನಸ್ಸು ನಿರ್ಮಲವಾಗಿರುತ್ತದೆ. ಶರೀರವು ಆರೋಗ್ಯಯುತವಾಗಿರುತ್ತದೆ. ಅದೊಂದು ತಪಸ್ಸಿನಂತಿರುತ್ತದೆ. ಈ ವಿಧವಾಗಿ ಶಾರೀರಿಕ ತಪಸ್ಸನ್ನಾಚರಿಸುವ ವ್ಯಕ್ತಿ ಖಚಿತವಾಗಿ ತಪೋಬಲ ಸಂಪನ್ನನಾಗಿ ವಾಂಛಿತ ಫಲಿತವನ್ನು ಸಾಧಿಸಿಕೊಳ್ಳುತ್ತಾರೆ. ಬೇಕಾದರೆ ಒಂದು ತಿಂಗಳ ಮಟ್ಟಿಗೆ ನೀವು ಈ ಶಾರೀರಿಕ ತಪಸ್ಸನ್ನು ಆಚರಿಸಿ ನೋಡಬಹುದು. ಗೀತಾಕಾರರ ಮಹಿಮೆ ನಿಮಗೇ ತಿಳಿದು ಬಿಡುತ್ತದೆ! ವಿಜಯೋಸ್ತು!

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ॥ | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ॥ | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ॥ | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ॥ | 2 | ರೂ. 1,000.00 |
| 5. | ಡೋಲೋತ್ಸವ ( ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ॥ | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ॥ | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ॥ | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ॥ | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ॥ | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ॥ | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ॥ | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ॥ | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ॥ | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ॥ | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ॥ | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ॥ | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ॥ | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ॥ | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ॥ | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ॥ | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ॥ | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ॥ | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ॥ | 1 | ರೂ. 300.00 |

Call Centre : 0877–2233333, 0877–2277777
Toll free : 18004254141, 1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.

# ಆರೋಗ್ಯ ಸಂರಕ್ಷಣೆಗೆ ಹವೀಜ

- ಮೂಲ : ಡಾ ॥ ಸಿ. ಮಧುಸೂದನಶರ್ಮ
9000761390
ಅನುವಾದ - ಶ್ರೀಮತಿ

"ವಿಶಿಷ್ಟ ಮಿಷ್ಟ ಸಂಸ್ಕಾರೈಃ ಪಥ್ಯೈರಿಷ್ಟೈ ರಸಾಧಿಭಿಃ।
ಮದೋನೋ ಶುಚಿ ನಾತ್ಯುಷ್ಣಮಶನಂ ಹಿತಂ ॥"

-ಎಂದು ಆಯುರ್ವೇದ ವೈದ್ಯಗ್ರಂಥವೆನಿಸಿಕೊಂಡ ಸುಶ್ರುತ ಸಂಹಿತೆಯು ಪ್ರಮಾಣವಾಕ್ಯಾಗಿ ತಿಳಿಸುತ್ತದೆ. ಅಂದರೆ ಶ್ರೇಷ್ಠವಾದುದೂ, ಸಂಸ್ಕರಿಸಲ್ಪಡುವುದೂ,ಮನಸ್ಸು - ಶರೀರಗಳಿಗೆ ಹಿತಕರವಾದುದೂ ಇಷ್ಟವಾದ ರುಚಿಗಳಿಂದ ಮನೋಹಾರವಾಗಿರುವುದೂ, ಶುಚಿ - ಶುಭ್ರತೆಗಳಿಂದ ಕೂಡಿರುವುದೂ ತಾಜಾ ಇರುವ ಆಹಾರ ಸೇವನೆಗೆ ಯೋಗ್ಯವಾದುದು ಎಂದು ಸ್ಥೂಲ ಅರ್ಥದಲ್ಲಿ ಹೇಳಬಹುದು. ಇಂತಹ ಆಹಾರ ಪದಾರ್ಥಗಳನ್ನು ಅಡುಗೆಗಳಲ್ಲಿ ಬಣ್ಣ,ರುಚಿ, ಸುವಾಸನೆಗಳಿಗಾಗಿ ಬಳಸುವ ಇನ್ನಿತರ ದಿನಸಿಗಳಲ್ಲಿ ದನಿಯಾ ಮತ್ತಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನಾವು ನಿತ್ಯ ದೈನಂದಿನ ಬದುಕಿನಲ್ಲಿ ಎದುರುಗೊಳ್ಳುವ ಅನೇಕಾನೇಕ ಅನಾರೋಗ್ಯ ಸಮಸ್ಯೆಗಳನ್ನು ಕೊನೆಗಾಣಿಸುವ ಔಷಧೀಯ ಗುಣಗಳು ಕೂಡಾ ಈ ಧನಿಯಾದಲ್ಲಿಯೆಂದರೆ ಅತಿಶಯೋಕ್ತಿಯಾಗಲಾರದು.

ಈ ಹವೀಜವನ್ನು ಸಂಸ್ಕೃತದಲ್ಲಿ 'ಧಾನ್ಯಕ' ಎಂದು ವಿವರಿಸುತ್ತಾರೆ. 'ಅಂಬೆಲ್ಲಾಪೇರಿ' ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಇದನ್ನು 'ಕೊರಿಯಾಂಡರ್' ಎಂದು ಇಂಗ್ಲೀಷ್‌ನಲ್ಲಿ ಬಳಸುತ್ತಾರೆ. ಇದರ ಶಾಸ್ತ್ರೀಯ ನಾಮಧೇಯ 'ಕೋರಿಯಾಂಡರ್ ಸೆಟೈವಂ'.

ಹವೀಜವನ್ನು ಪುಡಿಯಾಗಿಸಿ ಔಷಧಿಯಾಗಿ ಬಳಸಬಹುದು.

**1. ಹೊಟ್ಟೆಯಲ್ಲಿ ಉರಿ ಮತ್ತು ತಲೆ ಸುತ್ತುವಿಕೆಗೆ**

ಹವೀಜದ ಚೂರ್ಣ 50 ಗ್ರಾಂ. ಜೀರಿಗೆಯನ್ನು ಸೇರಿಸಿ ಪುಡಿ ಮಾಡಿದ ಚೂರ್ಣ ಸ್ಪಟಿಕ ಬೆಲ್ಲದ ಪುಡಿ ಇವುಗಳನ್ನು ಒಂದೊಂದು 50 ಗ್ರಾಂ ನಂತೆ ತೆಗೆದುಕೊಂಡು ಕಲಿಸಿಟ್ಟುಕೊಂಡು ಮುಂಜಾನೆ - ಸಂಜೆ 2-3 ಗ್ರಾಂ ಪುಡಿಯನ್ನು 50 ಮಿ.ಲೀ ನೀರಿನಲ್ಲಿ ಕಲಿಸಿ ಸೇವಿಸಬೇಕು.



**2. ಮೊಡವೆಗಳಿಗೆ**

ಹವೀಜ ಚೂರ್ಣದಲ್ಲಿ ಆಯುರ್ವೇದ ಔಷಧಾಲಯದಲ್ಲಿ ಲಭಿಸುವ ಪಚಚೂರ್ಣ,ಸುಗಂಧಿಪಾಲ ಚೂರ್ಣಗಳನ್ನು ಸಮಾನವಾಗಿ ಕಲಿಸಿಟ್ಟುಕೊಂಡು ದಿನಕ್ಕೊಂದು ಬಾರಿ ತಕ್ಕಷ್ಟು ನೀರನ್ನು ಬೆರಸಿ ಪೇಸ್ಟಿನಂತೆ ಮಾಡಿ ಮುಖದ ಮೇಲೆ ಲೇಪನ ಮಾಡಿ ಒಂದು ತಾಸು ಬಿಟ್ಟು ತೊಳೆಯಬೇಕು. ಹೀಗೆ ಬಳಸುವುದರಿಂದ ಮೊಡವೆಗಳು ತಗ್ಗುವುದೊಂದೇ ಅಲ್ಲದೇ ಮುಖದ ಮೇಲೆ ಬರುವ ಮಚ್ಚೆಗಳನ್ನು ಸಹಾ ತಗ್ಗಿಸಿ ಮುಖವನ್ನು ಕಾಂತಿಯುತವನ್ನಾಗಿ ಮಾಡುತ್ತದೆ.

**3. ಸ್ತ್ರೀಯರಲ್ಲಿ ಅಧಿಕ ಋತುಸ್ರಾವ ಸಮಸ್ಯೆಗೆ**

ಹವೀಜದ ಪುಡಿ ಕಲ್ಲುಸಕ್ಕರೆ ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ಮೂರು ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಉತ್ತಮ ಫಲಿತಾಂಶ ಕಂಡು ಬರುತ್ತದೆ. ಈ ಔಷಧವನ್ನು ಇದೇ ರೀತಿಯಲ್ಲಿ ಸೇವಿಸುತ್ತಿದ್ದರೆ ಬಾಯಿ-ಮೂಗು ಮಲದ್ವಾರದಿಂದ ರಕ್ತ ಸ್ರಾವವಾಗುವ ಸಮಸ್ಯೆಯನ್ನು ತಡೆಗಟ್ಟಬಹುದು.

**4. ಅಧಿಕ ಉಷ್ಣಕ್ಕೆ**

ಹವೀಜದ ಪುಡಿ 50 ಗ್ರಾಂ ಗಸಗಸೆಯೊಂದಿಗೆ ಸೇರಿಸಿ ಮಾಡಿದ ಪುಡಿ 50 ಗ್ರಾಂ ಒಣದ್ರಾಕ್ಷಿ 100 ಗ್ರಾಂ, ಆಯುರ್ವೇದ ಔಷಧಾಲಯಗಳಲ್ಲಿ ದೊರಕುವ ಅತಿ ಮಧುರ ಚೂರ್ಣ 100 ಗ್ರಾಂ ಕಲಿಸಿ ಮಿಕ್ಸಿಯಲ್ಲಿ ಹಾಕಿ ಚೆನ್ನಾಗಿ ಕಲಿಸಿ ಹಿಟ್ಟಿನಂತೆ ಮಾಡಿ ನಂತರ ಅರ್ಧ ಕಿಲೋ ಸ್ವಚ್ಛವಾದ ಆಕಳತುಪ್ಪ ವನ್ನು ಹಾಕಿ ಕಲಿಸಿಟ್ಟುಕೊಂಡು ದಿನನಿತ್ಯ ಎರಡು ಬಾರಿ, ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಸೇವಿಸಿ ನಂತರ 100 ಮಿ.ಲೀ. ಹಾಲು ಸೇವಿಸುತ್ತಿದ್ದರೆ ಕಣ್ಣುರಿ, ಮೂತ್ರ, ಮಲದ್ವಾರದ ಉರಿ,

ಕೈಕಾಲಿನ ಉರಿ, ಶರೀರ ಉರಿಯಾಗಿರುವುದು, ಬಾಯಲ್ಲಿ ಜೊಲ್ಲು ಹುಣ್ಣು ಬರುವುದು ಮೊದಲಾದ ತೊಂದರೆ ಗಳು ಕೂಡಾ ಶಮನಗೊಳ್ಳುತ್ತದೆ.

### 5. ನಿದ್ರೆಯಲ್ಲಿ ಮೂತ್ರ ವಿಸರ್ಜನೆ

ಹವೀಜ, ಒಣಗಿದ ದಾಳಿಂಬೆ ಹೂಗಳು,ಮರದ ಅಂಟು, ಪುಡಿಮಾಡಿದ ಕರಿಎಳ್ಳು, ಸ್ಪಟಿಕ ಬೆಲ್ಲದ ಚೂರ್ಣ ಗಳನ್ನು ಒಂದೊಂದು 25 ಗ್ರಾಂ ಜೀರಿಗೆ, ತೆಗೆದುಕೊಂಡು ಎಲ್ಲವನ್ನೂ ಕಲಿಸಿ ಸಂಗ್ರಹಿಸಿಟ್ಟುಕೊಂಡು ಮುಂಜಾನೆ - ಸಂಜೆ 2-3 ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸಬೇಕು. ಮಕ್ಕಳಿಗೆ ಒಂದು ಗ್ರಾಂ ಪುಡಿಸಾಕು.

### 6. ಪಾದಗಳ - ಮೊಡವೆಗಳ ಬಿರುಕಿಗೆ

ದಿನಕ್ಕೊಂದು ಬಾರಿ 200 ಮಿ.ಲೀ. ನೀರಿನಲ್ಲಿ 5 ಗ್ರಾಂ ಹವೀಜ, 5 ಗ್ರಾಂ ಜೀರಿಗೆ, 2-3 ಗ್ರಾಂ ಕಲ್ಲು ಸಕ್ಕರೆ ಗುಲಗಂಜಿಯಷ್ಟು ಒಣಗಿಸಿದ ಶುಂಠಿಯನ್ನು ತುಂಡುಗಳನ್ನು 100 ಮಿ.ಲೀ. ನೀರು ಮಿಗುಲುವಂತೆ ಮರಳಿಸಿ, ಬಿಸಿಯಾರಿದ ನಂತರ ಶೋಧಿಸಿ ಸೇವಿಸುತ್ತಿರಬೇಕು. ಇದರಿಂದ ರಕ್ತವು ಶುದ್ಧೀಕರಣಗೊಂಡು ಬಗೆಬಗೆಯ ಚರ್ಮ ವ್ಯಾಧಿಗಳು ತಗ್ಗಿ ಹೋಗುತ್ತದೆ.

### 7. ಗೌಟ್‌ಗೆ

ದಿನವೂ ಎದ್ದಕೂಡಲೇ 200 ಮಿ.ಲೀ. ನೀರಿನಲ್ಲಿ 2-3 ಗ್ರಾಂ ಧನಿಯ ಪುಡಿಯನ್ನು, 2-3 ಗ್ರಾಂ ಪುಡಿಮಾಡಿದ ಒಣದ್ರಾಕ್ಷಿ ಹಾಕಿ 100 ಮಿ.ಲೀ.ನೀರು ಉಳಿಯುವಂತೆ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಸೋಸಿ ಸೇವಿಸುತ್ತಿದ್ದರೆ ಶರೀರದಲ್ಲಿ ಅಧಿಕವಾಗಿ ಉತ್ಪನ್ನವಾಗುವ ಯೂರಿಕ್ ಆಸಿಡ್ ಎಂಬ ರಾಸಾಯನಿಕ ಕುಗ್ಗಿ 'ಗೌಟ್' ವ್ಯಾಧಿ ಕಡಿಮೆಯಾಗುತ್ತದೆ.

### 8. ಅಪಾನವಾಯು ಸಮಸ್ಯೆಗೆ

ಹವೀಜ, ಜೀರಿಗೆ, ಮೆಣಸು, ಹಿಪ್ಪೆಯ ಚೂರ್ಣಗಳನ್ನು ಒಂದೊಂದನ್ನು 25 ಗ್ರಾಂನಂತೆ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ 100 ಮಿ.ಲೀ ಉಗುರು ಬೆಚ್ಚಗಿನ ನೀರಿನಲ್ಲಿ 2-3 ಗ್ರಾಂ ಈ ಚೂರ್ಣವನ್ನು 2-3 ಗ್ರಾಂ ಉಪ್ಪು ಅರ್ಧ ಹೋಳು ನಿಂಬೆರಸ ಕಲಿಸಿ ಸೇವಿಸುತ್ತಿದ್ದರೆ ತ್ವರೆಯಾಗಿ ಈ ಸಮಸ್ಯೆ ತಗುತ್ತದೆ.

### 9. ತಲೆ ತಿರುಗುವುದಕ್ಕೆ

ಬೆಳಗ್ಗೆ ಒಂದು ಮಣ್ಣಿನ ಪಾತ್ರೆಯಲ್ಲಿ 200 ಮಿ.ಲೀ. ನೀರು ಹಾಕಿ ಅದರಲ್ಲಿ ಒಂದು ಟೀ ಸ್ಪೂನ್ ಒಡೆದ ಹವೀಜ,





ನೆಲ್ಲಿಯ ಹೋಳುಗಳು ಹಾಕಿ ರಾತ್ರಿಯವರೆಗೆ ನೆನೆಸಿ ಶೋಧಿಸಿ ಆ ನೀರನ್ನು ಕುಡಿಯಬೇಕು.ಹಾಗೆಯೇ ರಾತ್ರಿ ಸಹಾ ಇದೇ ರೀತಿಯಾಗಿ ನೀರಿನಲ್ಲಿ ನೆನೆಸಿ ಬೆಳಗ್ಗೆ ಹೊತ್ತು, ಶೋಧಿಸಿ ಸೇವಿಸುತ್ತಿದ್ದರೆ ಸಮಸ್ಯೆಯು ಶೀಘ್ರದಲ್ಲೇ ಕಡಿಮೆಯಾಗುತ್ತದೆ.

### 10. ಜ್ಞಾಪಕ ಶಕ್ತಿ ವೃದ್ಧಿಸಲು

ಹವೀಜ ಸೋಂಪು, ಎಲಕ್ಕಿ, ಸುಲಿದ ಬಾದಾಮಿ ಬೀಜಗಳು, ಸ್ಪಟಿಕ ಬೆಲ್ಲ ಚೂರ್ಣಗಳನ್ನು ಒಂದೊಂದನ್ನು 30 ಗ್ರಾಂ ನಂತೆ ಕಲಿಸಿಟ್ಟುಕೊಂಡು ದಿನವೂ ಮಲಗುವಾಗ 100 ಮಿ.ಲೀ. ಉಗುರು ಬೆಚ್ಚಗಿನ ಹಾಲಿನಲ್ಲಿ 2-3 ಗ್ರಾಂ ಪುಡಿಯನ್ನು ಹಾಕಿ, ಕಲಿಸಿ ಸೇವಿಸುತ್ತಿದ್ದರೆ ಜ್ಞಾಪಕಶಕ್ತಿ, ಏಕಾಗ್ರತೆ, ಧಾರಣ - ಸ್ಮರಣ ಶಕ್ತಿ ವೃದ್ಧಿಸುತ್ತವೆ. ಮಾನಸಿಕ ಪ್ರಶಾಂತತೆಯುಂಟಾ ಗುತ್ತದೆ.

**ಸೂಚನೆ:** ಸುಲಿದ ಬಾದಾಮಿ ಬೀಜಗಳನ್ನು 1-2 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಸುಲಿದು ಪುಡಿಮಾಡಿ ಬಳಸಬೇಕು.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು
☐ ಹಿಂದೀ ☐ ತಮಿಳು
☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ : ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - *517 507*".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸು ವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲ ವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳ ಬೇಕು. ನಿಮ್ಮ ಪೂರ್ಣವಿಳಾಸ ಕಂ ಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

**ಅ.** ತಾವು ಹಳೆಯ ಚಂದಾ ದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸು ವುದು.

**ಆ.** ಇದರಲ್ಲಿ ನಿಮ್ಮ ಊರಿನ ಪೂರ್ತಿವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳ ಬೇಕು.

**ಇ.** ನಿಮಗೆ ಬೇಕಾದ ಭಾಷೆ ಯನ್ನು ಖಚಿತವಾಗಿ ನಮೂದಿಸ ಬೇಕು.

ಇವೆಲ್ಲ ವಿವರಗಳನ್ನೂ ಸರಿ ಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇ ಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**



*Edited and Published on behalf of T.T.Devasthanams by **Prof. K.Rajagopalan**, Phd., Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.*

ಹಕ್ಕಿಯ ಹೆಗಲೇರಿ ಬಂದವಗೆ
ನೋಡಕ್ಕಾ ಮನಸೋತೆ ನಾನವಗೆ
ಸತ್ರಾಜಿತನ ಮಗಳೆತ್ತಿದ ಉನ್ಮತ್ತ ನರಕನೊಳು ತಾ ಕಾದಿದ
ಮತ್ತೆ ಕೆಡಹಿದ ಅವನಂಗವ ಸತಿಗಿತ್ತನು ತಾ ಆಲಿಂಗನವ॥
ಹದಿನಾರುಸಾವಿರ ನಾರಿಯರ ಸೆರೆ ಮುದದಿಂದಬಿಡಿಸಿ ಮನೋಹರ
ಅದಿತಿಯ ಕುಂಡಲ ಕಳಿಸಿದ ಹರ್ ವಿಧಿಸುರನೃಪರನು ಸಲಹಿದ॥
ಉತ್ತಮ ಪ್ರಾಗ್ಜ್ಯೋತಿಷಪುರವ ಭಾಗದಟ್ಟಗೆ ಕೊಟ್ಟ ವರಾಭಯವ
ಕರ್ತಕೃಷ್ಣಯ್ಯಾನ ನಂಬಿದೆ ಶ್ರೀ ಮೂರ್ತಿಯ ಪಾದವ ಹೊಂದಿದೆ॥
ನರಕಚತುರ್ದಶಿ ಪರ್ವದ ದಿನ ಹರುಷದಿ ಪ್ರಕಟಾದನು ದೇವ
ಶರಣಾಗತ ಜನ ವತ್ಸಲಾ ರಂಗ ಪರಮ ಭಾಗವತರ ಪರಿಪಾಲ॥
ಹೊಗಳಿ ಕೃಷ್ಣಯ್ಯನ ಮಹಿಮೆಯ ಮುಕ್ತಿ ನಗರದ ಅರಸನ ಕೀರ್ತಿಯಾ
ಜಗದೀಶ ಪ್ರಸನ್ವೆಂಕಟೇಶನೂ ಭಕ್ತಫಹಾರಿ ರವಿಕೋಟಿ ಪ್ರಕಾಶನು॥



**ಗರುಡಪಂಚಮಿ**
**25-07-2020**



SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 30-07-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020



ತಿರುಮಲೆ ಸ್ವಾಮಿಯವರ ಪವಿತ್ರೋತ್ಸವ
30-07-2020 ರಿಂದ 01-08-2020 ರ ವರೆಗೆ